ಸಂವಾದ



ಸಂವಾದ

ಸಾಹಿತ್ಯಿಕ, ಸಾಂಸ್ಕೃತಿಕ ಸಂಕಲನ

- ○ **ನಮ್ಮ ಸಾಹಿತ್ಯ ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ**
- ○ **ವಸ್ತುನಿಷ್ಠ ಸತ್ಯದ ಅವಿಷ್ಕಾರಕ್ಕೆ**

ಸಂಪಾದಕರು ;

ರಾಘವೇಂದ್ರ ಪಾಟೀಲ, ಡಿ. ಎಸ್. ನಾಗಭೂಷಣ, ವೈ. ಮಂಜಪ್ಪ, ಸ. ಉಷಾ, ಜಿ. ಪಿ. ಬಸವರಾಜು, ಜಿ. ಎಲ್. ರಾಮಪ್ಪ

ಸಹಾಯ :

ಎನ್. ಎಸ್. ಚಿದಂಬರರಾವ್

- ○ ಆಜೀವ ಸದಸ್ಯತ್ವ : ರೂ. 200/–
- ○ ಐದು ವರ್ಷದ ಚಂದಾ : ರೂ. 100/–
- ○ ಒಂದು ವರ್ಷಕ್ಕೆ ಚಂದಾ : ರೂ. 25/–

(ಬ್ಯಾಂಕುಗಳ ಚೆಕ್ಕು, ಡ್ರಾಫ್ಟು ಕಳುಹಿಸುವವರು ಐದು ರೂ. ಸೇರಿಸಿ ಕಳಿಸಬೇಕು)

ಮುಖಪುಟದ ಚಿತ್ರ ;

ಶಂಕರಪಾಟೀಲ್

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೩

ಈ ಸಂಕಲನದ ಸಂಪಾದಕರು
ರಾಘವೇಂದ್ರ ಪಾಟೀಲ

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ.

ಈ ಸಂಚಿಕೆಯ ಲೇಖಕರು ;

* **ಬಿ. ವಿ. ವೀರಭದ್ರಪ್ಪ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಎ. ವಿ. ಕೆ. ಕಾಲೇಜು, ದಾವಣಗೆರೆ, ಚಿತ್ರದುರ್ಗ ಜಿಲ್ಲೆ.
* **ಚಂದ್ರಶೇಖರ ತಾಳ್ಯ,** ತರ್ಕಶಾಸ್ತ್ರದ ಉಪನ್ಯಾಸಕರು, ಕೆ. ಎನ್. ಪದವಿ ಪೂರ್ವ ಕಾಲೇಜು, ಹೊಳಲ್ಕೆರೆ ಚಿತ್ರದುರ್ಗ ಜಿಲ್ಲೆ.
* **ಯಶವಂತ ಚಿತ್ತಾಲ,** Band Stand Apartments 212-A, BAND STAND, BANDRA BOMBAY-400050
* **ಸ. ಉಷಾ,** ಅಧ್ಯಾಪಕರು, ಕನ್ನಡ ವಿಭಾಗ ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ.
* **ರಾಮಗಿರಿ ರವೀಂದ್ರ,** ಶಿರಳಚ್ಚುಗಾರರು, ರೇಷ್ಮೆ ಸಹಾಯಕ ಅಧಿಕಾರಿಯವರ ಕಛೇರಿ, ತ್ಯಾಗರಾಜನಗರ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.
* **ಎಚ್. ಪ್ರೇಮಲೀಲಾ**
* **ಜಯಂತ ಕಾಯ್ಕಿಣಿ,** 2-ದಿ-57, ವೈಶಾಲಿ ನಗರ, ಬಾಲರಾಜೇಶ್ವರ ರೋಡ್ ಮುಳುಂದ (west) ಬೊಂಬಾಯಿ-80
* **ದಿವಂಗತ ಬೆಟಗೇರಿ ಕೃಷ್ಣಶರ್ಮ** [ಆನಂದಕಂದ]
* **ಮುಕುಂದ ಜೋಶಿ,** A-6 Sejal Apartment Devidayal Rd., Mulund (west) Bombay-400080.
* **ಗೌರೀಶ ಕಾಯ್ಕಿಣಿ,** ಮಣಿಭದ್ರ ರಸ್ತೆ, ಗೋಕರ್ಣ-581326.
* **ಅನುಪಮಾ ನಿರಂಜನ,** ನಂ. 515, 7th ಮೇನ್, 5 ನೆ ಬ್ಲಾಕ್, ಜಯನಗರ ದಕ್ಷಿಣ ಬೆಂಗಳೂರು-41.
* **ರಾಘವೇಂದ್ರ ಪಾಟೀಲ,** ಜೀವಶಾಸ್ತ್ರದ ಉಪನ್ಯಾಸಕ ಪದವಿ ಪೂರ್ವ ಕಾಲೇಜು, ಮಲ್ಲಾಡಿಹಳ್ಳಿ-577531

ಹಿಂದು ಧರ್ಮ,

ರಾಂ ಮನೋಹರ ಲೋಹಿಯ
ಅನು : ಬಿ. ವಿ. ವೀರಭದ್ರಪ್ಪ

ಉದಾತ್ತತೆ ಮತ್ತು ಮತಾಂಧತೆಗಳ ಸಂಘರ್ಷ :

ಭಾರತ ಇತಿಹಾಸದ ಅತಿದೊಡ್ಡ ಸಮರ ಕಳೆದ 5000 ಕ್ಕಿಂತ ಹೆಚ್ಚು ವರ್ಷಗಳಿಂದ ನಡೆಯುತ್ತಲೇ ಇದೆ. ಅದರ ಅಂತ್ಯ ಇನ್ನೂ ಕಣ್ಣಿಗೆ ಕಾಣುತ್ತಿಲ್ಲ. ಆ ಸಮರ ಹಿಂದು ಧರ್ಮದೊಳಗಿನ ಉತ್ತಾತ್ತರ ಮತ್ತು ಮತಾಂಧರ ನಡುವಿನದಾಗಿದೆ. ಭಾರತದ ಇತಿಹಾಸವನ್ನು ನೋಯಲು ಈ ಯುದ್ಧವನ್ನು ಮಗ್ಗವನ್ನಾಗಿ ಬಳಸಿಕೊಳ್ಳುವ ಯತ್ನ ಮಾಡಬೇಕಾಗಿತ್ತು. ಆದರೆ ಅಂತಹ ಪ್ರಯತ್ನ ಮಾಡಲಾಗಿಲ್ಲ. ಇತಿಹಾಸದ ಗ್ರಂಥಗಳಲ್ಲಿ ಅದರ ಪ್ರಾಸಂಗಿಕ ಉಲ್ಲೇಖವೂ ಅಪರೂಪವಾಗಿದೆ ಮತ್ತು ಸ್ಥೂಲವಾದುದಾಗಿದೆ. ಆದರೆ ಈ ದೇಶದೊಳಗೆ ನಡೆಯುವ ಎಲ್ಲ ಚಟುವಟಿಕೆಯ ಕೇಂದ್ರ ಅದೇ ಆಗಿದೆ.

ಎಲ್ಲ ಧರ್ಮಗಳು ತಮ್ಮ ಬೆಳವಣಿಗೆಯಲ್ಲಿ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಘರ್ಷಣೆಯಿಂದ ತೊಂದರೆಗೀಡಾಗಿವೆ. ಆದರೆ ಹಿಂದು ಧರ್ಮವನ್ನು ಹೊರತುಪಡಿಸಿ ಉಳಿದೆಲ್ಲಾ ಧರ್ಮಗಳು ಇಬ್ಭಾಗವಾಗಿ ಅನೇಕ ವೇಳೆ ರಕ್ತ ಹರಿಸಿವೆ; ಸ್ವಲ್ಪ ಅಥವಾ ದೀರ್ಘಕಾಲದ ಹತ್ಯಾಕಾಂಡದ ನಂತರ ಸಂಘರ್ಷವನ್ನು ಮೆಟ್ಟಿ ನಿಂತಿವೆ. ಹಿಂದು ಧರ್ಮದಲ್ಲಿ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ನಿರಂತರ ತಾಕಲಾಟ ಮುಂದುವರಿಯುತ್ತಾ ಬಂದಿದೆ. ಹೊರನೋಟಕ್ಕೆ ಹತ್ಯಾಕಾಂಡ ನಡೆದಿಲ್ಲವಾದರೂ ಸಂಘರ್ಷಕ್ಕೆ ಪರಿಹಾರ ಇಂದಿಗೂ ದೊರಕಿಲ್ಲ. ಸಮಸ್ಯೆಯ ಮೂಲ ಕಾರಣಗಳ ಸುತ್ತ ಒಂದು ಮಂಜಿನತೆರೆ ಮುಚ್ಚಿಕೊಂಡಿದೆ.

ಕ್ರೈಸ್ತ, ಇಸ್ಲಾಂ ಮತ್ತು ಬೌದ್ಧ ಧರ್ಮಗಳು ಇಬ್ಭಾಗವಾಗಿವೆ. ಕೆಥೊಲಿಕ್ ಧರ್ಮದಲ್ಲಿ ಒಂದು ಕಾಲದಲ್ಲಿದ್ದ ಮತಾಂಧ ಗುಂಪುಗಳು ಒಟ್ಟುಗೂಡಿ ಆಗ ಉದಾತ್ತವೆಂದು ಪರಿಗಣಿಸಲಾದ ಪ್ರಾಟೆಸ್ಟಾಂಟ್, ಸವಾಲನ್ನು ಎದುರಿಸಬೇಕಾಯಿತು. ಆದರೆ ಪ್ರತಿಯೊಂದು ಸುಧಾರಣೆ ತನ್ನದೇ ಆದ ವಿರೋಧಿ ಸುಧಾರಣೆಗೆ ದಾರಿ

ಮಾಡಿಕೊಡುತ್ತದೆಂದು ಎಲ್ಲರಿಗೂ ತಿಳಿದಿದೆ. ಕೆಥೊಲಿಕ್ ಮತ ಮತ್ತು ಪ್ರಾಟೆಸ್ಟಾಂಟ್ ಮತಗಳು ತಮ್ಮ ಅನೇಕ ತತ್ವಗಳಲ್ಲಿ ವ್ಯತ್ಯಾಸಗಳನ್ನು ಇನ್ನೂ ಹೊಂದಿವೆ. ಆದರೆ ಅವುಗಳಲ್ಲಿ ಒಂದನ್ನು ಉದಾತ್ತ ಮತ್ತು ಇನ್ನೊಂದನ್ನು ಮತಾಂಧ ಎಂದು ಕರೆಯುವುದು ಕಷ್ಟವಾಗುತ್ತದೆ. ಕ್ರೈಸ್ತ ಧರ್ಮವು ತತ್ವಗಳ ಮತ್ತು ಸಂಘಟನೆಯ ಆಧಾರದ ಮೇಲೆ ಇಬ್ಭಾಗವಾಗಿದ್ದರೆ ಇಸ್ಲಾಮಿನ ಷಿಯ – ಸುನ್ನಿ ಇಬ್ಭಾಗವು ಕಾಲಾನುಕ್ರಮಣಿಕೆಯ ವಿವರದ ಆಧಾರದ ಮೇಲೆ ಇಬ್ಭಾಗವಾಗಿದೆ. ಅದೇ ರೀತಿ ಬೌದ್ಧ ಧರ್ಮವು ಹೀನಯಾನ ಮತ್ತು ಮಹಾಯಾನಗಳಾಗಿ ವಿಭಾಗವಾಗಿದೆ. ಅವು ಎಂದೂ ಒಂದು ಇನ್ನೊಂದರ ರಕ್ತಕ್ಕಾಗಿ ಹಂಬಲಿಸಿಲ್ಲವಾದರೂ ಅವುಗಳ ವ್ಯತ್ಯಾಸ ತಾತ್ವಿಕವಾದುದಾಗಿದ್ದು ಸಾಮಾಜಿಕ ಸಂಘಟನೆಯೊಡನೆ ಯಾವುದೇ ಸಂಬಂಧ ಹೊಂದಿಲ್ಲ.

ಹಿಂದು ಧರ್ಮದಲ್ಲಿ ಅಂತಹ ಇಬ್ಭಾಗ ಎಂದೂ ಆಗಿಲ್ಲ. ವಾಸ್ತವವಾಗಿ ಅದು ನಿರಂತರವಾಗಿ ಮತಪಂಗಡಗಳಾಗಿ ವಿಘಟನೆಗೆ ಒಳಗಾಗುತ್ತಾ ಬಂದಿದೆ. ಹೊಸದಾಗಿ ಹುಟ್ಟಿದ ಮತ ಅನೇಕ ಸಾರಿ ಇನ್ನೊಂದು ಪಂಗಡವಾಗಿ ಹಿಂದು ಧರ್ಮಕ್ಕೇ ಹಿಂದಿರುಗಿದೆ. ಆದ್ದರಿಂದ ತಾತ್ವಿಕ ಸಮಸ್ಯೆಗಳನ್ನು ಕಟ್ಟುನಿಟ್ಟಾಗಿ ವಾಖ್ಯಾನಿಸಿಲ್ಲ ಮತ್ತು ಸಾಮಾಜಿಕ ಬಿಕ್ಕಟ್ಟುಗಳು ಪರಿಹಾರ ಕಾಣದೆ ಹಾಗೇ ಉಳಿದಿವೆ. ಹೊಸ ಮತಪಂಗಡಗಳಿಗೆ ಜನ್ಮ ನೀಡುವಲ್ಲಿ ಹಿಂಧು ಧರ್ಮವು ಪ್ರಾಟೆಸ್ಟಾಂಟ್ ಧರ್ಮದಷ್ಟೇ ಸಂಪದ್ಭರಿತವಾಗಿದ್ದರೂ ಕೆಥೊಲಿಕ್ ಸಂಘಟನೆಯು ಒಳಪಂಗಡಗಳನ್ನು ನಿಷೇಧಿಸುವಂತೆಯೇ ಹಿಂದು ಧರ್ಮವೂ ಖಚಿತವಲ್ಲದ ವಾಖ್ಯಾನದಿಂದ ತನ್ನ ಎಲ್ಲ ಒಳಪಂಗಡಗಳನ್ನು ಏಕತೆಯ ಮುಸುಕಿನಲ್ಲಿ ಅಡಗಿಸಿಕೊಳ್ಳುತ್ತದೆ. ಆದ್ದರಿಂದ ಹಿಂದು ಧರ್ಮ ಮೂಢ ಮತ್ತು ಮತಾಂಧರ ಆಟದ ಬಯಲಾಗಿರುವಂತೆ ಅನ್ವೇಷಣೆಯ ವೈಶಾಲ್ಯವನ್ನೂ ಹೊಂದಿದೆ.

ಏಕೆ ಹಿಂದು ಧರ್ಮ ಇಲ್ಲಿಯತನಕ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಸಂಘರ್ಷವನ್ನು ತನ್ನ ವ್ಯವಸ್ಥೆಯಿಂದ ಕಿತ್ತು ಹಾಕಲು ಸಮರ್ಥವಾಗಿಲ್ಲ ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸುವುದಕ್ಕೆ ಮುಂಚೆ ಅವುಗಳಲ್ಲಿ ಯಾವಾಗಲೂ ಉಳಿದು ಬಂದಿರುವ ವ್ಯತ್ಯಾಸಗಳನ್ನು ನೆನಪಿಗೆ ತಂದುಕೊಳ್ಳುವುದು ಅಗತ್ಯವಿದೆ. ಜಾತಿ, ಮಹಿಳೆ, ಅಸ್ತಿ ಮತ್ತು ಸಹಿಷ್ಣುತೆ ಎಂಬ ನಾಲ್ಕು ಮುಖ್ಯ ಮತ್ತು ಸ್ಪಷ್ಟ ಸಮಸ್ಯೆಗಳನ್ನು ಕುರಿತಂತೆ ಉದಾತ್ತ ಮತ್ತು ಮತಾಂಧ ಪ್ರವೃತ್ತಿಗಳ ನಿರಂತರ ತೂಗಾಟದಿಂದ ಹಿಂದು ಧರ್ಮ ತೊಂದರೆಗೊಳಗಾಗಿದೆ.

ಅಸ್ಪೃಶ್ಯರು ವೇದಗಳನ್ನು ಕೇಳಬಾರದು ಮತ್ತು ಓದಬಾರದು ಎಂದು ಜಾತಿ ಪದ್ಧತಿಯು ಕಟ್ಟಳೆ ಮಾಡಿದ್ದರಿಂದ ನಾಲ್ಕು ಸಾವಿರ ವರ್ಷಗಳಿಗಿಂತಲೂ ಹಿಂದೆ ಕೆಲವು ಹಿಂದುಗಳ ಕಿವಿಯಲ್ಲಿ ಇತರ ಹಿಂದುಗಳು ಕಾಸಿದ ಸೀಸವನ್ನು ಸುರಿಯುತ್ತಿದ್ದರು ಮತ್ತು ನಾಲಗೆಯನ್ನು ಕಿತ್ತು ಹಾಕುತ್ತಿದ್ದರು. ಮುನ್ನೂರು ವರ್ಷಗಳ ಹಿಂದೆ ಶಿವಾಜಿ ಹಿಂದು ಪದ್ಧತಿಯಂತೆ ರಾಜನಾಗಿ ಕಿರೀಟ ಧಾರಣೆ ಮಾಡಬೇಕಿದ್ದರೆ ಮುಂದೆ ಅವನ ವಂಶದಲ್ಲಿ ಬ್ರಾಹ್ಮಣರನ್ನೇ ಮಂತ್ರಿಗಳನ್ನಾಗಿ ಆರಿಸಿಕೊಳ್ಳಬೇಕೆಂಬ ಷರತ್ತಿಗೆ ಒಪ್ಪಬೇಕಾಯಿತು ಸುಮಾರು ಇನ್ನೂರು ವರ್ಷಗಳ ಹಿಂದೆ ಪಾಣಿಪತ್ತಿನ ಕೊನೆಯುದ್ಧದ ಪರಿಣಾಮವಾಗಿ ಭಾರತದ ಕಿರೀಟವು ಬ್ರಿಟೀಷರ ವಶವಾಗುತ್ತಿದ್ದಾಗ ಒಬ್ಬ ಹಿಂದು ಸೇನಾಧಿಪತಿ ಇನ್ನೊಬ್ಬ ಸೇನಾಧಿಪತಿಯೊಡನೆ ತನ್ನ ಜಾತಿಗನುಗುಣವಾಗಿ ತನ್ನ ಟೆಂಟ್ ಎತ್ತರದ ಸ್ಥಳದಲ್ಲಿ ಸ್ಥಾಪಿಸಬೇಕೆಂಬ ಕಾರಣಕ್ಕಾಗಿ ಜಗಳವಾಡುತ್ತಿದ್ದನು. ಸುಮಾರು ಹದಿನೈದು ವರ್ಷಗಳ ಹಿಂದೆ ಮಹಾತ್ಮ ಗಾಂಧಿ ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕೆಂದು ಹೊರಟದ್ದರಿಂದ ಒಬ್ಬ ಮತಾಂಧ ಹಿಂದು ಗಾಂಧಿಯತ್ತ ಬಾಂಬ್ ಎಸೆಯುವುದರ ಮೂಲಕ ಹಿಂದು ಧರ್ಮವನ್ನು ಉಳಿಸಲು ಬಯಸಿದ. ಇತ್ತೀಚಿನವರೆಗೆ ಹಿಂದು ಕ್ಷೌರಿಕನು ಅಸ್ಪೃಶ್ಯ ಹಿಂದುಗಳಿಗೆ ಕ್ಷೌರ ಮಾಡುತ್ತಿರಲಿಲ್ಲ, ಕೆಲವು ಕೆಲವು ಭಾಗಗಳಲ್ಲಿ ಇಂದಿಗೂ ಮಾಡುವುದಿಲ್ಲ. ಆದರೆ ಹಿಂದುಗಳಲ್ಲದವರ ಸೇವೆ ಮಾಡಲು ಅವನು ತುಂಬಾ ಉತ್ಸಾಹಿಯಾಗಿರುತ್ತಾನೆ.

ಪ್ರಾಚೀನ ಭಾರತದಲ್ಲಿ ಅದೇ ವೇಳೆಯಲ್ಲಿ ಜಾತಿ ಪದ್ಧತಿಯ ವಿರುದ್ಧ ಎರಡು ಭೀಕರ ಕ್ರಾಂತಿಗಳು ನಡೆದಂತೆ ಕಾಣಿಸುತ್ತವೆ. ಜಾತಿ ವ್ಯವಸ್ಥೆಯ ಸಂಪೂರ್ಣ ಮತ್ತು ಸಮಗ್ರ ಮುಲೋತ್ಪಾಟನದ ಉದ್ದೇಶಕ್ಕಾಗಿ ಒಂದು ಪೂರ್ಣ ಉಪನಿಷತ್ತು ಮೀಸಲಾಗಿದೆ. ಭಾರತದ ಪ್ರಾಚೀನ ಸಾಹಿತ್ಯದಲ್ಲಿ ಜಾತಿ ಪದ್ಧತಿಯ ಮೇಲೆ ಮಾಡಲಾದ ಆಕ್ರಮಣಗಳ ಸ್ವಭಾವ, ಧಾಟಿ ಮತ್ತು ವ್ಯಾಪ್ತಿಗಳಿಂದ ಅವು ಎರಡು ವಿಭಿನ್ನ ಕಾಲಗಳಿಗೆ ಸೇರಿದವಾಗಿವೆ. ಒಂದು ವಿಮರ್ಶೆಯ ಕಾಲ, ಇನ್ನೊಂದು ಖಂಡನೆಯ ಕಾಲ. ಈ ಪ್ರಶ್ನೆಯನ್ನು ಮುಂದಿನ ತನಿಖೆಗೆ ಬಿಟ್ಟುಬಿಡೋಣ. ಮೌರ್ಯರ ಮತ್ತು ಗುಪ್ತರ ಎರಡು ಉಜ್ವಲ ಕಾಲಗಳಲ್ಲಿ ಜಾತಿ ಪದ್ಧತಿಯ ಮೇಲೆ ಸಮಗ್ರ ಆಕ್ರಮಣ ಮಾಡಲಾಯಿತು. ಆದರೆ ಜಾತಿ ಪೂರ್ಣ ನಾಶವಾಗಲಿಲ್ಲ. ಅದು ಕೆಲವು ಕಾಲ ತುಂಬಾ ಕಟ್ಟುನಿಟ್ಟಾಗಿರುತ್ತದೆ, ಮತ್ತೆ ಕೆಲವು ಕಾಲದಲ್ಲಿ ಸಡಿಲವಾಗಿರುತ್ತದೆ. ಮತಾಂಧತೆ ಮತ್ತು ಉದಾತ್ತತೆಗಳು ಜಾತಿ ಪದ್ಧತಿಯ ಸಂಬಂಧದಲ್ಲಿ ಒಂದರೊಡನೊಂದು ಹೊಸೆದುಕೊಂಡಿರುತ್ತವೆ.

ಹಿಂದು ಇತಿಹಾಸದ ಯಾವುದೇ ಎರಡು ಕಾಲಗಳ ನಡುವಿನ ವ್ಯತ್ಯಾಸ ಒಂದಲ್ಲ ಒಂದು ಹುರಿ ಬಲವಾಗಿರುವುದಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಉದಾತ್ತತೆ ಬಲವಾಗಿದೆ. ಮತಾಂಧತೆ ಉಸಿರೆತ್ತುವ ಸಾಹಸ ಮಾಡಲಾರದು. ಆದರೆ ಮತಾಂಧತೆಯು ಉದಾತ್ತತೆಯ ಚಿಂತನೆಯಲ್ಲಿ ನುಸುಳಿ ತನ್ನನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಇಂದು ಹುಟ್ಟಿನಿಂದ ಬಂದ ಜಾತಿಯನ್ನು ಕುರಿತು ಮಾತಾಡುವುದು ಅಪ್ರಸ್ತುತವಾಗಿದೆ. ಜನರು ವೃತ್ತಿಸಂಬಂಧವಾದ ಜಾತಿಯನ್ನು ಕುರಿತು ಈಗ ಮಾತನಾಡುತ್ತಿದ್ದಾರೆ. ಜನರು ಜಾತಿ ಪದ್ಧತಿಯ ಪರವಾಗಿ ಮಾತನಾಡದಿದ್ದರೂ, ಅವರು ಅದರ ವಿರುದ್ಧ ಅಪರೂಪಕ್ಕೆ ಮಾತ್ರ ಕ್ರಿಯೆಯಲ್ಲಿ ತೊಡಗುತ್ತಾರೆ. ವೈಚಾರಿಕ ಮತ್ತು ರೂಢಿ ಮೂಲವಾದ ಹಿಂದು ಮನಸ್ಸುಗಳ ನಡುವೆ ಸಂಘರ್ಷದ ವಾತಾವರಣ ಈಗ ನಿರ್ಮಾಣವಾಗುತ್ತಿದೆ. ಜಾತಿಯು ಅದರ ಕೆಲವು ಪ್ರಕಾರಗಳಲ್ಲಿ ಒಂದು ವ್ಯವಸ್ಥೆಯಾಗಿ ಸಡಿಲವಾಗುತ್ತಿರಬಹುದು. ಆದರೆ ರೂಢಿ ಮೂಲವಾದ ಮನಸ್ಸಿನಿಂದ ಅದನ್ನು ಸಂಪೂರ್ಣವಾಗಿ ಬುಡಮೇಲು ಮಾಡಲಾಗಿಲ್ಲ. ಜಾತಿ ಪದ್ಧತಿಗೆ ಸಂಬಂಧಿಸಿದಂತೆ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಸಂಘರ್ಷವು ಪರಿಹಾರ ಕಾಣದೆ ಮುಂದುವರೆಯುವ ಭೀತಿ ಇದ್ದೇ ಇದೆ.

ಮಹಿಳೆ :

ಮಗುವಿನ ತಂದೆ ಯಾರೆಂಬುದು ಮಹಿಳೆಗೆ ಮಾತ್ರ ಗೊತ್ತೆಂಬುದನ್ನು ಆಧುನಿಕ ಕಾಲ್ಪನಿಕ ಸಾಹಿತ್ಯ ನಮಗೆ ಮನವರಿಕೆ ಮಾಡಿದ್ದರೆ, 3000 ಕ್ಕಿಂತ ಹೆಚ್ಚು ವರ್ಷಗಳ ಹಿಂದೆ ಇದ್ದ ಜಾಬಾಲಳಿಗೆ ತನ್ನ ಮಗುವಿನ ತಂದೆ ಯಾರೆಂಬುದು ನಿಸ್ಸಂದೇಹವಾಗಿ ತಿಳಿದಿರಲಿಲ್ಲ. ಪ್ರಾಚೀನ ಸಾಹಿತ್ಯದಲ್ಲಿ ಸತ್ಯವಂತಳೆಂದು ಅವಳ ಹೆಸರನ್ನು ಹೆಮ್ಮೆಯಿಂದ ನೆನಪುಮಾಡಿಕೊಳ್ಳಲಾಗುತ್ತಿದೆ. ಅವಳ ಮಗನನ್ನು ಬ್ರಾಹ್ಮಣನೆಂದು ಪರಿಗಣಿಸಿ ಜಾತಿ ಪದ್ಧತಿ ಅವಳನ್ನು ನುಂಗಿ ಹಾಕಿತು ಎಂದು ಹೇಳಬಹುದು. ಕುಟುಂಬದ ಇತಿಹಾಸವನ್ನು ಆಳವಾಗಿ ತನಿಖೆ ಮಾಡುವುದರ ವಿರುದ್ಧ ಉದಾತ್ತಕಾಲದ ಸಾಹಿತ್ಯ ನಮ್ಮನ್ನು ಎಚ್ಚರಿಸುತ್ತದೆ. ಏಕೆಂದರೆ ನದಿಮೂಲದಂತೆ ಅದೂ ಸಹ ಕೆಸರಿನಿಂದ ಕೂಡಿರುತ್ತದೆ. ತನ್ನ ಇಚ್ಛೆಗೆ ವಿರುದ್ಧವಾಗಿ ಅತ್ಯಾಚಾರ ಮತ್ತು ದೌರ್ಜನ್ಯಕ್ಕೀಡಾದ ಹೆಣ್ಣಿಗೆ ದೋಷ ಅಥವಾ ಕಳಂಕ ತಟ್ಟುವುದಿಲ್ಲ. ಏಕೆಂದರೆ ಈ ಸಾಹಿತ್ಯ ಹೇಳುವಂತೆ ಅವಳು ಪ್ರತಿ ತಿಂಗಳು ತನಗೆ ತಾನೆ ಪರಿಶುದ್ಧಳಾಗುತ್ತಾಳೆ. ಮಹಿಳೆಗೆ ಮದುವೆಯಿಂದ ಬಿಡುಗಡೆ ಹೊಂದುವ ಮತ್ತು ಆಸ್ತಿಯ ಮೇಲಿನ ಹಕ್ಕು ಇದೆ. ಹಿಂದು ಧರ್ಮದ ಉಜ್ವಲ ಕಾಲಗಳಲ್ಲಿ ಮಹಿಳೆಯ ಬಗ್ಗೆ ಉದಾತ್ತ ದೃಷ್ಟಿಕೋನ ಇದ್ದರೆ, ಮತಾಂಧ

ಕಾಲಗಳು ಅವಳನ್ನು ಒಂದು ಆಸ್ತಿಯ ತುಂಡನ್ನಾಗಿ ಪರಿಗಣಿಸಿ ತಂದೆ, ಗಂಡ ಅಥವಾ ಮಗನ ಅಧೀನಕ್ಕೊಳಪಡಿಸುತ್ತವೆ.

ಸಧ್ಯದ ಪರಿಸ್ಥಿತಿಯಲ್ಲಿ ಹಿಂದು ಮಹಿಳೆಯು ಉದಾತ್ತತೆ ಹಾಗೂ ಮತಾಂಧತೆಯ ವಿಚಿತ್ರ ಸನ್ನಿವೇಶದಲ್ಲಿ ಸಿಕ್ಕಿಹಾಕಿಕೊಂಡಿದ್ದಾಳೆ. ವಿಶ್ವದ ಇತರೆಡೆಗಳಿಗಿಂತ ಇಲ್ಲಿ ಅವಳಿಗೆ ಅತ್ಯುನ್ನತ ಸ್ಥಾನಗಳನ್ನು ಪಡೆಯುವುದು ಸುಲಭವಾಗಿದೆ. ಆದರೆ ಮದುವೆ ಮತ್ತು ಆಸ್ತಿಗಳ ಸಂಬಂಧದಲ್ಲಿ ಪುರುಷರೊಡನೆ ಸಮಾನತೆಗಾಗಿ ಅವಳು ನಡೆಸುತ್ತಿರುವ ಹೋರಾಟವನ್ನು ಇನ್ನೂ ದ್ವೇಷದಿಂದಲೇ ನೋಡಲಾಗುತ್ತಿದೆ. ಅವಳು ಅನ್ಯ ಧರ್ಮೀಯ ಪುರುಷನಲ್ಲಿ ಅನುರಕ್ತಳಾಗಿ ಮತಾಂತರಗೊಳ್ಳುವಳೆಂಬ ಕಾರಣವನ್ನು ಮುಂದೊಡ್ಡಿ– ಹಿಂದು ಪುರುಷನೊಡನೆ ಇನ್ನೂ ಹೆಚ್ಚಾಗಿ ಹೀಗಾಗುವ ಸಾಧ್ಯತೆ ಇಲ್ಲವೇನೋ ಎಂಬಂತೆ -ಹಿಂದು ಮಹಿಳೆಗೆ ಆಸ್ತಿ ಹಕ್ಕನ್ನು ನಿರಾಕರಿಸುವ ಕರಪತ್ರಗಳನ್ನು ನಾನು ನೋಡಿದ್ದೇನೆ. ಭೂಮಿ ಮತ್ತಷ್ಟು ವಿಭಾಗವಾಗುವುದನ್ನು ತಡೆಗಟ್ಟುವುದು ಇನ್ನೊಂದು ಪ್ರಶ್ನೆ. ಇದು ಮಹಿಳೆಯರಂತೆ ಪುರುಷರಿಗೂ ಅನ್ವಯಿಸುತ್ತದೆ. ಆಗತ್ಯವಿರುವಷ್ಟು ಗರಿಷ್ಟ ಮಿತಿಯಲ್ಲಿ ಹಿಡುವಳಿಯನ್ನು ಉಳಿಸಲು ಒಂದು ದಾರಿಯನ್ನು ಕಂಡುಹಿಡಿಯಬೇಕು. ಆಸ್ತಿ ಮತ್ತು ಮದುವೆಯ ವಿಷಯದಲ್ಲಿ ಪುರುಷ ಮತ್ತು ಮಹಿಳೆಯರ ನಡುವೆ ಎಲ್ಲಿಯವರೆಗೆ ಕಾನೂನು, ಸಂಪ್ರದಾಯ ಮತ್ತು ಆಲೋಚನಾ ಪದ್ಧತಿ ತಾರತಮ್ಯ ತೋರಿಸುವುವೋ ಅಲ್ಲಿಯವರೆಗೆ ಹಿಂದು ಧರ್ಮದ ಮತಾಂಧತೆ ಪೂರ್ಣವಾಗಿ ಸಾಯುವುದಿಲ್ಲ. ಸ್ತ್ರೀಯಲ್ಲಿ ಪೀಠದಿಂದ ಕೆಳಗಿಳಿಯದ ದೇವತೆಯನ್ನು ಕಾಣಬಯಸುವ ಹಿಂದು ಎಷ್ಟೇ ಉದಾತ್ತನಾಗಿದ್ದರೂ ಅವನ ಬಯಕೆ ಮಂಕುತನ ಮತ್ತು ಕಪಟಗಳಿಗೆ ಒಳಗಾಗಿರುತ್ತದೆ. ಹಿಂದು ಪುರುಷನು ತನ್ನ ಸ್ತ್ರೀಯನ್ನು ತನ್ನ ಹಾಗೆ ಒಬ್ಬ ಮಾನವ ಜೀವಿ ಎಂದು ಎಲ್ಲಿಯವರೆಗೆ ಒಪ್ಪಿಕೊಳ್ಳಲು ನಿರಾಕರಿಸುತ್ತಾನೋ ಅಲ್ಲಿಯವರೆಗೆ ಮತಾಂಧತೆ ಮತ್ತು ಉದಾತ್ತತೆಗಳು ಒಂದರೊಡನೊಂದು ಹೆಣೆದುಕೊಂಡಿರುತ್ತವೆ.

ಆಸ್ತಿ :

ಹಿಂದು ಧರ್ಮದಲ್ಲಿ ಆಸ್ತಿಯ ಪರಿಕಲ್ಪನೆ ಅಪರಿಗ್ರಹ ಮತ್ತು ಅನಾಸಕ್ತಗಳಲ್ಲಿ ಅದು ಇಟ್ಟಿರುವ ನಂಬಿಕೆಯಿಂದ ಉದಾತ್ತವಾದುದಾಗಿದೆ. ಆದರೆ ಮತಾಂಧ ಹಿಂದೂ ಧರ್ಮದಲ್ಲಿ ಕರ್ಮಸಿದ್ಧಾಂತವು ಶ್ರೀಮಂತ ಮತ್ತು ಕುಲೀನ ಜನರಿಗೆ ಬಲಾಢ್ಯತೆ ಮತ್ತು ಉತ್ತಮ ಸ್ಥಾನಗಳನ್ನು ನೀಡಿ ಯಾರಲ್ಲಿ ಏನೆಲ್ಲಾ ಇದೆಯೋ ಅದೆಲ್ಲಾ ಸರಿ ಎಂದು ಸಾರುತ್ತದೆ. ಇಂದಿನ ರೂಪದಲ್ಲಿರುವ ಖಾಸಗಿ ವಿರುದ್ಧದ

ಸಾಮಾಜಿಕ ಒಡೆತನದ ಆಸ್ತಿಯ ಪ್ರಶ್ನೆ ಇತ್ತೀಚಿನದು. ಆದರೆ ಅದರ ಹಳೆಯ ರೂಪವಾದ ನಿರ್ಮಮಕಾರದ ವಿರುದ್ಧ ಅನುಗ್ರಹಿಸಲಾದ ವ್ಯವಸ್ಥೆಯ ರೂಪದಲ್ಲಿ ಅದು ಹಿಂದಿನಿಂದಲೂ ಹಿಂದೂ ಮನಸ್ಸಿನಲ್ಲಿ ಮುಂದುವರಿಯುತ್ತಾ ಬಂದಿದೆ. ಬೇರೆ ಸಮಸ್ಯೆಗಳಲ್ಲಿರುವಂತೆ ಆಸ್ತಿ ಮತ್ತು ಬಲಾಢ್ಯತೆಗಳ ಪ್ರಶ್ನೆಯನ್ನು ತರ್ಕಬದ್ಧ ಅಂತ್ಯದ ಕಡೆಗೆ ಕೊಂಡೊಯ್ಯಲು ಹಿಂದುಮನಸ್ಸಿಗೆ ಸಾಧ್ಯವಾಗಿಲ್ಲ. ಆಸ್ತಿಯು ಒಂದಲ್ಲ ಇನ್ನೊಂದು ಪರಿಕಲ್ಪನೆ ಪ್ರಬಲವಾಗಿರುವ ಮಟ್ಟಿಗೆ ಮಾತ್ರ ಹಿಂದು ಧರ್ಮವು ಕಾಲ ಮತ್ತು ವ್ಯಕ್ತಿಗತ ದೃಷ್ಟಿಯಲ್ಲಿ ಬದಲಾವಣೆ ಹೊಂದಿದೆ.

ಸಹಿಷ್ಣುತೆ :

ಸಹಿಷ್ಣುತೆ ಸಾಮಾನ್ಯವಾಗಿ ಹಿಂದು ಧರ್ಮದ ಸೋಲು ಕಾಣದ ಒಂದು ಅಂಶವೆಂದು ಪ್ರಖ್ಯಾತವಾಗಿದೆ. ಇಲ್ಲಿಯವರೆಗೂ ಅದು ಬಹಿರಂಗ ಹತ್ಯೆಯನ್ನು ಅಸಹ್ಯವಾಗಿ ಪರಿಗಣಿಸಿದೆ ಎಂಬುದನ್ನು ಬಿಟ್ಟರೆ ಹೆಚ್ಚೇನೂ ಅದು ಸಾಧಿಸಿಲ್ಲ. ಹಿಂದೂ ಧರ್ಮದ ಮತಾಂಧತನ ಯಾವಾಗಲೂ ಏಕ ರೀತಿಯನ್ನು ಸಾಧಿಸುವ ಮೂಲಕ ಐಕ್ಯತೆಯನ್ನು ಎತ್ತಿ ಹಿಡಿದಿದೆ. ತಾನು ಯಾವುದರ ಪ್ರಾಬಲ್ಯವನ್ನು ಬೆಂಬಲಿಸಬೇಕೋ ಅದನ್ನು ಬಿಟ್ಟು ಉಳಿದ ಎಲ್ಲ ಪಂಗಡಗಳ ಮತ್ತು ನಂಬಿಕೆಗಳ ದಮನ ಮಾಡಲು ಅದು ಯತ್ನಿಸಿದೆ. ಆದರೆ ಅಂತಹ ಪ್ರಯತ್ನಗಳು ಎಂದೂ ಯಶಸ್ವಿಯಾಗಿಲ್ಲ. ಇವನ್ನು ಹಿಂದೆ, ಹೆಚ್ಚು ಕಡಿಮೆ ಚಿಕ್ಕಮಕ್ಕಳ ಆಟದ ಬೊಂಬೆಗಳಂತೆ ಪರಿಗಣಿಸಲಾಗಿದೆ. ಏಕೆಂದರೆ ಇತ್ತೀಚಿನವರೆಗೆ ಭಿನ್ನತೆಯಲ್ಲಿ ಐಕ್ಯತೆ ತತ್ವವನ್ನು ಹಿಂದೂ ಧರ್ಮ ತನ್ನ ಒಳಪಂಗಡಗಳಿಗೆ ಮಾತ್ರ ಅನ್ವಯಿಸಲು ಕರೆಕೊಟ್ಟಿತ್ತು. ಆದ್ದರಿಂದ ಹಿಂದೂ ಧರ್ಮದಲ್ಲಿ ಸಹಿಷ್ಣುತೆಯ ಅಂಶ ಯಾವಾಗಲೂ ದಮನಕಾರಿ ಅಂಶಕ್ಕಿಂತ ಬಲಶಾಲಿಯಾಗಿದೆ. ಆದರೆ ಈ ಸಹಿಷ್ಣುತೆಯನ್ನು ಯುರೋಪಿನ ವಿಚಾರವಾದದ ಮೂಲಕ ವಿಶ್ವದಲ್ಲಿ ಹರಡಿದ ಅಂಥದೇ ಮಾನಸಿಕ ಪ್ರವೃತ್ತಿಯಿಂದ ಪ್ರತ್ಯೇಕವಾಗಿ ಕಾಣಬೇಕಾಗುತ್ತದೆ. ತನ್ನ ವಿರೋಧಿಯ ಅಭಿಪ್ರಾಯ ತಪ್ಪು ಎಂದು ತಿಳಿದಿದ್ದರೂ ವಾಲ್ಟೇರ್ ತನ್ನ ವಿರೋಧಿಯ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿಗಾಗಿ, ಸಹಿಷ್ಣುತೆಗಾಗಿ ಹೋರಾಡಲು ಸಿದ್ಧನಿದ್ದ. ಅದರ ಬದಲಾಗಿ ಯಾವುದು ಸರಿ ಎಂಬ ಬಗ್ಗೆ ವಿವಿಧ ಸಾಧ್ಯತೆಗಳ ಆಧಾರದ ಮೇಲೆ ಹಿಂದೂ ಧರ್ಮ ತನ್ನ ಸಹಿಷ್ಣುತೆಯನ್ನು ಹೊಂದಿದೆ. ಅದು ಸಿದ್ಧಾಂತಗಳು ಮತ್ತು ಆಚಾರಗಳು ಮತಪಂಗಡಗಳಲ್ಲಿ ವಿಭಿನ್ನವಾಗಿರಬಹುದು ಎಂಬುದನ್ನು ಒಪ್ಪಿಕೊಳ್ಳುತ್ತದೆ. ಆದರೆ ಅವುಗಳ ನಡುವೆ ಒಮ್ಮತವನ್ನು ಸಾಧಿಸಲು ಅದು ಯತ್ನಿಸುವುದಿಲ್ಲ. ಅದು ಮಾನವರ ಜೀವನದಲ್ಲಿ ಏಕರೀತಿಯ ನಡೆವಳಿಕೆಗಳನ್ನು ಸ್ವಯಂ ಇಚ್ಛೆಯಿಂದ ಬಯಸುವುದಿಲ್ಲ. ಪಾಲಿಸುವ ಏಕ ರೀತಿಯನ್ನೂ

ಅದು ಬಯುಸುವುದಿಲ್ಲ. ಹಿಂದಿನಿಂದಲೂ ಬಹು ಯಶಸ್ವಿಯಾಗಿ ತನ್ನ ಎಲ್ಲ ಮತ ಪಂಗಡಗಳಲ್ಲಿ ಏಕಸೂತ್ರವಾಗಿ ಸಾಧಿಸಿದ್ದ, ಕಟ್ಟುನಿಟ್ಟಾಗಿ ನಿರ್ಧರಿಸಲಾರದ, ಭಿನ್ನತೆಯೊಳಗಿನ ಏಕತೆಯನ್ನು ಹೊಂದಲು ಮಾತ್ರ ಅದು ಬಯುಸುತ್ತದೆ. ಆದ್ದರಿಂದ ಅದರ ಸಹಿಷ್ಣುತೆಯು ಗುಣ, ಭಿನ್ನತೆಗಳು ಅವಶ್ಯಕವಾಗಿ ತಪ್ಪೇ ಆಗಿರಬೇಕಾಗಿಲ್ಲ. ಸರಿಯಾದುದರ ಭಿನ್ನ ಅಭಿವ್ಯಕ್ತಿಗಳಾಗಿರಬಹುದು ಎಂಬ ನಂಬಿಕೆಯಿಂದ, ಮಧ್ಯಪ್ರವೇಶ ಮಾಡದಿರುವ ಸಿದ್ಧಾಂತದಿಂದ ಬಂದುದಾಗಿದೆ.

ಏಕತೆ :

ಮತಾಂಧತೆಯು ಹಿಂದೂ ಧರ್ಮದ ಮೇಲೆ ಸಮವಸ್ತ್ರದ ಏಕತೆಯನ್ನು ತೊಡಿಸಲು ಅನೇಕ ಸಾರಿ ಪ್ರಯತ್ನಿಸಿದೆ. ಅದರ ಉದ್ದೇಶಗಳು ಎಲ್ಲ ಸಮಯದಲ್ಲೂ ಸಂಶಯಾಸ್ಪದವಾಗಿಲ್ಲ. ಅದರ ಚಾಲನಾ ಶಕ್ತಿ ಕೆಲವು ವೇಳೆ ಭದ್ರತೆ ಮತ್ತು ಬಲದ ಹಂಬಲದಿಂದಾಗಿರಬಹುದು. ಆದರೆ ಅದರ ಪರಿಣಾಮವು ಮಾತ್ರ ಯಾವಾಗಲೂ ವಿನಾಶಕಾರಿಯಾಗಿದೆ. ಭಾರತದ ಇತಿಹಾಸದ ಯಾವುದೇ ಕಾಲದಲ್ಲಿ ಮತಾಂಧ ಹಿಂದೂ ಧರ್ಮ ಭಾರತಕ್ಕೆ ಏಕತೆಯನ್ನಾಗಲಿ, ಒಳ್ಳೆಯದನ್ನಾಗಲಿ ಉಂಟು ಮಾಡಿರುವುದು ನನಗೆ ತಿಳಿಯದು. ಭಾರತದಲ್ಲಿ ಏಕತೆ ಮತ್ತು ಸಮೃದ್ಧಿಗಳಿದ್ದ ಕಾಲದಲ್ಲೆಲ್ಲಾ ಜಾತಿ, ಮಹಿಳೆ, ಆಸ್ತಿ ಮತ್ತು ಸಹಿಷ್ಣುತೆಗಳಿಗೆ ಸಂಬಂಧಿಸಿದಂತೆ ಹಿಂದೂ ಧರ್ಮದ ಉದಾತ್ತ ಗುಣ ಪ್ರಬಲವಾಗಿದ್ದುದು ಕಂಡು ಬಂದಿದೆ. ಹಿಂದೂ ಧರ್ಮದ ಮತಾಂಧತೆಯ ತೂಗುಯ್ಯಾಲೆ ಮೇಲ್ಮುಖವಾಗಿದ್ದಾಗಲೆಲ್ಲಾ ದೇಶದ ಸಾಮಾಜಿಕ ಮತ್ತು ರಾಜಕೀಯ ವಿಭಜನೆಗೆ ಕಾರಣವಾಗಿ ಭಾರತೀಯ ಸಮಾಜ ಮತ್ತು ರಾಷ್ಟ್ರ ತುಂಡು ತಂಡಾಗಿ ಹೋಗಿದೆ. ಭಾರತವು ಛಪ್ಪನ್ನಾರು ದೇಶ-ರಾಜ್ಯಗಳಾಗಿ ವಿಭಜನೆ ಹೊಂದಿದಾಗಲೆಲ್ಲಾ ಮತಾಂಧತೆಯ ಹುಮ್ಮಸ್ಸು ಇತ್ತೋ ಇಲ್ಲವೋ ನನಗೆ ತಿಳಿಯದು. ಆದರೆ ಭಾರತೀಯ ಮನಸ್ಸಿನ ಮೇಲೆ ಉದಾತ್ತ ಹಿಂದೂ ಧರ್ಮ ತನ್ನ ಪ್ರಭಾವವನ್ನು ಹೊಂದಿದ್ದ ಕಾಲದಲ್ಲಿ ಮಾತ್ರ ದೇಶದ ಏಕತೆ ಸಾಧ್ಯವಾಯಿತು ಎಂಬುದು ನಿರ್ವಿವಾದವಾಗಿದೆ.

ದೇಶವನ್ನು ಒಂದುಗೂಡಿಸುವ ಪ್ರಯತ್ನಗಳ ಹಾದಿಯಲ್ಲಿ ಕೆಲವು ದೊಡ್ಡ ಸೋಲುಗಳು ಎದ್ದು ನಿಲ್ಲುತ್ತವೆ. ಉದಾತ್ತ ರೀತಿಯಲ್ಲಿ ಪ್ರಾರಂಭವಾದ ಜ್ಞಾನೇಶ್ವರ ಪಂಥವು ಶಿವಾಜಿ ಮತ್ತು ಬಾಜಿರಾಯನ ಕಾಲದಲ್ಲಿ ಉತ್ತುಂಗವನ್ನು ಮುಟ್ಟಿತು. ಆದರೆ ತನ್ನ ಅಂತಿಮ ಗುರಿಯನ್ನು ಮುಟ್ಟುವ ಮೊದಲೇ ಪೇಷ್ವೆಗಳ ಕಾಲದ ಮತಾಂಧತೆಯಿಂದ ಅವನತಿಯನ್ನು ಹೊಂದಿತು. ಪುನಃ ಗುರುನಾನಕನ ಹೆಸರಿನಲ್ಲಿ ಪ್ರಾರಂಭವಾದ ಉದಾತ್ತ ಧರ್ಮ ರಣಜಿತ್‌ಸಿಂಗನ ಕಾಲದಲ್ಲಿ

ಉತ್ತುಂಗ ಶಿಖರವನ್ನು ಮುಟ್ಟಿತು. ಆದರೆ ಬಹು ಬೇಗ ಶಿಖ್ ಒಕ್ಕೂಟದ ಮತಾಂಧತೆಯು ಒಳಜಗಳಗಳಲ್ಲಿ ಅವನತಿ ಹೊಂದಿತು. ಒಮ್ಮೆ ಸೋತು ಹೋದ ಈ ಪ್ರಯತ್ನಗಳು ಸಮಕಾಲೀನ ಕಾಲದಲ್ಲಿ ಪುನರಾವರ್ತನಗೊಳ್ಳಲು ತೀವ್ರವಾಗಿ ಯತ್ನಿಸುತ್ತಿವೆ. ಏಕೆಂದರೆ ಅಂತರಂಗದ ಕರಾಳ ಹಂಬಲ ಇಂದು ಮಹಾರಾಷ್ಟ್ರ ಮತ್ತು ಪಂಜಾಬ್‌ಗಳಿಂದ ಹೊರಹೊಮ್ಮುತ್ತಿರುವ ಮತಾಂಧ ಪ್ರವಾಹಗಳ ಜೊತೆಗೆ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಿದೆ. ಭಾರತೀಯ ಇತಿಹಾಸದ ವಿದ್ಯಾರ್ಥಿಗೆ ಇದೆಲ್ಲಾ ವಿವಿಧ ದೃಷ್ಟಿಕೋನಗಳಿಂದ ಅಭ್ಯಾಸ ಮಾಡಲು ಮಹತ್ವಪೂರ್ಣವಾದ ವಸ್ತುವನ್ನು ಒದಗಿಸಬಲ್ಲುದು. ಧಾರ್ಮಿಕ ಗ್ರಂಥಗಳ ಬೋಧನೆ ಹಾಗೂ ದೇಶದ ಏಕತೆಗಾಗಿ ಮಾಡುವ ರಾಜಕೀಯ ಪ್ರಯತ್ನಗಳ ನಿಕಟ ಸಂಬಂಧ, ಅವನತಿಯ ಮೂಲ ಪ್ರಾರಂಭದಲ್ಲಿದೆಯೆ ಅಥವಾ ಅನಂತರದ ಮಿಶ್ರಣದಲ್ಲೇ ಎಂದು ತಿಳಿಯುವುದರಲ್ಲಿ ಮತ್ತು ಮತಾಂಧ ಪರಾಭವಗಳನ್ನು ಪುನರಾವರ್ತನಗೊಳಿಸುವ ಗುಂಪುಗಳ ದೃಷ್ಟಿಯಿಂದ ಇಂತಹ ಅಭ್ಯಾಸವನ್ನು ಮಾಡಬಹುದು. ವಿಜಯನಗರದ ಇಂತಹ ಅಧ್ಯಯನ, ಅದರ ಬೇರುಗಳು ಶಂಕರ ಅಥವಾ ನಿಂಬಾರಕರಲ್ಲಿ ಅಡಗಿದ್ದುವೆ ಮತ್ತು ಹಂಪಿಯ ವೈಭವದ ತಳದಲ್ಲಿ ಎಂತಹ ಕೊಳೆತ ಬೀಜಗಳು ಅಡಗಿದ್ದುವು ಮುಂತಾದ ಅಭ್ಯಾಸಗಳು ಕುತೂಹಲಕಾರಿ ಮತ್ತು ಲಾಭದಾಯಕವಾದುವಾಗಿವೆ. ಅಲ್ಲದೆ ಶೇರ್‌ಶಹಾ ಮತ್ತು ಅಕ್ಬರರ ಉದಾತ್ತ ಪ್ರಯತ್ನಗಳ ಹಿಂದೆ ಏನಡಗಿತ್ತು ಮತ್ತು ಅವರೇಕೆ ಔರಂಗಜೇಬನ ಮತಾಂಧತೆಗೆ ಸೋಲಬೇಕಾಯಿತು ಎಂಬುದನ್ನು ಪರಿಶೀಲಿಸಬಹುದು.

ಭಾರತವನ್ನು ಒಂದುಗೂಡಿಸಲು ಮಾಡಿದ ಇತ್ತೀಚಿನ ಭಾರತೀಯ ಜನರ ಮತ್ತು ಮಹಾತ್ಮಗಾಂಧಿಯ ಪ್ರಯತ್ನ ಯಶಸ್ವಿಯಾಯಿತು. ಆದರೆ ಭಾಗಶಃ ಮಾತ್ರ. ಐದು ಸಾವಿರ ವರ್ಷಗಳಿಗಿಂತ ಹಿಂದಿನಿಂದ ಎಲ್ಲಾ ಉದಾತ್ತ ಪ್ರವಾಹಗಳು ನಿಸ್ಸಂದೇಹವಾಗಿ ಈ ಪ್ರಯತ್ನವನ್ನು ಮುಂದಕ್ಕೆ ತಳ್ಳಿದ್ದುವು ನಿಜ. ಆದರೆ ಅದರ ತಕ್ಷಣದ ಶಕ್ತಿಯ ಹಿಂದೆ ಏನಿದ್ದಿತು ? ತುಳಸಿದಾಸ, ಕಬೀರ ಮತ್ತು ಚೈತನ್ಯರಂತಹ ಶ್ರೇಷ್ಠ ಸಂತರ ಪರಂಪರೆ ಇದ್ದಿತೆ? ಅಥವಾ ಇನ್ನೂ ಆಧುನಿಕ ಧಾರ್ಮಿಕ ರಾಜಕೀಯ ನಾಯಕರಾದ ರಾಮಮೋಹನ ರಾಯ್ ಮತ್ತು ಫೈಜಾಬಾದ್‌ನ ಕ್ರಾಂತಿಕಾರಕ ಮೌಲ್ವಿ ಇದ್ದರೆ? ಅಥವಾ ಯುರೋಪಿನ ಉದಾತ್ತ ವಿಚಾರಶಕ್ತಿ ಇದ್ದಿತೆ? ಕಳೆದ ಐದು ಸಾವಿರ ವರ್ಷಗಳ ಎಲ್ಲ ಮತಾಂಧ ಪ್ರವಾಹಗಳು ಒಟ್ಟುಗೂಡಿ ಈ ಪ್ರಯತ್ನವನ್ನು ಹಿಮ್ಮೆಟ್ಟಿಸಲು ತೊಡಗಿದುವೆ ? ಮತಾಂಧತೆಯು ಸೋತು ಹೋಯಿತೆ? ಪುನಃ ಅದು ತಲೆ ಎತ್ತಲಾರದೆ ? ಎಂಬುದನ್ನು ಕುರಿತು ಚಿಂತಿಸಬೇಕು.

ಉದಾತ್ತತೆಯು ಮಾತ್ರ ದೇಶವನ್ನು ಒಂದುಗೂಡಿಸಬಲ್ಲದು. ಭಾರತವು ಬಹು ಪ್ರಾಚೀನ ಮತ್ತು ವಿಸ್ತಾರವ ರಾಷ್ಟ್ರ. ಸ್ವಯಂ ಇಚ್ಛೆಯ ಮಾನವೀಯ ಹಂಬಲವಲ್ಲದೆ ಮತ್ತಾವ ಶಕ್ತಿಯೂ ಅದನ್ನು ಒಂದುಗೂಡಿಸಲಾರದು. ಮತಾಂಧ ಹಿಂದೂ ಧರ್ಮವು ಸ್ವಭಾವ ಸಹಜವಾಗಿ ಅಂತಹ ಹಂಬಲವನ್ನು ರೂಪಿಸಲಾರದು. ಹಿಂದೆ ಅನೇಕ ಸಾರಿ ಆದಂತೆ ಉದಾತ್ತ ಹಿಂದೂ ಧರ್ಮವು ಅದನ್ನು ಮಾಡಬಲ್ಲುದು. ಹಿಂದೂ ಧರ್ಮವು ಹಾಗೆ ನೋಡಿದರೆ ಸಂಕುಚಿತ ಅರ್ಥದ ರಾಜಕೀಯ ಧರ್ಮವಲ್ಲ. ಅದು ಸಿದ್ಧಾಂತಗಳ ಮತ್ತು ಸಂಘಟನೆಯ ಧರ್ಮ. ಏಕತೆಯ ದಿಕ್ಕಿನಲ್ಲಿ ನಡೆದ ಭಾರತದ ರಾಜಕೀಯ ಇತಿಹಾಸಕ್ಕೆ ಅದು ಒಂದು ಪ್ರಮುಖ ಮಾಧ್ಯಮವಾಗಿದ್ದು ಸ್ಫೂರ್ತಿ ಮತ್ತು ಒತ್ತಾಸೆಯನ್ನು ನೀಡಿದೆ. ಹಿಂದೂ ಧರ್ಮದ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಮಹಾಯುದ್ಧವನ್ನು ದೇಶದ ಏಕತೆ ಮತ್ತು ಛಿದ್ರೀಕರಣ ಎಂಬ ಎರಡು ಕ್ರಿಯೆಗಳ ನಡುವಿನ ಹೋರಾಟವೆಂದು ಕರೆಯುವುದು ಹೆಚ್ಚು ಸೂಕ್ತವಾಗಿದೆ.

ಭಿನ್ನತೆಯಲ್ಲಿ ಏಕತೆ :

ಏನೇ ಆದರೂ ಉದಾತ್ತ ಹಿಂದೂ ಧರ್ಮವು ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸಲು ಸಾಧ್ಯವಾಗಿಲ್ಲ. ವಿಭಿನ್ನತೆಯಲ್ಲಿ ಏಕತೆಯ ಸಿದ್ಧಾಂತದ ಅಡಿಯಲ್ಲಿ ರೋಗ ಮತ್ತು ವಿಚ್ಛಿದ್ರೀಕರಣದ ಬೀಜ ಗುಪ್ತವಾಗಿ ಅಡಗಿದೆ. ಹಿಂದೂ ಧರ್ಮದ ಅತ್ಯಂತ ಉದಾತ್ತ ಪರಿಕಲ್ಪನೆಗಳ ನಡುವೆ ನುಸುಳುವ ಮತಾಂಧ ಅಂಶಗಳ ಬಗ್ಗೆ ಹೇಳುವ ಅಗತ್ಯವಿಲ್ಲ. ಅವು ಯಾವಾಗಲೂ ವಿಭಿನ್ನತೆಯೊಳಗಿನ ಏಕತೆ ಸಿದ್ಧಾಂತವನ್ನು ಹೊಂದಿರುವ ಶ್ರೀಮಂತ ಹಾಗೂ ಸೋಮಾರಿ ಮನಸ್ಸಿನಲ್ಲಿ ಬೌದ್ಧಿಕ ಅಸ್ಪಷ್ಟತೆಯನ್ನು ಉಂಟುಮಾಡಬಲ್ಲವು. ಹಿಂದೂ ಧರ್ಮವು ಒಂದೇ ಸಮನೆ ಪಂಗಡಗಳಾಗಿ ಒಡೆದುಹೋಗುವ ರೀತಿಯನ್ನು ನೋಡುವುದು ತುಂಬಾ ಬಳಲಿಕೆಯ ಕೆಲಸ ಅವು ಒಂದೊಂದೂ ತಮ್ಮದೇ ಆದ ಸದ್ದುಗದ್ದಲಗಳನ್ನುಂಟು ಮಾಡುತ್ತವೆ. ಹಿಂದೂ ಧರ್ಮದ ಉದಾತ್ತ ಗುಣವು ಅವುಗಳನ್ನು ಏಕತೆಯ ತೆಕ್ಕೆಯಲ್ಲಿಡಲು ಯತ್ನಿಸಿದರೂ ಅನಿವಾರ್ಯವಾಗಿ ದೇಶದ ಜನಜೀವನದಲ್ಲಿ ಒಂದು ದೌರ್ಬಲ್ಯವನ್ನುಂಟುಮಾಡುತ್ತವೆ. ಒಂದು ಎದ್ದು ಕಾಣುವ ಗೊಂದಲ ತಲೆದೋರುತ್ತದೆ. ಒಂದೇ ಸಮನೆ ಒಡೆದು ಹೋಳಾಗುವ ಕ್ರಿಯೆಗೆ ಯಾರೂ ಚಿಂತಿಸುವುದಿಲ್ಲ. ಅವೆಲ್ಲಾ ಒಂದು ಇನ್ನೊಂದರ ಭಾಗವೆಂದು ಅವರು ಭಾವಿಸುತ್ತಾರೆ. ಇದು ಮತಾಂಧ ಹಿಂದೂ ಧರ್ಮಕ್ಕೆ ಒಂದು ಅವಕಾಶವನ್ನು ಮತ್ತು ಚಾಲನಾ ಶಕ್ತಿಯನ್ನು ಕೊಡುತ್ತದೆ. ಅದು ಬಲಶಾಲಿಯಾಗಬೇಕೆಂದು ಆಶಿಸಿದಾಗಲೆಲ್ಲಾ ಅದರ ಪರಿಣಾಮದಿಂದ ಹಿಂದೂ ಧರ್ಮ ಮತ್ತಷ್ಟು ದುರ್ಬಲವಾಗುತ್ತದೆ.

ಗಾಂಧೀಜಿಯ ಕೊಲೆಗಾರರು :

ಹಿಂದೂ ಧರ್ಮದ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಮಹಾಯುದ್ಧ ವರ್ತಮಾನಕಾಲದಲ್ಲಿ ಮುಸ್ಲಿಮರ ಬಗ್ಗೆ ವಿಭಿನ್ನ ಭಾವನೆಯನ್ನು ತಾಳುವ ಹೊರರೂಪವನ್ನು ಹೊಂದಿದೆ. ಇದು ಹೊರ ರೂಪವೆಂಬುದನ್ನು ನಾವು ಯಾವಾಗಲೂ ಮರೆಯದಿರೋಣ. ಹಿಂದಿನ ಪರಿಹಾರ ಕಾಣದ ಎಲ್ಲ ಸಂಘರ್ಷಗಳು ಮುಂದುವರಿಯುತ್ತಾ ಬಂದಿವೆ. ಮತ್ತು ಹೆಚ್ಚು ನಿರ್ಣಾಯಕವಾಗಿವೆ. ಮಹಾತ್ಮ ಗಾಂಧಿಯ ಕೊಲೆ ಹಿಂದೂ ಮುಸ್ಲಿಂ ಹೋರಾಟದ ಪರಿಣಾಮವಾಗಿರುವುದಕ್ಕಿಂತ ಹೆಚ್ಚಾಗಿ ಹಿಂದೂ ಧರ್ಮದೊಳಗಿನ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಸಮರದ ಫಲವಾಗಿದೆ. ಜಾತಿ, ಮಹಿಳೆ, ಆಸ್ತಿ ಅಥವಾ ಸಹಿಷ್ಣುತೆಗೆ ಸಂಬಂಧಿಸಿದಂತೆ ಮತಾಂಧತೆಗೆ ಯಾವೊಬ್ಬ ಹಿಂದುವೂ ಗಾಂಧೀಜಿ ನೀಡಿದಷ್ಟು ದೊಡ್ಡ ಪೆಟ್ಟುಗಳನ್ನು ನೀಡಿರಲಿಲ್ಲ. ಎಲ್ಲ ಕಹಿ ಭಾವನೆಯೂ ಒಟ್ಟುಗೂಡುತ್ತಲಿತ್ತು. ಆ ಹಿಂದೆಯೂ ಗಾಂಧೀಜಿ ಜೀವನದ ಮೇಲೆ ಒಂದು ಯತ್ನ ಮಾಡಲಾಗಿತ್ತು. ಆಗ ಅದು ಜಾತಿಯನ್ನು ಉಳಿಸುವ ಅರ್ಥದಲ್ಲಿ ಹಿಂದೂ ಧರ್ಮವನ್ನು ಉಳಿಸುವ ಉದ್ದೇಶದಿಂದ ಕೂಡಿದ್ದುದು ಸ್ಪಷ್ಟವಾಗಿತ್ತು. ಕೊನೆಯ ಮತ್ತು ಯಶಸ್ವಿ ಪ್ರಯತ್ನ ಹೊರನೋಟಕ್ಕೆ ಮುಸ್ಲಿಂ ಆಕ್ರಮಣದಿಂದ ಹಿಂದೂ ಧರ್ಮವನ್ನು ರಕ್ಷಿಸುವ ಅರ್ಥದಲ್ಲಿ ಹಿಂದೂ ಧರ್ಮವನ್ನು ಉಳಿಸುವ ಉದ್ದೇಶದಿಂದ ಕೂಡಿದುದಾಗಿತ್ತು. ಆದರೆ ಅದು ಹಿಮ್ಮೆಟ್ಟುತ್ತಿರುವ ಮತಾಂಧತೆಯು ಹಿಂದೂ ಉದಾತ್ತತೆಯೊಡನೆ ತಾನು ಮಾಡುತ್ತಿರುವ ಯುದ್ಧದಲ್ಲಿ ಒಡ್ಡಿದ ಅತಿ ದೊಡ್ಡ ಮತ್ತು ಅತಿನೀಚ ಜೂಜಿನ ಪಣವಾಗಿತ್ತು. ಗಾಂಧೀಜಿಯ ಕೊಲೆಗಾರ ಯಾವಾಗಲೂ ಹಿಂದೂ ಮನಸ್ಸಿನಲ್ಲಿ ಅಡಗಿರುವ ಮತಾಂಧತೆಯ ಅಂಶ. ಅದು ಕೆಲವು ಸಾರಿ ಅಡಗಿ ಕುಳಿತಿರುತ್ತದೆ ಮತ್ತೆ ಕೆಲವು ಸಾರಿ ಹೊರಹೊಮ್ಮುತ್ತದೆ. ಕೆಲವು ಹಿಂದೂಗಳಲ್ಲಿ ಉಗ್ರಗಾಮಿಯಾಗಿರುತ್ತದೆ ಮತ್ತೆ ಕೆಲವರಲ್ಲಿ ಸೌಮ್ಯವಾಗಿರುತ್ತದೆ. ಮಹಾತ್ಮಗಾಂಧಿಯ ಕೊಲೆಯ ವಿಚಾರಣೆಯನ್ನು ಇತಿಹಾಸದ ಪುಟಗಳು ಕೈಗೆತ್ತಿಕೊಂಡು ಅದನ್ನು ಹಿಂದೂ ಉದಾತ್ತತೆ ಮತ್ತು ಮತಾಂಧತೆಯ ನಡುವಿನ ಯುದ್ಧದ ಒಂದು ಭಾಗವೆಂದು ಪರಿಗಣಿಸಿ ಜಾತಿ ಮತ್ತು ಆಸ್ತಿಯ ವಿರುದ್ಧ ಹಾಗೂ ಮಹಿಳೆ ಮತ್ತು ಸಹಿಷ್ಣುತೆಯ ಪರವಾಗಿ ಗಾಂಧೀಜಿಯ ಕಾರ್ಯಕ್ರಮಗಳು ಯಾರನ್ನೆಲ್ಲಾ ಸಿಟ್ಟಿಗೇಳಿಸಿದ್ದುವೋ ಅವರನ್ನೆಲ್ಲಾ ಆರೋಪಿಗಳ ಸಾಲಿನಲ್ಲಿ ನಿಲ್ಲಿಸಿದಾಗ ಹಿಂದೂ ಧರ್ಮದ ಸಮತೋಲನ ಮತ್ತು ಸಂಭಾವಿತನಗಳು ಸ್ಪಷ್ಟವಾಗುತ್ತವೆ.

ಹಿಂದೂ ಧರ್ಮದಲ್ಲಿ ಉದಾತ್ತ ಮತ್ತು ಮತಾಂಧ ಅಂಶಗಳು ಏಕೆ ಸತತವಾಗಿ

ಒಂದರೊಡನೊಂದು ಹೆಣೆದುಕೊಂಡಿದೆ? ಏಕೆ ಅವು ಇಲ್ಲಿಯವರೆಗೂ ಸ್ಪಷ್ಟ ಹಾಗೂ ನಿರ್ಣಾಯಕ ಸಮರಕ್ಕೆ ಸವಾಲು ಹಾಕಿಲ್ಲ? ಇದು ಭಾರತೀಯ ಇತಿಹಾಸದ ವಿದ್ಯಾರ್ಥಿಗಳಿಗೆ ಒಂದು ಸಮೃದ್ಧ ವಸ್ತುವಾಗಿದೆ. ಭಾರತೀಯ ಮನಸ್ಸಿನಿಂದ ಮತಾಂಧತೆಯನ್ನು ಸಂಪೂರ್ಣ ಕಿತ್ತು ಹಾಕಿ ಶುದ್ಧೀಕರಿಸುವ ಕೆಲಸ ಎಂದೂ ನಡೆಯಲಿಲ್ಲ ಎಂಬುದು ಸಂದೇಹಾತೀತವಾಗಿದೆ. ಈ ಪರಿಹಾರ ಕಾಣದ ಸಂಘರ್ಷದಿಂದ ಆಗಿರುವ ದುರಂತ ಪರಿಣಾಮಗಳು ಸಹ ಸಂದೇಹಾತೀತವಾಗಿವೆ. ಎಲ್ಲಿಯವರೆಗೆ ಹಿಂದೂ ಮನಸ್ಸಿನಿಂದ ಜಾತಿಯನ್ನು ಕಿತ್ತುಹಾಕುವುದಿಲ್ಲ, ಮಹಿಳೆಯನ್ನು ಪುರುಷನೊಡನೆ ಸಮಾನವಾಗಿ ಕಾಣಲಾಗುವುದಿಲ್ಲ, ವ್ಯವಸ್ಥೆಯಿಂದ ಆಸ್ತಿಯನ್ನು ಬೇರ್ಪಡಿಸಲಾಗುವುದಿಲ್ಲ ಅಲ್ಲಿಯವರೆಗೆ ಮತಾಂಧತೆಯು ಭಾರತೀಯ ಇತಿಹಾಸದ ಮೇಲೆ ಆಗಾಗ ಅಲ್ಲೋಲಕಲ್ಲೋಲ ಪರಿಣಾಮವನ್ನು ಮಾಡುತ್ತಲೇ ಇರುತ್ತದೆ ಮತ್ತು ಅದಕ್ಕೆ ನಿರಂತರವಾದ ಸೋಮಾರಿತನವನ್ನು ಒದಗಿಸುತ್ತದೆ. ಉಳಿದ ಧರ್ಮಗಳಂತೆ ಹಿಂದೂ ಧರ್ಮವು ಸಿದ್ಧಾಂತಗಳಲ್ಲಿ ಮತ್ತು ಧರ್ಮಾಧಿಕಾರದಲ್ಲಿ ನಂಬಿಕೆಯುಳ್ಳ ಧರ್ಮವಲ್ಲ. ಅದೊಂದು ಸಾಮಾಜಿಕ ವ್ಯವಸ್ಥೆಯ ವಿಧಾನ. ಆದ್ದರಿಂದಲೇ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಸಮರವನ್ನು ಎಂದೂ ನಿರ್ಣಾಯಕ ಅಂತ್ಯಕ್ಕೆ ಕೊಂಡೊಯ್ದಿಲ್ಲ. ಬ್ರಾಹ್ಮಣ ಮತ್ತು ಬನಿಯ ಜೋಡಿ, ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ, ಅನೇಕ ಶತಮಾನಗಳ ಕಾಲ ಆಳುತ್ತಲೇ ಬಂದಿದೆ. ಒಮ್ಮೆ ಉದಾತ್ತವಾಗಿ ಇನ್ನೊಮ್ಮೆ ಮತಾಂಧವಾಗಿ ಅದರ ಆಳ್ವಿಕೆ ಮುಂದುವರೆದಿದೆ.

ಕೇವಲ ಈ ನಾಲ್ಕು ಸಮಸ್ಯೆಗಳನ್ನು ಉದಾತ್ತೀಕರಿಸುವುದರಿಂದ ಪ್ರಯೋಜನವಿಲ್ಲ ಅವುಗಳ ಸಂಘರ್ಷಕ್ಕೆ ಶಾಶ್ವತ ಪರಿಹಾರವನ್ನು ಒಂದು ಸಾರಿ ಕಂಡುಕೊಂಡು ಅವುಗಳನ್ನು ಹಿಂದೂ ಮನಸ್ಸಿನಿಂದ ಸಂಪೂರ್ಣವಾಗಿ ತೊಡೆದುಹಾಕಬೇಕು.

ಸತ್ಯ ಮತ್ತು ಭ್ರಾಂತಿ ;

ಪರಿಹಾರ ಕಾಣದ ಸಂಘರ್ಷಗಳ ಹಿಂದೆ ಸತ್ಯ ಮತ್ತು ಭ್ರಾಂತಿಗಳ ನಡುವಿನ ಸಂಬಂಧದ ಆದಿ ಭೌತಿಕ ಸಮಸ್ಯೆ ಇದೆ. ಈ ಸಮಸ್ಯೆಗೆ ಸಂಬಂಧಿಸಿದಂತೆ ಹಿಂದೂ ಉದಾತ್ತರ ಮತ್ತು ಮತಾಂಧರ ದೃಷ್ಟಿಯಲ್ಲಿ ಬಹುಸ್ವಲ್ಪ ಮಾತ್ರ ವ್ಯತ್ಯಾಸ ಇದೆ. ಹಿಂದೂ ಧರ್ಮ ಹೆಚ್ಚಾಗಿ ತೋರಿಕೆಯ ಆಚೆ ಇರುವ ಸತ್ಯದ ದರ್ಶನಕ್ಕೆ ಪ್ರಯತ್ನಿಸುತ್ತದೆ. ಅದು ವಾಸ್ತವವಾಗಿ ತೋರಿಕೆಯ ವಸ್ತುವೆಲ್ಲಾ ಸುಳ್ಳೆಂದು ಹೇಗಳೆಯುವುದಿಲ್ಲ. ಆದರೆ ಅದು ಕೆಳಮಟ್ಟದ್ದಾಗಿರುವುದರಿಂದ ಉನ್ನತ ಸತ್ಯದ ಅನ್ವೇಷಣೆಗಾಗಿ ಅದನ್ನು ಮನಸ್ಸಿನ ಆಳದಲ್ಲಿ ಹುದುಗಿಡಬೇಕು ಎಂದು ಭಾವಿ

ಸುತ್ತದೆ. ಎಲ್ಲ ದೇಶಗಳ ಎಲ್ಲ ತತ್ವದರ್ಶನಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿವೆ. ಹಿಂದೂ ಧರ್ಮವು ಉಳಿದ ಮತಧರ್ಮಗಳಿಗಿಂತ ಯಾವ ರೀತಿ ಭಿನ್ನವಾಗಿದೆ ಎಂದರೆ, ಉಳಿದ ದೇಶಗಳಲ್ಲಿ ಈ ಸಮಸ್ಯೆ ಕೇವಲ ತತ್ವಶಾಸ್ತ್ರಕ್ಕೆ ಸಂಬಂಧಿಸಿದ್ದಾದರೆ ಭಾರತದಲ್ಲಿ ಅದು ಜನಸಾಮಾನ್ಯರ ಅಂತರಾಳದಲ್ಲಿ ನೆಲೆಯೂರಿಬಿಟ್ಟಿದೆ. ತತ್ವಶಾಸ್ತ್ರವನ್ನು ಸಂಗೀತದ ರಾಗಗಳಿಗೆ ಅಳವಡಿಸಿ ನಂಬಿಕೆಯನ್ನಾಗಿ ಪರಿವರ್ತಿಸಲಾಗಿದೆ. ಬೇರೆ ದೇಶಗಳಲ್ಲಿ ಸಾಮಾನ್ಯವಾಗಿ ತತ್ವಜ್ಞಾನಿಯು ಸತ್ಯದ ಅನ್ವೇಷಣೆಗಾಗಿ ತೋರಿಕೆಯನ್ನು ನಿರಾಕರಿಸುತ್ತಾನೆ. ಆಧುನಿಕ ಪ್ರಪಂಚದ ಮೇಲೆ ಅವನ ಪ್ರಭಾವವು ಬಹು ಮಿತವಾಗಿರುತ್ತದೆ. ವೈಜ್ಞಾನಿಕ ಮತ್ತು ಧರ್ಮ ನಿರಪೇಕ್ಷಕ ಪ್ರಜ್ಞೆಯು ತೋರಿಕೆಯ ಎಲ್ಲ ಮಾಹಿತಿಯನ್ನು ತವಕದಿಂದ ಸಂಗ್ರಹಿಸಿ, ಕೇರಿ, ಜರಡಿ ಹಿಡಿದು, ಪಟ್ಟಿಗಳಲ್ಲಿ ವರ್ಗೀಕರಣ ಮಾಡಿ, ಅವುಗಳನ್ನು ಒಟ್ಟುಗೂಡಿಸಬಲ್ಲ ನಿಯಮಗಳನ್ನು ಕಂಡುಹಿಡಿದಿದೆ. ಇದು ಆಧುನಿಕ ಮಾನವನಿಗೆ ಅದರಲ್ಲೂ ಯುರೋಪಿಯನ್‌ಗೆ ಒಂದು ವಿಚಾರಶೀಲ ಜೀವನ ವಿಧಾನವನ್ನು ಒದಗಿಸಿಕೊಟ್ಟಿದೆ. ಅವನು ಸತ್ಯಾಂಶಗಳನ್ನು ಅವು ಹೇಗೆ ಕಾಣುತ್ತವೆಯೋ ಹಾಗೆ ಒಪ್ಪಿಕೊಳ್ಳುತ್ತಾನೆ. ಅದರ ಜೊತೆಗೆ ಕ್ರೈಸ್ತ ಧರ್ಮದ ನೀತಿಯ ಅಂಶ ಮನುಷ್ಯನ ಒಳ್ಳೆಯ ಕೆಲಸಗಳಿಗೆ ದೇವರ ಕೆಲಸದ ಸ್ಥಾನವನ್ನೇ ಕೊಟ್ಟಿದೆ. ಜೀವನದ ವಾಸ್ತವಾಂಶಗಳು ವೈಜ್ಞಾನಿಕ ಮತ್ತು ನೈತಿಕ ಶೋಧನೆಯ ದಿಕ್ಕಿನಲ್ಲಿ ಬಳಕೆಯಾಗುತ್ತವೆ. ಹಿಂದೂ ಧರ್ಮ, ಏನೇ ಆದರೂ ಅದರ ಆದಿ ಭೌತಿಕ ನೆಲೆಯನ್ನು ಬಿಟ್ಟುಕೊಡಲು ಯಾವಾಗಲೂ ತಯಾರಿಲ್ಲ. ಜನಸಾಮಾನ್ಯರ ನಂಬಿಕೆಯೂ ಕಣ್ಣಿಗೆ ಕಾಣುವುದರ ಮತ್ತು ಇಂದ್ರಿಯ ಗ್ರಹಿಕೆಯ ಆಚೆ ಹೋಗಿ ಕಣ್ಣಿಗೆ ಕಾಣದ ಸತ್ಯದ ಸಾಕ್ಷಾತ್ಕಾರಕ್ಕೆ ಹಂಬಲಿಸುತ್ತದೆ. ಮಧ್ಯ ಯುಗದಲ್ಲಿ ಯೂರೋಪು ಸಹ ಅಂತಹ ದೃಷ್ಟಿಯನ್ನು ಹೊಂದಿತ್ತು. ಆದರೆ ಅದು ತತ್ವಜ್ಞಾನಿಗಳಿಗೆ ಮಾತ್ರ ಸೀಮಿತವಾಗಿತ್ತು ಎಂಬುದನ್ನು ನಾನು ಪುನರುಚ್ಚರಿಸಲು ಬಯಸುತ್ತೇನೆ. ಅವರು ತೋರಿಕೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿದರು. ಅಥವಾ ಸತ್ಯದ ಸಂಕುಚಿತ ಭಾಗ ಎಂದು ಪರಿಗಣಿಸಿದರು. ಆದರೆ ಯೂರೋಪಿನ ಜನಸಾಮಾನ್ಯರು ಕ್ರೈಸ್ತ ಧರ್ಮವನ್ನು ನೈತಿಕ ನೆಲೆಗಟ್ಟಿನಲ್ಲಿ ಒಪ್ಪಿಕೊಂಡರು ಮತ್ತು ಅಷ್ಟರಮಟ್ಟಿಗೆ ತೋರಿಕೆಯನ್ನು ಸಹ ಒಪ್ಪಿಕೊಂಡರು. ಹಿಂದೂ ಧರ್ಮ ಜೀವನದ ಸತ್ಯಸಂಗತಿಗಳನ್ನು ಸಂಪೂರ್ಣವಾಗಿ ತಿರಸ್ಕರಿಸಲಿಲ್ಲ. ಆದರೆ ಅವುಗಳಿಗೆ ಕೆಳಸ್ತರದ ಸ್ಥಾನವನ್ನು ಮಾತ್ರ ಕೊಟ್ಟಿದೆ ಮತ್ತು ಇಂದಿಗೂ ಉನ್ನತ ಸ್ತರದ ಸತ್ಯಾನ್ವೇಷಣೆಯಲ್ಲಿ ತೊಡಗಿದೆ. ಇದು ಜನರ ಸಾಮಾನ್ಯ ನಂಬಿಕೆಯಾಗಿದೆ.

ಒಂದು ಸ್ಪಷ್ಟ ದೃಷ್ಟಾಂತ ನನ್ನ ನೆನಪಿಗೆ ಬರುತ್ತದೆ. ಪ್ರಖ್ಯಾತವಾದ ಆದರೆ ಅರ್ಧ ಹಾಳಾದ ಕೊನಾರಕ್ ದೇವಾಲಯದ ಶಿಲೆಗಳ ಮೇಲೆ ಬಿಡಿಸಲಾದ ಸಾವಿರಾರು ಶಿಲ್ಪ ಚಿತ್ರಗಳನ್ನು ನೋಡಬಹುದು. ತೋರಿಕೆಯನ್ನು ಒಪ್ಪಿಕೊಳ್ಳುವ ಬಗ್ಗೆ ಅಲ್ಲಿಯ ಕಲಾವಿದನಲ್ಲಿ ಜಿಪುಣತನವಾಗಲಿ, ಸಂಕೋಚವಾಗಲಿ ಕಾಣುವುದಿಲ್ಲ. ಅವುಗಳ ಎಲ್ಲ ಸಮೃದ್ಧ ಮತ್ತು ವೈವಿಧ್ಯತೆಯನ್ನು ಅವನು ಒಪ್ಪಿಕೊಂಡಿದ್ದಾನೆ. ಇಲ್ಲಿಯೂ ಒಂದು ಬಗೆಯ ಹೊಂದಾಣಿಕೆಯ ವ್ಯವಸ್ಥೆ ಇದೆ. ಕೆಳಗಿನಿಂದ ಮೇಲಿನ ಮಜಲಿನವರೆಗೆ ಬೇಟೆ, ಪ್ರಣಯ, ಸಂಗೀತ ಮತ್ತು ಶಕ್ತಿ ಪ್ರದರ್ಶನಗಳನ್ನು ತೋರಿಸುವ ವೈವಿಧ್ಯಮಯ ಶಿಲ್ಪ ಚಿತ್ರಗಳು ಕಾಣಬರುತ್ತವೆ. ಪ್ರತಿಯೊಂದೂ ಸಂಪದ್ಭರಿತ ಚಲನೆ ಮತ್ತು ಕ್ರಿಯೆಯಿಂದ ಕೂಡಿವೆ. ಆದರೆ ದೇವಾಲಯದ ಒಳಭಾಗವೆಲ್ಲಾ ಹೆಚ್ಚಾಗಿ ಬರಿದಾಗಿದೆ. ಎಲ್ಲೋ ಒಂದೆರಡು ಚಿತ್ರಗಳಿದ್ದರೂ ಅವು ನಿಶ್ಚಲತೆ ಮತ್ತು ಶಾಂತಿಯನ್ನು ಸಾರುತ್ತವೆ. ಚಲನಾತ್ಮಕ ಮತ್ತು ಕ್ರಿಯಾಶೀಲ ಹೊರವಲಯದಿಂದ ನಿಶ್ಚಲತೆ ಮತ್ತು ಶಾಂತಿಯಿಂದ ಕೂಡಿದ ಒಳಭಾಗ ಬಹುಶಃ ಈ ದೇವಾಲಯದ ಮೂಲಭೂತ ವಿನ್ಯಾಸವಾಗಿ ಕಾಣುತ್ತದೆ. ಪರಮಾರ್ಥ ಸತ್ಯದ ಅನ್ವೇಷಣೆಯನ್ನು ಎಂದಿಗೂ ಕೈಬಿಟ್ಟಿಲ್ಲ.

ಚಿತ್ರಕಲೆಗೆ ಹೋಲಿಸಿದಂತೆ ವಾಸ್ತು ಮತ್ತು ಶಿಲ್ಪದ ತೌಲನಿಕ ಬೆಳವಣಿಗೆ ತನ್ನದೇ ಆದ ಕಥೆಯನ್ನು ಹೇಳುತ್ತದೆ. ಪ್ರಾಚೀನ ಕಾಲದಿಂದ ನಮಗೆ ದೊರೆಯುವ ಚಿತ್ರಗಳು, ವಾಸ್ತವವಾಗಿ, ಹೆಚ್ಚಾಗಿ ವಾಸ್ತು ಕಲೆಯ ಅಂಶದಿಂದ ಕೂಡಿವೆ. ಪಾರಮಾರ್ಥಿಕ ಸತ್ಯದ ಭಾವನೆಯನ್ನು ಪ್ರದರ್ಶಿಸಲು ಮಾನವನಿಗೆ ಚಿತ್ರಕಲೆಗಿಂತ ವಾಸ್ತು ಮತ್ತು ಶಿಲ್ಪ ಕಲೆಗಳಲ್ಲಿ ಹೆಚ್ಚು ಸಾಧ್ಯತೆ ಇದ್ದಂತೆ ಕಾಣುತ್ತದೆ.

ಛಿದ್ರ ವ್ಯಕ್ತಿತ್ವ :

ಹಿಂದೂ ಧರ್ಮೀಯನು ಒಂದು ಬಗೆಯ ಛಿದ್ರ ವ್ಯಕ್ತಿತ್ವವನ್ನು ಹೊಂದಿದ್ದಾನೆ. ಅತ್ಯುನ್ನತ ಮಟ್ಟದಲ್ಲಿ ಹಿಂದೂ ಧರ್ಮೀಯನು ಪರಮಾತ್ಮನ ಬಗೆಗಿನ ಒಳನೋಟವನ್ನು ಕಳೆದುಕೊಳ್ಳದೆ ಬಾಹ್ಯಸತ್ಯವನ್ನು ಒಪ್ಪಿಕೊಳ್ಳುತ್ತಾನೆ ಮತ್ತು ತನ್ನ ಒಳನೋಟವನ್ನು ಸದಾ ಶ್ರೀಮಂತಗೊಳಿಸಿಕೊಳ್ಳುವತ್ತ ಶ್ರಮಿಸುತ್ತಾನೆ. ಅತ್ಯಂತ ಕೆಳಮಟ್ಟದಲ್ಲಿ ಅವನ ಡಾಂಭಿಕತೆಗೆ ಸಾಟಿಯೇ ಇಲ್ಲ. ಹಿಂದೂ ಧರ್ಮೀಯನು ಬಹುಶಃ ಪ್ರಪಂಚದ ಅತಿಶ್ರೇಷ್ಠ ಡಾಂಭಿಕನಾಗಿದ್ದಾನೆ. ಪ್ರಪಂಚದ ಎಲ್ಲ ಭಾಗಗಳಲ್ಲಿ ಡಾಂಭಿಕರು ಇತರರನ್ನು ಮೋಸಗೊಳಿಸುವಂತೆ ಅವನು ಸಹ ಇತರರನ್ನು ಮೋಸಗೊಳಿಸುತ್ತಾನೆ. ಅಲ್ಲದೆ, ತನಗೇ ಮಾರಕವಾಗುವಂತೆ, ತನ್ನನ್ನು ತಾನೇ ಮೋಸಗೊಳಿಸಿಕೊಳ್ಳುತ್ತಾನೆ. ತೋರಿಕೆಯ ಸತ್ಯ ಮತ್ತು ಆಂತರಿಕ

ಸತ್ಯಗಳ ನಡುವೆ ಛಿದ್ರವಾದ ಅವನ ಮನಸ್ಸು ಅನೇಕ ಸಾರಿ ಹಾಗೆ ಮಾಡಲು ಪ್ರೋತ್ಸಾಹಿಸುತ್ತದೆ.

ಹಿಂದೆ ಮತ್ತು ಇಂದಿಗೂ ಹಿಂದೂ ಧರ್ಮ ಎಂತಹ ವಿಸ್ಮಯಕಾರಿ ಚಿತ್ರಣವನ್ನು ನಮಗೆ ನೀಡಿದೆ! ಬೇರೆ ದೇಶಗಳಲ್ಲೆಲ್ಲೂ ಕಾಣದ ರೀತಿಯಲ್ಲಿ ಹಿಂದೂ ಧರ್ಮ ತನ್ನ ಅನುಯಾಯಿಗಳಲ್ಲಿ ಅತಿಸಾಮಾನ್ಯರಾದವರೂ ಸಹ ಮನುಷ್ಯ – ಮನುಷ್ಯ ರಲ್ಲಿ ಮತ್ತು ವಸ್ತುಗಳಲ್ಲಿ ಆದಿ ಭೌತಿಕ ಸಮಾನತೆ ಅಥವಾ ಏಕತೆಯನ್ನು ಕಾಣುವಂತೆ ಮಾಡಿದೆ. ಆದಿ ಭೌತಿಕ ಸಮಾನತೆಯಲ್ಲಿ ನಂಬಿಕೆಯಿರುವುದರ ಜೊತೆ ಜೊತೆಗೇ ಸಾಮಾಜಿಕ ಅಸಮಾನತೆಯು ಅತ್ಯಂತ ಹೀನ ಆಚರಣೆಯೂ ರೂಢಿಯಲ್ಲಿದೆ. ಉತ್ತಮ ಸ್ಥಾನದಲ್ಲಿರುವ ಆದಿ ಭೌತಿಕ ಹಿಂದೂ ಬಡವರನ್ನು ಮತ್ತು ಕೆಳಜಾತಿಯವರನ್ನು ಪ್ರಾಣಿಗಳಂತೆ, ಪ್ರಾಣಿಗಳನ್ನು ಕಲ್ಲುಗಳಂತೆ ಮತ್ತು ಪ್ರತಿಯೊಬ್ಬರನ್ನು ತರತಮ ಭಾವನೆಯಿಂದ ಕಾಣುವುದಿಲ್ಲವೆ ಎಂದು ನಾನು ಅನೇಕ ಸಾರಿ ವಿಸ್ಮಯಪಟ್ಟಿದ್ದೇನೆ. ಸಸ್ಯಾಹಾರ ಮತ್ತು ಅಹಿಂಸೆಗಳು ಸ್ಪಷ್ಟ ವಾಗಿ ಮರೆಮಾಚಿದ ಕ್ರೌರ್ಯಗಳಾಗಿ ಅವನತಿ ಹೊಂದುತ್ತವೆ. ಇಲ್ಲಿಯವರೆಗಿನ ಎಲ್ಲ ಮಾನವ ಸಾಧನೆಯನ್ನು ಗಣನೆಗೆ ತೆಗೆದುಕೊಂಡಾಗ ಸತ್ಯವು ಒಂದು ಹಂತದಲ್ಲಿ ಕ್ರೌರ್ಯವಾಗಿ ಸೌಂದರ್ಯವು ಸ್ವೇಚ್ಛಾಚಾರವಾಗಿ ಪರ್ಯವಸಾನ ಹೊಂದುತ್ತದೆ ಎಂಬುದು ವಿದಿತವಾಗಿದೆ. ಇದು ಬೇರೆಡೆಗಳಿಗಿಂತ ಸತ್ಯ ಮತ್ತು ಸೌಂದರ್ಯದ ಅತ್ಯುನ್ನತ ಮಜಲುಗಳನ್ನು ಮುಟ್ಟಿದ್ದ ಮತ್ತು ಇನ್ನೆಲ್ಲೂ ಮಾ ನವನು ಕಾಣದ ಆಳದ ಕತ್ತಲ ರೂಪಕ್ಕೂ ಇಳಿದಂತಹ, ಹಿಂದೂ ಧರ್ಮದ ಮಟ್ಟಿಗೆ ಹೆಚ್ಚು ಸತ್ಯವಾಗಿದೆ. ಹಿಂದುವು ತನ್ನ ವೃತ್ತಿ, ಯಂತ್ರ ಹಾಗೂ ಉತ್ಪಾದನೆಗೆ ಸಂಬಂಧಿಸಿದ, ಕುಟುಂಬ, ಜನಸಂಖ್ಯಾ ಹೆಚ್ಚಳ, ಹಸಿವು ಮತ್ತು ದಬ್ಬಾಳಿಕೆಗೆ ಸಂಬಂಧಿಸಿದ ಸತ್ಯಾಂಶಗಳನ್ನು ವೈಜ್ಞಾನಿಕ ಹಾಗೂ ಧರ್ಮ ನಿರ ಪೇಕ್ಷಕ ಬುದ್ಧಿಯಿಂದ ಒಪ್ಪಿಕೊಳ್ಳುವುದನ್ನು ಕಲಿಯದ ಹೊರತು ಅವನಿಗೆ ತನ್ನ ಛಿದ್ರ ವ್ಯಕ್ತಿತ್ವವನ್ನು ಸರಿಪಡಿಸಿಕೊಳ್ಳುವ ಅಥವಾ ಇತಿಹಾಸದುದ್ದಕ್ಕೂ ತನ್ನ ನ್ನು ನಾಶಮಾಡಿದ ಮತಾಂಧತೆಗೆ ಮಾರಣಾಂತಿಕ ಪೆಟ್ಟುಕೊಡುವ ಸಾಧ್ಯತೆ ಖಂಡಿತ ಇಲ್ಲ.

ಹಿಂದೂ ಧರ್ಮವು ತನ್ನ ಭಾವುಕತೆಯ ನೆಲೆಯನ್ನು ಹಾಗೂ ಎಲ್ಲ ಜೀವ ಮತ್ತು ವಸ್ತುಗಳಲ್ಲಿ ಏಕತೆಯನ್ನು ಕಾಣುವ ಹಂಬಲವನ್ನು ಬಿಟ್ಟುಬಿಡಬೇಕೆಂದು ನಾನು ಹೇಳುತ್ತಿಲ್ಲ. ಅದು ಬಹುಶಃ ಹಿಂದೂ ಧರ್ಮದ ಅತ್ಯಂತ ಶ್ರೇಷ್ಠ ಗುಣ. ಒಬ್ಬ ಹಳ್ಳಿಯ ಹುಡುಗನು ಮೇಕೆಯ ಮರಿಯನ್ನು ಎತ್ತಿಕೊಂಡು ತನ್ನ ಪ್ರಾಣ

ದಂತೆ ಅಪ್ಪಿಕೊಳ್ಳುವ, ಒಂದು ವಾಹನ ವೇಗವಾಗಿ ಚಲಿಸಿದಾಗ ಅಥವಾ ದಟ್ಟ ವಾಗಿ ಕವಿದ ಬೇರು ಮತ್ತು ಹಸಿರು ಟೊಂಗೆಗಳನ್ನು ತನ್ನದೇ ಆದ ಭಾಗವಾಗಿ ಕಾಣುವ ಪ್ರಜ್ಞೆ ಮತ್ತು ಒಮ್ಮೆಯೇ ಉಕ್ಕಿ ಹರಿಯುವ ವಿಶ್ವವ್ಯಾಪಕ ಭಾವ ಗಳು ಬಹುಶಃ ಎಲ್ಲ ಧರ್ಮಗಳಿಗೂ ಸಾಮಾನ್ಯವಾಗಿರುವ ಗುಣವಾಗಿದೆ. ಆದರೆ ಹಿಂದೂ ಧರ್ಮದಲ್ಲಿಯಂತೆ ಮತ್ತಾವ ಧರ್ಮದಲ್ಲೂ ಅದು ಆಳವಾದ ಮತ್ತು ಗಾಢವಾದ ಭಾವನೆಯ ಸ್ಥಿತಿಯನ್ನು ಪಡೆದಿಲ್ಲ. ದೇವರು ಇದ್ದಾನೊ ಅಥವಾ ಇಲ್ಲವೊ ನನಗೆ ಗೊತ್ತಿಲ್ಲ. ಆದರೆ, ಅಪರೂಪದ ಭಾವನೆಯಾಗಿಯಾದರೂ ತಾನು ಎಲ್ಲ ಜೀವ ಜಂತುಗಳ ಮತ್ತು ವಸ್ತುಗಳ ಒಡಹುಟ್ಟಿದವನು ಎಂಬ ಭಾವ ಇದೆ ಎಂದು ನನಗೆ ಗೊತ್ತು. ಈ ಭಾವವನ್ನು ಹೋರಾಟವೂ ಸೇರಿ ದಂತೆ ಎಲ್ಲ ಚಟುವಟಿಕೆಯ ಹಿನ್ನೆಲೆಯನ್ನಾಗಿ ಮಾಡಿಕೊಳ್ಳುವುದು ಕಾರ್ಯರೂಪ ಕ್ಕೆ ತರಲು ಅಸಾಧ್ಯವಾದ ಸಾಹಸವಾಗಿದೆ. ಆದರೆ ಬಾಹ್ಯದ ಅತಿಯಾದ ಏಕ ಪಕ್ಷೀಯ ಒಪ್ಪಿಗೆಯಿಂದ ತಲೆದೋರಿದ ಹೋರಾಟದಿಂದ ಯೂರೋಪು ಸಾಯು ತ್ತಿದೆ. ಅಂತರಂಗದ ಏಕಪಕ್ಷೀಯ ಒಪ್ಪಿಗೆಯ ಪರಿಣಾಮವಾಗಿ ಹುಟ್ಟಿಕೊಂಡ ಜಡತೆಯಿಂದ ಭಾರತ ಅಷ್ಟೇ ಸಾಯುತ್ತಿದೆ. ನಾನು ಜಡತೆಗಿಂತ ಹೋರಾಟ ದಿಂದ ಸಾಯಲು ಇಚ್ಛಿಸುತ್ತೇನೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಈ ಎರಡು ವಿಧದ ವಿಚಾರಗಳು ಮಾತ್ರ ಮಾನವನ ಮುಂದಿರುವ ಸಾಧ್ಯತೆಗಳಾಗಿವೆಯೆ? ಒಂದು ಇನ್ನೊಂದಕ್ಕೆ ಅಡಿಯಾಳಾಗದ ರೀತಿಯಲ್ಲಿ ವೈಜ್ಞಾನಿಕ ಅನ್ವೇಷಣೆಯ ಗುಣವನ್ನು ಏಕತೆಯ ಭಾವನಾತ್ಮಕ ಗುಣದೊಡನೆ ಹೊಂದಿಕೊಳ್ಳುವಂತೆ ಸರಿ ಸಮಾನವಾದ ಎರಡು ಗುಣಗಳನ್ನಾಗಿ ಕಾಣಲು ಸಾಧ್ಯವಾಗುವುದಿಲ್ಲವೆ? ವೈಜ್ಞಾ ನಿಕ ದೃಷ್ಟಿ ಜಾತಿ ಮತ್ತು ಆಸ್ತಿಯ ವಿರುದ್ಧ ಹಾಗೂ ಮಹಿಳೆ ಮತ್ತು ಸಹಿಷ್ಣುತೆ ಯ ಪರವಾಗಿ ಕೆಲಸ ಮಾಡುತ್ತದೆ. ಅದರ ಪರಿಣಾಮವಾಗಿ ಹಸಿವು ಮತ್ತು ಮೂಲ ಅವಶ್ಯಕತೆಗಳನ್ನು ಪೂರೈಸಲು ಅಗತ್ಯವಾದ ಸಂಪತ್ತಿನ ಸೃಷ್ಟಿಗೆ ದಾರಿ ಮಾಡಿಕೊಡುತ್ತದೆ. ಏಕತೆಯ ಸೃಜನಶೀಲಗುಣ ಒಂದು ಸಮತೋಲನವನ್ನು ತಂದುಕೊಡುತ್ತದೆ. ಇಲ್ಲದಿದ್ದಲ್ಲಿ ಮಾನವನ ಅತ್ಯುನ್ನತ ಪ್ರಯತ್ನವೂ ಕೇವಲ ದುರಾಸೆ, ದ್ವೇಷ ಮತ್ತು ಅಸೂಯೆಗಾಗಿ ಪರಿಣಮಿಸುತ್ತದೆ.

ಹೊಸ ಮನಸ್ಸು :

ವೈಜ್ಞಾನಿಕ ಹಾಗೂ ಭಾವನಾತ್ಮಕ ಗುಣಗಳ ಹೊಂದಾಣಿಕೆಯಿಂದ ಕೂಡಿದ ಹೊಸ ಮನಸ್ಸನ್ನು ಹಿಂದೂ ಧರ್ಮವು ಹೊಂದೀತೆ ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಆದರೆ ಹಿಂದೂ ಧರ್ಮ ಅಂದರೆ ಏನು? ಇದಕ್ಕೆ ಒಂದು ಉತ್ತರ ಇಲ್ಲ; ಉತ್ತರಗಳ ಸರಣಿಯೇ ಇದೆ. ಇಷ್ಟು ಮಾತ್ರ ನಿಜ, ಹಿಂದೂ

ಧರ್ಮ ಎಂಬುದು ನಿರ್ದಿಷ್ಟ ಸಿದ್ಧಾಂತಗಳಿಂದ ಕೂಡಿಲ್ಲ. ಅದಕ್ಕೆ ನಿರ್ದಿಷ್ಟ ಸಂಘಟನೆಯೂ ಇಲ್ಲ. ಅಥವಾ ಯಾವುದಾದರೂ ಒಂದು ನಂಬಿಕೆಯು ವಿಧಿಯಾಗಲಿ, ನಡೆವಳಿಕೆಯಾಗಲಿ ಹಿಂದೂ ಧರ್ಮಕ್ಕೆ ಅತ್ಯವಶ್ಯಕ ಎನ್ನುವ ಹಾಗಿಲ್ಲ. ದುಷ್ಟತನದಿಂದ ಕೂಡಿದ ಕೆಲವು ಮತ್ತು ಮಾನವನ ಹಿತಕ್ಕೆ ಸಾರ್ಥಕವಾದ ಕೆಲವು ಸ್ಮೃತಿಗಳ, ಪುರಾಣಗಳ, ತತ್ವಶಾಸ್ತ್ರಗಳ, ಸಂಪ್ರದಾಯಗಳ ಹಾಗೂ ರೂಢಿಗಳ ಒಂದು ಸಮಗ್ರ ಪ್ರಪಂಚವೇ ಅಲ್ಲಿದೆ. ಅದೆಲ್ಲಾ ಒಟ್ಟುಗೂಡಿ ಹಿಂದೂ ಮನಸ್ಸು ನಿರ್ಮಾಣವಾಗಿದೆ. ಕೆಲವು ವಿದ್ವಾಂಸರು ಸಹಿಷ್ಣುತೆಯ ಅಥವಾ ಭಿನ್ನತೆಯಲ್ಲಿ ಏಕತೆಯ ಸಿದ್ಧಾಂತದಲ್ಲಿ ಆ ಗುಣವನ್ನು ಕಾಣುತ್ತಾರೆ. ನಾವು ಈ ಸಿದ್ಧಾಂತ ಮಿತಿಯನ್ನು ಕಂಡಿದ್ದೇವೆ. ಮನಸ್ಸಿನ ಜಡತೆಯನ್ನು ಹೋಗಲಾಡಿಸಲು ಅದನ್ನು ಪುನರ್ವಿಮರ್ಶಿಸುವ ಅಗತ್ಯ ಉಂಟಾಗಿದೆ. ಉದಾತ್ತ ಹಿಂದೂ ಧರ್ಮವು ಒಳ್ಳೆಯ ಅಭಿಪ್ರಾಯ ಮತ್ತು ಪ್ರಭಾವಗಳಿಗೆ, ಅವು ಎಲ್ಲಿಂದಾದರೂ ಬರಲಿ, ಸದಾ ತೆರೆದ ಮನಸ್ಸನ್ನು ಹೊಂದಿದೆ, ಆದರೆ ಮತಾಂಧ ಹಿಂದೂ ಧರ್ಮ ಅದನ್ನು ಹೊಂದಿಲ್ಲ ಎಂಬ ನಂಬಿಕೆಯು ಈ ಸಿದ್ಧಾಂತದ ಒಂದು ಸಾಮಾನ್ಯ ದೋಷವಾಗಿದೆ. ಇದು ನನಗೆ ಒಂದು ಮೂಢನಂಬಿಕೆಯಾಗಿ ಕಾಣಿಸುತ್ತದೆ. ಹಿಂದುವು ಹೊರಗಿನ ದೇಶಗಳ ಹೊಸ ವಿಚಾರಗಳಿಗಾಗಿ ಮತ್ತು ವಸ್ತುಗಳಿಗಾಗಿ ಅನ್ವೇಷಣೆ ಮಾಡಿದುದಾಗಲಿ ಅಥವಾ ಅವನ್ನು ಒಪ್ಪಿಕೊಳ್ಳಲು ಸಿದ್ಧವಾಗಿರುವುದಾಗಲಿ ಭಾರತೀಯ ಇತಿಹಾಸದ ಪುಟಗಳಲ್ಲಿ ನನಗೆ ಕಂಡು ಬಂದಿಲ್ಲ. ಭಾರತ ಮತ್ತು ಚೀನಗಳ ದೀರ್ಘ ಒಡನಾಟದಲ್ಲಿ ಭಾರತ ಆಮದು ಮಾಡಿಕೊಂಡ ಕೇವಲ ಐದು ಪ್ರಯೋಜನದ ವಸ್ತುಗಳನ್ನು ಮಾತ್ರ ಪಟ್ಟಿ ಮಾಡಲು ನನಗೆ ಸಾಧ್ಯವಾಗಿದೆ. ಅವುಗಳಲ್ಲಿ ಒಂದು ಕುಂಕುಮ. ಆಮದು ಮಾಡಿಕೊಂಡ ವಿಚಾರಗಳು ಇಲ್ಲವೇ ಇಲ್ಲ.

ಹೊರ ಪ್ರಪಂಚದೊಡನೆ ಸ್ವತಂತ್ರ ಭಾರತ ಮುಖ್ಯವಾಗಿ ಏಕಮುಖ ವ್ಯವಹಾರವನ್ನು ಹೊಂದಿತ್ತು. ಅಲ್ಲಿಯ ವಿಚಾರಗಳ ಆಮದು ಇಲ್ಲ. ಬೆಳ್ಳಿಯಂತಹ ಕೆಲವು ವಸ್ತುಗಳನ್ನು ಮಾತ್ರ ಆಮದು ಮಾಡಿಕೊಳ್ಳುತ್ತಿತ್ತು. ವಿದೇಶಿ ಜನಾಂಗಗಳು ಭಾರತದಲ್ಲೇ ನೆಲೆಸಿ ಕಾಲಕ್ರಮದಲ್ಲಿ ಹಿಂದೂ ಧರ್ಮದ ಒಂದು ಪಂಗಡ ಅಥವಾ ಜಾತಿ ಆದಾಗ ಮಾತ್ರ ಕೊಟ್ಟು ತೆಗೆದುಕೊಳ್ಳುವ ಕ್ರಿಯೆ ನಡೆಯುತ್ತಿತ್ತು. ಅದಕ್ಕೆ ವಿರುದ್ಧವಾಗಿ ದಾಸ್ಯಕ್ಕೊಳಗಾದ ಭಾರತ ಮತ್ತು ಅದರ ಜೊತೆಗೆ ಹಿಂದೂ ಧರ್ಮದ ಗೆದ್ದ ರಾಜರ ಭಾಷೆ, ಅಭ್ಯಾಸ ಮತ್ತು ಜೀವನ ವಿಧಾನಗಳನ್ನು ಅನುಕರಣ ಮಾಡಲು ಗಮನಾರ್ಹ ಕಾಳಜಿ ವಹಿಸಿದೆ. ಸ್ವತಂತ್ರವಾಗಿದ್ದಾಗ ಸ್ವಯಂ ಪೂರ್ಣವಾಗಿದ್ದ ಮನಸ್ಸು ದಾಸ್ಯಕ್ಕೊಳಗಾದ ಕೂಡಲೆ ಪೂರ್ಣ

ಪರಾವಲಂಬಿಯಾಯಿತು. ಹಿಂದೂ ಧರ್ಮದ ಈ ದೌರ್ಬಲ್ಯವನ್ನು ಎಂದೂ ಯಾರೂ ಗುರುತಿಸಿಲ್ಲ. ಅಶಿಕ್ಷಿತರಾದ ಉದಾತ್ತ ಹಿಂದುಗಳು ಅದಕ್ಕೆ ವಿರುದ್ಧವಾದ ವಿಚಾರಗಳನ್ನು ಪ್ರಚಾರ ದೃಷ್ಟಿಯಿಂದ ಹರಡುತ್ತಿರುವುದು ದುರದೃಷ್ಟಕರ. ಸ್ವತಂತ್ರ ಸ್ಥಿತಿಯಲ್ಲಿ ಹಿಂದೂ ಮನಸ್ಸು ವಾಸ್ತವವಾಗಿ ತೆರೆದುಕೊಂಡಿತ್ತು ಆದರೆ ಅದು ಭಾರತದೊಳಗಿನ ಘಟನೆಗಳಿಗೆ ಮಾತ್ರ ಸೀಮಿತವಾಗಿತ್ತು. ಹೊರಗಿನ ವಿಚಾರಗಳು ಮತ್ತು ಪ್ರಭಾವಗಳಿಗೆ ಅದರ ಬಾಗಿಲು ಮುಚ್ಚಿತ್ತು. ಇದು ಅದರ ಮುಖ್ಯ ದೌರ್ಬಲ್ಯಗಳಲ್ಲಿ ಒಂದು. ಈ ಕಾರಣದಿಂದಲೇ ಭಾರತವು ವಿದೇಶೀ ಆಳ್ವಿಕೆಗೆ ಒಳಗಾಗಬೇಕಾಯಿತು. ಈಗ ಹಿಂದೂ ಮನಸ್ಸು ಭಾರತದೊಳಗೆ ಏನು ನಡೆಯುತ್ತದೋ ಅದಕ್ಕೆ ಮಾತ್ರವಲ್ಲದೆ ಹೊರಪ್ರಪಂಚಕ್ಕೂ ತನ್ನ ಮನಸ್ಸನ್ನು ತೆರೆದಿಡಬೇಕಾಗಿದೆ. ಅದು ತನ್ನ ಭಿನ್ನತೆಯಲ್ಲಿ ಏಕತೆ ಸಿದ್ಧಾಂತವನ್ನು ಇಡೀ ಮಾನವ ಕುಲದ ವಿಚಾರಗಳಿಗೆ ಮತ್ತು ಆಚರಣೆಗೆ ಅನ್ವಯಿಸಬೇಕು. ಹೊರಗಿನ ವಿಚಾರಗಳನ್ನು ಪೂರ್ಣ ಉಪೇಕ್ಷಿಸುವ ಇಲ್ಲವೆ ಅಸಂಬದ್ಧವಾಗಿ ಸ್ವೀಕರಿಸುವ ಅಭ್ಯಾಸವನ್ನು ಕಿತ್ತುಹಾಕಲು ದೃಢ ಪ್ರಯತ್ನ ಮಾಡಬೇಕಾಗಿದೆ.

ಹಿಂದೂ—ಮುಸ್ಲಿಂ ಏಕತೆ :

ಇಂದು ಹಿಂದೂ ಧರ್ಮದ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಯುದ್ಧ ಮೇಲುನೋಟಕ್ಕೆ ಹಿಂದೂ ಮುಸ್ಲಿಂ ಸಂಘರ್ಷದಲ್ಲಿ ಅಭಿವ್ಯಕ್ತವಾಗುತ್ತಿದೆ. ಆದರೆ 5000 ವರ್ಷಗಳು ಅಥವಾ ಇನ್ನೂ ಹೆಚ್ಚು ಕಾಲದಿಂದ ಪರಿಹಾರ ಕಾಣದೆ ಇರುವ ಸಂಘರ್ಷಗಳ ಬಗ್ಗೆ ಗಮನಹರಿಸದಿರಲು, ತನ್ನ ಧರ್ಮ ಮತ್ತು ದೇಶಗಳ ಬಗ್ಗೆ ತಿಳುವಳಿಕೆ ಇರುವ, ಯಾವ ಹಿಂದುವಿಗೂ ಸಾಧ್ಯವಿಲ್ಲ. ಜಾತಿ ಮತ್ತು ಆಸ್ತಿಗಳ ವಿರುದ್ಧ ಮತ್ತು ಮಹಿಳೆಯ ಪರ ಇರದ ಯಾವ ಹಿಂದುವೇ ಆಗಲಿ ಮುಸ್ಲಿಮರ ಬಗ್ಗೆ ಪ್ರಾಮಾಣಿಕವಾಗಿ ಸಹಿಷ್ಣುತೆಯನ್ನು ತಾಳಿರಲಾರ. ಅದೇ ರೀತಿ ಜಾತಿ ಮತ್ತು ಆಸ್ತಿಗಳ ವಿರುದ್ಧ ಹಾಗೂ ಮಹಿಳೆಯರ ಪರ ಇರುವ ಹಿಂದೂ ಅನಿವಾರ್ಯವಾಗಿ ಮುಸ್ಲಿಮರ ಬಗ್ಗೆ ಸಹಿಷ್ಣುತೆ ತಾಳುತ್ತಾನೆ. ಹಿಂದೂ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಯುದ್ಧ ಈಗ ತನ್ನ ಅತ್ಯಂತ ಸಂಕೀರ್ಣ ಹಂತವನ್ನು ತಲುಪಿದೆ. ಬಹುಶಃ ಅದರ ಅಂತ್ಯ ಸಮೀಪಿಸುತ್ತಿದೆ. ಎಂದು ಹೇಳಬಹುದು. ಮತಾಂಧ ಹಿಂದೂಗಳು, ಅವರ ಉದ್ದೇಶಗಳು ಏನೇ ಇರಲಿ, ಯಶಸ್ವಿಯಾಗಬೇಕಾದರೆ ಭಾರತೀಯ ರಾಷ್ಟ್ರವನ್ನು ಒಡೆದು ತುಂಡು ಮಾಡಬೇಕು. ಇದು ಕೇವಲ ಹಿಂದೂ ಮುಸ್ಲಿಂ ದೃಷ್ಟಿಕೋನದಿಂದಲ್ಲ, ಜಾತಿ ಮತ್ತು ಪ್ರಾಂತಗಳ ದೃಷ್ಟಿಯಿಂದಲೂ. ಉದಾತ್ತ ಹಿಂದೂಗಳು ಮಾತ್ರ ಈ ರಾಷ್ಟ್ರವನ್ನು ಉಳಿಸಬಲ್ಲರು. ಆದ್ದರಿಂದ 5000 ವರ್ಷಗಳಿಗಿಂತಲೂ ಹಿಂದಿ

ಸಿಂದ ನಡೆಯುತ್ತಿರುವ ಈ ಯುದ್ಧ ಒಂದು ಗಂಭೀರ ಹಂತವನ್ನು ತಲುಪಿದೆ. ಈಗ ಭಾರತೀಯ ಜನತೆಯು ಒಂದು ರಾಜಕೀಯ ಸಮುದಾಯ ಮತ್ತು ರಾಷ್ಟ್ರವಾಗಿ ಅಸ್ತಿತ್ವದಲ್ಲುಳಿಯುವುದು ಹಿಂದೂ ಉದಾತ್ತತೆಯು ಮತಾಂಧತೆಯ ಮೇಲೆ ವಿಜಯ ಸಾಧಿಸುವುದನ್ನು ಅವಲಂಬಿಸಿದೆ.

ಧಾರ್ಮಿಕ ಮತ್ತು ಮಾನವೀಯ ಸಮಸ್ಯೆಯು ಇಂದು ಮುಖ್ಯವಾಗಿ ರಾಜಕೀಯ ಸಮಸ್ಯೆಯಾಗಿದೆ. ಇಂದು ಸಂಪೂರ್ಣ ಮಾನಸಿಕ ಕ್ರಾಂತಿಯನ್ನು ಸಾಧಿಸುವುದು ಅಥವಾ ನಾಶವಾಗಿ ಹೋಗುವುದು ಈ ಎರಡರಲ್ಲಿ ಒಂದನ್ನು ಹಿಂದೂ ಧರ್ಮೀಯನು ಆರಿಸಿಕೊಳ್ಳಬೇಕಾಗಿದೆ. ಅವನು ಮುಸ್ಲಿಮನಾಗಬೇಕು ಮತ್ತು ಕ್ರಿಶ್ಚಿಯನ್ನನಾಗಬೇಕು ಮತ್ತು ಹಾಗೆ ಭಾವಿಸಬೇಕು. ನಾನು ಹಿಂದೂ ಮುಸ್ಲಿಂ ಐಕ್ಯತೆಯನ್ನು ಕುರಿತು ಮಾತನಾಡುತ್ತಿಲ್ಲ. ಏಕೆಂದರೆ ಅದು ರಾಜಕೀಯವಾದುದು, ಸಂಘಟನೆಗೆ ಸಂಬಂಧಿಸಿದುದು ಅಥವಾ ಹೆಚ್ಚೆಂದರೆ ಒಂದು ಸಾಂಸ್ಕೃತಿಕ ಸಮಸ್ಯೆ. ಹಿಂದೂ ಭಾವನಾತ್ಮಕವಾಗಿ ಕ್ರಿಶ್ಚಿಯನ್ನನೊಡನೆ ಅಥವಾ ಮುಸ್ಲಿಮನೊಡನೆ ತನ್ನನ್ನು ಗುರುತಿಸಿಕೊಳ್ಳುವುದು–ಧಾರ್ಮಿಕ ನಂಬಿಕೆ ಮತ್ತು ಆಚರಣೆಯಲ್ಲಲ್ಲ; ನಾನು ಅವನೆಂದು ಭಾವಿಸುವುದನ್ನು–ಕುರಿತು ನಾನು ಮಾತನಾಡುತ್ತಿದ್ದೇನೆ. ಅಂತಹ ಭಾವನಾತ್ಮಕ ಏಕೀಕರಣ ಸಾಧಿಸಲು ತುಂಬಾ ಕಷ್ಟವಾಗಬಹುದು. ಏಕೆಂದರೆ ಅನೇಕ ಸಾರಿ ಏಕಪಕ್ಷೀಯವಾಗಿದ್ದು ಕೊಲೆ ಮತ್ತು ಹತ್ಯಾಕಾಂಡಗಳ ನೋವನ್ನು ಅನುಭವಿಸಬೇಕಾಗಬಹುದು. ಅಮೆರಿಕದ ಅಂತರ್ ಯುದ್ಧ (Civil War) ಇಲ್ಲಿ ನನ್ನ ನೆನಪಿಗೆ ಬರುತ್ತಿದೆ. ಅಲ್ಲಿ ನಾಲ್ಕು ವರ್ಷಗಳ ಕಾಲ ಸೋದರ ಸೋದರನನ್ನು ಕೊಂದ. ಆರು ಲಕ್ಷ ಜನರು ಮಡಿದರು. ಆದರೆ ಉತ್ತರ ಮತ್ತು ದಕ್ಷಿಣದ ಸೋದರರಲ್ಲಿ ಏಕತೆಯ ಭಾವನೆಯನ್ನು ತರುವ ವಿಜಯ ಪತಾಕೆಯನ್ನು ಆಬ್ರಾಹಂ ಲಿಂಕನ್ ಮತ್ತು ಅಮೆರಿಕನ್ ಜನತೆ ಎತ್ತಿ ಹಿಡಿದರು. ಭಾರತದ ಭವಿಷ್ಯ ಗರ್ಭದಲ್ಲಿ ಏನೇ ಇರಲಿ ಮುಸ್ಲಿಮನೊಡನೆ ಈ ಭಾವನಾತ್ಮಕ ಏಕತೆಯನ್ನು ಸಾಧಿಸಲು ಹಿಂದೂ ತನ್ನ ಒಳಹೊರಗನ್ನೆಲ್ಲಾ ಶೋಧಿಸಿಕೊಳ್ಳಬೇಕು. ಎಲ್ಲ ಜೀವಿಗಳಲ್ಲಿ ಮತ್ತು ವಸ್ತುಗಳಲ್ಲಿ ಏಕತೆಯನ್ನು ಕಾಣುವ ಹಿಂದೂ ಮುಸ್ಲಿಮನೊಡನೆ ತಾನು ಒಂದು ಎಂದು ಭಾವಿಸುವುದು ಭಾರತ ದೇಶದ ರಾಜಕೀಯ ಅವಶ್ಯಕತೆಯೂ ಆಗಿದೆ. ಈ ದಾರಿಯಲ್ಲಿ ಅನೇಕ ವಿಘ್ನಗಳು, ಸೋಲುಗಳು ಎದುರಾಗಬಹುದು. ಆದರೆ ಹಿಂದೂ ಮನಸ್ಸು ಯಾವ ದಿಕ್ಕಿನತ್ತ ಸಾಗಬೇಕು ಎಂಬುದು ಮಾತ್ರ ಖಚಿತವಾಗಿದೆ.

ಶುಭ್ರ ಮನಸ್ಸು :

ಈ ಉದಾತ್ತತೆ ಮತ್ತು ಮತಾಂಧತೆಗಳ ನಡುವಿನ ಯುದ್ಧವನ್ನು ಕೊನೆಗೊಳಿಸ

ಲು ಅತ್ಯಂತ ಉತ್ತಮ ವಿಧಾನ ಯಾವುದೆಂದರೆ ಧರ್ಮದೊಡನೆ ಕಾಳಗಕ್ಕಿಳಿಯುವುದು ಎಂದು ಹೇಳಬಹುದು. ಅದು ಸರಿಯಾದರೂ ದಾರಿ ಬಹು ಕಠಿನವಾದುದು. ಹಳೆಯ ಕುಟಿಲ ಕದೀಮನಂತಿರುವ ಈ ಹಿಂದೂ ಧರ್ಮ, ಧರ್ಮ ವಿರೋಧಿಯನ್ನು ನುಂಗಿ ತನ್ನ ಅನೇಕ ಮತ ಪಂಗಡಗಳಲ್ಲಿ ಒಂದರಂತೆ ಕಾಣುವುದಿಲ್ಲ ಎಂಬ ಭರವಸೆಯಾದರೂ ಎಲ್ಲಿವೆ ? ಅಲ್ಲದೆ ಹಿಂದೂ ಧರ್ಮದ ಮತಾಂಧ ಗುಂಪುಗಳು ಅರೆಶಿಕ್ಷಿತರು ಮತ್ತು ಪಟ್ಟಣ ವಾಸಿಗಳಿಂದ ವ್ಯವಸ್ಥಿತ ಬೆಂಬಲ ಪಡೆಯುತ್ತವೆ. ಆದರೆ ಹಳ್ಳಿಗಳ ಅಶಿಕ್ಷಿತರು ತತ್‌ಕ್ಷಣ ಎಷ್ಟೇ ಉದ್ರೇಕಗೊಂಡರೂ ಅವರ ಶಾಶ್ವತ ನೆಲೆಯಾಗಲಾರರು. ಅನೇಕ ಶತಮಾನಗಳ ದೀರ್ಘ ವಿವೇಕವು ಹಳ್ಳಿಗರನ್ನು ಸುಶಿಕ್ಷಿತರಷ್ಟೇ ಸಹಿಷ್ಣುತೆಯುಳ್ಳವರನ್ನಾಗಿ ಮಾಡಿದೆ. ಹಿಂದೂ ಧರ್ಮದ ಮತಾಂಧ ಗುಂಪುಗಳು ಅಂಥದೇ ಜಾತಿ ಮತ್ತು ನಾಯಕತ್ವದ ಪರಿಕಲ್ಪನೆಗಳನ್ನಾಧರಿಸಿರುವ ಪ್ರಜಾಪ್ರಭುತ್ವ ವಿರೋಧಿಗಳಾದ ಕಮ್ಯುನಿಸಂ ಮತ್ತು ಫ್ಯಾಸಿಸಂಗಳಿಂದ ಬೆಂಬಲ ಪಡೆಯಲು ಧರ್ಮ ವಿರೋಧಿ ಮುಸುಕನ್ನು ಧರಿಸಬಹುದು.
ಹಿಂದೂ ಅನೇಕ ಶತಮಾನಗಳಿಂದ ಕಲುಷಿತವಾದ ತನ್ನ ಮನಸ್ಸನ್ನು ತೊಳೆದು ಶುಭ್ರಗೊಳಿಸಿಕೊಳ್ಳಬೇಕಾದ ಕಾಲ ಈಗ ಬಂದಿದೆ. ಅವನು ಜೀವನದ ಸತ್ಯ ಸಂಗತಿಗಳು ಮತ್ತು ಪಾರಮಾರ್ಥಿಕ ಸತ್ಯದ ಬಗೆಗಿನ ತನ್ನ ಅರಿವಿನ ನಡುವೆ ಒಂದು ಪ್ರಾಮಾಣಿಕ ಮತ್ತು ಫಲದಾಯಕ ಸಂಬಂಧವನ್ನು ಹೊಂದಬೇಕಾಗಿದೆ. ಇದುವರೆಗೂ ಅವನ ಧರ್ಮವನ್ನು ಭ್ರಷ್ಟಗೊಳಿಸಿ ಅವನ ದೇಶದ ಇತಿಹಾಸವನ್ನು ಛಿದ್ರಗೊಳಿಸಿರುವ ಜಾತಿ, ಮಹಿಳೆ, ಆಸ್ತಿ ಮತ್ತು ಸಹಿಷ್ಣುತೆಗಳಿಗೆ ಸಂಬಂಧಿಸಿದಂತೆ ಮತಾಂಧ ಹಿಂದೂ ಗುಂಪುಗಳನ್ನು ಈ ನೆಲೆಯಿಂದ ಮಾತ್ರ ದಮನ ಮಾಡಲು ಸಾಧ್ಯ. ಹಿಮ್ಮೆಟ್ಟುವ ದಿನಗಳಲ್ಲಿ ಅನೇಕ ಸಾರಿ ಮತಾಂಧತೆಯು ಹಿಂದೂ ಉದಾತ್ತತೆಯೊಳಗೆ ನುಸುಳಿ ಬಂದಿರುವುದುಂಟು. ಅದು ಪುನರಾವರ್ತನೆಯಾಗದಿರಲಿ. ಸಮಸ್ಯೆಗಳು ಸ್ಪಷ್ಟವಾಗಿವೆ ಮತ್ತು ಅವನ್ನು ಖಚಿತವಾಗಿ ನಿರ್ವಚಿಸಲಾಗಿವೆ. ರಾಜಿ, ಸಂಧಾನಗಳು ಹಿಂದಿನ ತಪ್ಪುಗಳನ್ನೇ ಮರುಕಳಿಸುವಂತೆ ಮಾಡುತ್ತವೆ. ಈ ಹೀನ ಯುದ್ಧವನ್ನು ಈಗ ಕೊನೆಗಾಣಿಸಲೇಬೇಕು. ವೈಚಾರಿಕತೆಯನ್ನು ಭಾವನಾತ್ಮಕತೆಯೊಡನೆ ಒಟ್ಟುಗೂಡಿಸಲು ಭಾರತೀಯ ಮನಸ್ಸು ಹೊಸ ಪ್ರಯತ್ನದಲ್ಲಿ ತೊಡಗಬೇಕು. ವಿಭಿನ್ನತೆಯಲ್ಲಿ ಏಕತೆಯು ಒಂದು ಜಡ ತತ್ವವಾಗದೆ ಶಕ್ತಿಯುತ ಸಿದ್ಧಾಂತವಾಗಬೇಕು. ಅದು ಎಲ್ಲ ಜೀವಿಗಳಲ್ಲಿ ಮತ್ತು ವಸ್ತುಗಳಲ್ಲಿ ಏಕತೆಯನ್ನು ಕಾಣುವ ಒಳನೋಟವನ್ನು ಕಳೆದುಕೊಳ್ಳದೆ ಇಂದ್ರಿಯ ಜಗತ್ತಿನ ಶುದ್ಧ ಸಂತೋಷವನ್ನು ಸ್ವೀಕರಿಸುವಂತಾಗಬೇಕು.

ಪ್ರಜಾಸತ್ತೆಗಾಗಿ ತಂತ್ರಜ್ಞಾನ*

—ಇ. ಎಫ್. ಶೂಮೇಕರ್
ಅನು : ಚಂದ್ರಶೇಖರತಾಳ್ಯ

ನಾವು ಮೂರನೆಯ ಜಗತ್ತು ಅಥವಾ ಅಭಿವೃದ್ಧಿ ಶೀಲ ರಾಷ್ಟ್ರಗಳು ಅಥವಾ ಅತ್ಯಂತ ಸರಳಗೊಳಿಸಿ ಹೇಳುವದಾದರೆ ಬಡದೇಶಗಳು ಎಂದು ಕರೆಯುವ ಇವುಗಗಳನ್ನು ಮೊಟ್ಟಮೊದಲಿಗೆ ವಾಸ್ತವಿಕ ಸತ್ಯಗಳೆಂದು ಅರ್ಥ ಮಾಡಿಕೊಳ್ಳ ಬೇಕು. ಅವುಗಳ ಅಸ್ತಿತ್ವ ನಾವು ನೀವು ಜೀವಿಸುತ್ತಿರುವಷ್ಟೇ ಸತ್ಯವಾದದ್ದು. ಹಾಗೆ ನೋಡಿದರೆ ಇವುಗಳ ಅಸ್ತಿತ್ವದ ವ್ಯಾಪ್ತಿ ನಮ್ಮ ನಿಮ್ಮ ಬದುಕಿಗಿಂತಲೂ ಹೆಚ್ಚು ವ್ಯಾಪ್ತವಾದದ್ದು. ಯಾಕೆಂದರೆ ನಾನು, ನೀವು ಮಾಡಲಾದದ್ದನ್ನು ಈ ರಾಷ್ಟ್ರಗಳು ಮಾಡಬಲ್ಲವು. ವಿಶ್ವಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮ್ಯಾಕ್ನಮಾರಾ ಇತ್ತೀಚೆಗೆ ಕೆಲವು ಅಂಕಿ ಅಂಶಗಳನ್ನು ಪ್ರಕಟಿಸಿದ್ದಾರೆ. ನಿಖರ ಅಂದಾಜಿನ ಈ ಅಂಕಿ ಅಂಶಗಳ ಪ್ರಕಾರ ವಿಶ್ವಾದ್ಯಂತ 500 ಮಿಲಿಯ ಜನ ವರ್ಷವೊಂದಕ್ಕೆ ಕೇವಲ 50 ಡಾಲರ್ ಮೇಲೆ ಬದುಕುತ್ತಿದ್ದಾರೆ. ಇಲ್ಲಿ ಕುಳಿತಿರುವ ನಮ್ಮಲ್ಲಿ ಕೊನೆಯಪಕ್ಷ ಒಬ್ಬರೂ ವರ್ಷಕ್ಕೆ 50 ಡಾಲರ್ ಮಾತ್ರದಿಂದ ಬದುಕುವವರಾಗಿ ದ್ದಾರೆ ಎಂದು ನಾನಂತೂ ನಂಬಲಾರೆ. ಆದರೆ 500 ಮಿಲಿಯ ಜನ ಇಷ್ಟು ಕನಿಷ್ಟ ಮೊತ್ತದಿಂದ ತಮ್ಮ ಬದುಕು ಹೊರೆಯುತ್ತಿದ್ದಾರೆ. ಅವರಿಗೆ ಹಾಗೆ ಬದುಕಬಲ್ಲ ಲೋಕಾನುಭವವಿದೆ. ನಮಗದು ಇಲ್ಲ ಆದ್ದರಿಂದಲೇ ಇವರನ್ನು ನಾವು ಕನಿಷ್ಠರು, ದರಿದ್ರರು ಎಂದು ಭಾವಿಸಬಾರದು. ಅವರೇ ಹೆಚ್ಚು ವಾಸ್ತ ವಿಕರು. ನಾವು ಭಾವಿಸಬೇಕಾದದ್ದು ಇಷ್ಟೆ. ಏನೆಂದರೆ ಅದೃಷ್ಟವಶಾತ್ ನಾವು ಅವರೊಡನೆ ಇದ್ದೇವೆ ಮತ್ತು ಅವರ ಪುರೋಭಿವೃದ್ಧಿಯನ್ನು ಬಯಸುವವರಾ ಗಿರಬೇಕು.

ನಿಜಕ್ಕೂ ಅವರು ಬದುಕುವ, ಬದುಕುವಲ್ಲಿ ಯೋಗ್ಯತೆ ಪಡೆದಿರುವ ಕಲಾವಿದರು.

* ಸಾವಿನ ಮುನ್ನಾ ದಿನ ಶೂಮೇಕರ್‌ನು ಸ್ವಿಟ್ಜರ್ಲಂಡಿನ ಕಾಕ್ಸ್‌ನಲ್ಲಿನ ಅಂತರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಮಾಡಿದ ಭಾಷಣ.

ಸುತ್ತಲಿನ ಜಗತ್ತಿನಲ್ಲಿ ಸುಸನ್ನಾಮಲದ ಬಿಕ್ಕಟ್ಟಿರಲಿ ಅಥವಾ ಪರಿಸರದ ಬಿಕ್ಕಟ್ಟಿರಲಿ- ಇವೆಲ್ಲದರಾಚೆಗೂ ಬದುಕಬಲ್ಲವರು. ಆದರೆ ನಾನು ನೀವು ಇಂಥ ಬಿಕ್ಕಟ್ಟುಗಳ ಮೂಲಕ ಬದುಕುಳಿಯುವದು ಕಡಿಮೆ. ಮುಂಬೈ ಪಟ್ಟಣ ಬದುಕುತ್ತದೆಯೋ ಇಲ್ಲವೋ ! ಆದರೆ ಇಂಡಿಯಾ ಬದುಕುತ್ತದೆ. ಲಂಡನ್, ಟೋಕಿಯೋದಂತಹ ನ್ಯೂಯಾರ್ಕನಂತಹ ಪಟ್ಟಣಗಳೂ ಬದುಕಲಾರವು.

ಒಬ್ಬ ವ್ಯಕ್ತಿ ಹೇಗೆ ಬದುಕುತ್ತಾನೆ ಎಂಬುದರ ಅರಿವು ನಮಗಿಲ್ಲದೇ ಹೋದರೆ ಆ ವ್ಯಕ್ತಿಗೆ ನಾವು ಯಾವ ಸಹಾಯವನ್ನೂ ಮಾಡಲಾರೆವು. ಈ ತಿಳುವಳಿಕೆ ನನಗೆ ಒದಗಿ ಬಂದದ್ದು ಕೆಲವು ವರ್ಷಗಳ ಹಿಂದೆ. ಅದೆಂದರೆ 25 ವರ್ಷಗಳ ಹಿಂದೆ ನಾನು ಬರ್ಮಾ ಹಾಗೂ ಇಂಡಿಯಾ ದೇಶಗಳಿಗೆ ಹೋದಾಗ. ಅಲ್ಲಿ ನನಗೆ ನಾವು ಮಾಡಲಾಗದ್ದನ್ನು ಆ ಜನತೆ ಮಾಡಬಲ್ಲರು ಅನಿಸಿತು. ಬರ್ಮೀಯರು ತಮ್ಮೊಳಗಿಟ್ಟುಕೊಂಡಿರುವ ಬದುಕಿನ ಗುಟ್ಟುಗಳನ್ನು ನಾಶ ಮಾಡದೆ ಅರ್ಥಶಾಸ್ತ್ರದ ಯಕ್ಷಿಣಿಗಾರನ ರೀತಿಯಲ್ಲಿ ಅವರ ತಲಾ ಆದಾಯವನ್ನು 20 ಪೌಂಡಿನಿಂದ 40 ಪೌಂಡಿಗೆ ಏರಿಸಬಲ್ಲೆನಾದರೆ ನಾನು ಅವರಿಗೊಂದು ಸ್ವರ್ಗವನ್ನು ಸೃಷ್ಟಿಸಿಕೊಟ್ಟಂತೆ. 20-40 ಪೌಂಡು ಬಿಡಿ. 200 ಪೌಂಡು ಕೂಡಾ ವ್ಯಕ್ತಿಯೊಬ್ಬನಿಗೆ ಒಂದು ವರ್ಷದ ಬದುಕಿಗೆ ಸಾಕಾಗಲಾರದೆಂದು ಇಂಗ್ಲೆಂಡಿನ ಜನಜೀವನ ನೋಡಿದ ನನಗೆ ತಿಳಿದಿತ್ತು. ಬರ್ಮೀಯರ ಸಾಂಪ್ರದಾಯಿಕ ಪರಂಪರಾಗತ ಬದುಕಿನ ಶೈಲಿಯನ್ನು ಇಂಗ್ಲೆಂಡಿನ ಜನತೆಯ ಜೀವನ ಶೈಲಿಗೆ ಬದಲಾಯಿಸಿ ಅವರ ತಲಾ ಆದಾಯವನ್ನು 20 ಪೌಂಡಿನಿಂದ 40 ಪೌಂಡಿಗೆ ಹೆಚ್ಚಿಸಿದ್ದಾದರೆ ಇಡೀ ಬರ್ಮಾ ಪ್ರಪಂಚದ ಅತಿ ಕೆಟ್ಟ ಕೊಳಚೆ ಪ್ರದೇಶವಾಗಿ ಪರಿವರ್ತಿತವಾಗುತ್ತಿತ್ತು. ನಾನು ಕಂಡ ಯಾವನೇ ಅರ್ಥಶಾಸ್ತ್ರಜ್ಞನಾಗಲಿ ಅಥವಾ ಅಭಿವೃದ್ಧಿಯ ಬಗ್ಗೆ ಮಾತಾಡುವವರಾಗಲಿ ಯಾರೂ ಈ ಬಗ್ಗೆ ಯೋಚಿಸಿದಂತಿಲ್ಲ. ಚೀನಿಯರ ಸುಂದರ ಅಂಗಡಿಯೊಳಗೆ ಗೂಳಿಯೊಂದು ನುಗ್ಗಿದಂತೆ ನುಗ್ಗಿ ಇವರೆಲ್ಲ ಘೋಷಿಸುತ್ತಾರೆ- ಕೊಂಚ ಜಾಗ ಬಿಡಿ ನೀವೆಲ್ಲ ಸಾಹುಕಾರರಾದ ಮೇಲೆ ಹೇಗೆ ಬದುಕಬೇಕೆಂದು ಕಲಿಸುತ್ತೇನೆ. ಆದರೆ ಬರ್ಮಾದ ಬಡ ಜನತೆ ಹೇಳುತ್ತಾರೆ- ನಾವು ಸಾಹುಕಾರರಲ್ಲ. ಆದ್ದರಿಂದ ನೀವು ತೋರಿಸುವ ಶೋಕಿ ನಮ್ಮ ಆಸಕ್ತಿ ಕೆರಳಿಸುವದಿಲ್ಲ. ನಮ್ಮ ದೇಶದಲ್ಲಿ ಈಗಾಗಲೇ ಶ್ರೀಮಂತರಾದವರಿಗೆ ಮಾತ್ರ ನಿಮ್ಮ ಮಾತು ಹಿಡಿಸಬಹುದು. ಈ ಅನುಭವದ ಹಿನ್ನೆಲೆಯಲ್ಲಿ ನನಗೆ ಹೊಳೆದ ಸಂಗತಿ ಎಂದರೆ ಮುಂದುವರೆದ ರಾಷ್ಟ್ರಗಳ ಬಡಜನತೆಯ ಸಂಪತ್ತನ್ನು ಹಿಂದುಳಿದ ರಾಷ್ಟ್ರಗಳ ಶ್ರೀಮಂತರಿಗೆ ಹಂಚಲಾಗಿದೆ. ಬರ್ಮಾದಲ್ಲಿ 20 ವರ್ಷಗಳ ಹಿಂದೆ ನಡೆದದ್ದು ಇದೆ. ಇದನ್ನು ಯಾರೂ ಇಷ್ಟಪಟ್ಟು ಮಾಡಿದ್ದಲ್ಲ. ಆದರೆ ಬಡವರನ್ನು ಬದುಕಿಸಲು

ಇರುವ ಮಾರ್ಗ ಇದೊಂದೆ ಎಂಬ ಕುರುಡನಂಬಿಕೆ ಹಾಗೆ ಮಾಡಿಸಿತ್ತು. ಆದ ರಿಂದಲೇ ಶ್ರೀಮಂತಿಕೆಗೆ ತಕ್ಕುದಾದ ವಸ್ತುಗಳನ್ನು ಮಾತ್ರ ಉತ್ಪಾದಿಸಲಾಯಿ ತು. ಬರ್ಮಾದ ನನ್ನ ಆ ಪ್ರವಾಸದ ನಂತರ ದಕ್ಷಿಣ ಭಾರತಕ್ಕೆ ಹೋದೆ. ಅದೃಷ್ಟಶಾಲಿಯಾದ ನನಗೆ ಅಲ್ಲಿ ಸರಿಯಾದ ಪ್ರಶ್ನೆಯೊಂದು ಮೂಡಿ ಬಂತು. ಎಲ್ಲ ಸುರುವಾಗುವದು ಪ್ರಶ್ನೆಯ ಮುಖಾಂತರವೇ ಅಲ್ಲವೇ ? ಇರಲಿ. ಅಲ್ಲಿ ಹೊಳೆದ ಆ ಒಳ್ಳೆಯ ಪ್ರಶ್ನೆ ಯಾವುದೆಂದರೆ– ಗ್ರಾಮ ಸಮುದಾಯವಾದ ಇಂಡಿಯಾದಂತಹ ದೇಶಕ್ಕೆ ಯಾವ ರೀತಿಯ ತಂತ್ರಜ್ಞಾನ ಹೊಂದುತ್ತದೆ? ವಾಸ್ತವವಾಗಿ ಪಿಟ್ಸಬರ್ಗ್, ಶಫೀಲ್ಡ್ ಅಥವಾ ಡಾರ್ಟಮುಂಡ್ ಅಥವಾ ಟೋಕಿ ಯೋದ ಯಾವ ತಂತ್ರಜ್ಞಾನವೂ ಭಾರತಕ್ಕೆ ಹೊಂದಲಾರದು.

ದೇವರು ಶೂ–ಮೇಕರ್ ಎಂಬ ಹೆಸರನ್ನು ನನಗೆ ಕೊಟ್ಟಿದ್ದಾನೆ. ನೋಡಿ ಒಳ್ಳೆಯ ಬೂಟು ತಯಾರಿಸುವಾಗ ಬೂಟು ತಯಾರಿಕೆಯ ಎಲ್ಲ ಹಂತಗಳನ್ನು ನಾವು ತಿಳಿದಿರಬೇಕಾದದ್ದು ಅತಿ ಅವಶ್ಯ. ಆದರೆ ಅವಷ್ಟೇ ಸಾಲದು. ಧರಿಸು ವವರ ಪಾದಗಳಿಗೆ ಸರಿಯಾಗಿ ಹೊಂದಿಕೊಳ್ಳುವಂತೆ ನಾವು ಬೂಟುಗಳನ್ನು ತಯಾರಿಸಬೇಕಾಗುತ್ತದೆ. ಆದರೆ ನಮ್ಮ ತಂತ್ರಜ್ಞಾನ ಇಂದು ಮನುಷ್ಯ ಮತ್ತು ಅವನ ಪಾದಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಬೇಕಾಬಿಟ್ಟಿ ಬೇಜವಾಬ್ದಾರಿ ಯ ಇಂತಹ ಮನೋಭಾವದ ಯಾವದೊ ದೇಶವೊಂದರ ಕಥೆಯೊಂದು ಪ್ರಚಾ ರದಲ್ಲಿದೆ. ಆ ದೇಶದ ಸಂಸ್ಥೆಯೊಂದು ಪ್ರಪಂಚದ ಯಾವ ಭಾಗದಲ್ಲೂ ಕಾಣ ದಂತಹ ಅತ್ಯಂತ ಚೆಂದವಾದ ಬೂಟುಗಳ ವಿನ್ಯಾಸ ಅಭಿವೃದ್ಧಿ ಪಡಿಸಿ ಒಂದೇ ಅಳತೆಯ ಅಂತಹ 500 ಜೊತೆ ಬೂಟುಗಳನ್ನು ತಯಾರಿಸಲು ಆದೇಶ ನೀಡಿ ತಂತೆ. ಈಗ ನಾವು ಮಾಡಲು ಇಷ್ಟಪಡುತ್ತಿರುವದೂ ಈ ರೀತಿಯದೆ. ಏಕೆಂದರೆ ಪ್ರಪಂಚದ ಬಡವರ ವಾಸ್ತವಿಕ ಬದುಕಿನ ಬಗ್ಗೆ ಯಾವ ಅರಿವಿಲ್ಲದೆ ನಾವು ಅವರ ಕಷ್ಟಕಾರ್ಪಣ್ಯಗಳ ಬಗ್ಗೆ ನಮ್ಮಲ್ಲಿ ಉತ್ತರವಿದೆ ಎಂಬ ರೀತಿಯಲ್ಲಿ ವರ್ತಿ ಸುತ್ತಿದ್ದೇವೆ.

ಹಳ್ಳಿಗಳ ನಾಡಾದ ಇಂಡಿಯಾ ಅಥವಾ ಲ್ಯಾಟಿನ್ ಅಮೆರಿಕಾ ಅಥವಾ ನಗರದ ಕೊಳೆಗೇರಿಗಳಿಗೆ ಎಂಥ ತಂತ್ರಜ್ಞಾನ ಹೊಂದಿಕೆಯಾಗುತ್ತದೆ. ಎಂಬ ಪ್ರಶ್ನೆ ಹಾಕಿಕೊಂಡು ನಾನು ಒಂದು ಸುಸಂಬದ್ಧ ಹಾಗೂ ಸರಳವಾದ ಉತ್ತರ ಕಂಡುಕೊಂಡೆ. ಆ ದೇಶಗಳ ಜನತೆಯನ್ನು ದರಿದ್ರಾವಸ್ಥೆಗೆ ತಳ್ಳಿರುವ ಕೆಳದರ್ಜೆ ಯ ತಂತ್ರಜ್ಞಾನಕ್ಕಿಂತ ಅಲ್ಲಿನ ತಂತ್ರಜ್ಞಾನವು ಬುದ್ಧಿವಂತಿಕೆಯಿಂದ ಕೂಡಿರ ಬೇಕು, ಸಮರ್ಥವಾಗಿರಬೇಕು, ಬೇಕಾದರೆ ವೈಜ್ಞಾನಿಕವಾಗಿ ಕೂಡಾ ಇರಲಿ.

ಆದರೆ ಇದು ಪಶ್ಚಿಮದ ಆಧುನಿಕ ತಂತ್ರಜ್ಞಾನಕ್ಕಿಂತ ಸರಳವಾಗಿರಬೇಕು, ಅಗ್ಗವಾಗಿರಬೇಕು ಮತ್ತು ಕಾರ್ಯಸಾಧುವಾದದ್ದಾಗಿರಬೇಕು. ನಾನು ಹೇಳುತ್ತಿರುವದೆಂದರೆ ಮಧ್ಯವರ್ತಿ ತಂತ್ರಜ್ಞಾನ (Intermediate Technology) ಅಂದರೆ ಪಶ್ಚಿಮದ ಆಧುನಿಕ ಮತ್ತು ಬಡದೇಶಗಳ ಹಿಂದುಳಿದ ತಂತ್ರಜ್ಞಾನಗಳ ನಡುವಿನ ಹಂತವನ್ನು ನಾನು ಸೂಚಿಸುತ್ತಿದ್ದೇನೆ. ಯಾಕೆ ಈ ಜನ ಮಧ್ಯಮ ತಂತ್ರಜ್ಞಾನವನ್ನು ಬಳಸುವದಿಲ್ಲ? ಯಾಕೆ ಈ ಜನ ತಮ್ಮ ಕಾಲುಗಳಿಗೆ ಹೊಂದಿಕೊಳ್ಳುವ ಬೂಟುಗಳನ್ನು ಉಪಯೋಗಿಸುವದಿಲ್ಲ? ಎನ್ನುವ ಪ್ರಶ್ನೆಗಳು ನನ್ನನ್ನು ಕಾಡುತ್ತವೆ. ನಾನು ಸೂಚಿಸುತ್ತಿರುವ ತಂತ್ರಜ್ಞಾನ ಬರಿಗಣ್ಣಿಗೆ ಕಾಣುವಂಥದ್ದಲ್ಲ. ಕಣ್ಣಿಗೆ ಕಾಣುವ ಕೆಳಮಟ್ಟದ್ದಿರಲಿ, ಅಥವಾ ಮೇಲ್ಮಟ್ಟದ್ದಿರಲಿ ಅಂತಹ ತಂತ್ರಜ್ಞಾನದಲ್ಲಿ ಈ ಸುವರ್ಣ ಮಾಧ್ಯಮ ಮಾಯವಾಗಿರುತ್ತದೆ. ಆದ್ದರಿಂದಲೇ ಈಗ ಬೆಳೆದಿರುವ ತಂತ್ರಜ್ಞಾನವನ್ನು ಅದೃಶ್ಯ ಮಾಧ್ಯಮ ಎಂದು ಕರೆಯುವ ತೀರ್ಮಾನಕ್ಕೆ ಬಂದೆ. ಈ ತರ್ಕವಾಕ್ಯದ ಪರೀಕ್ಷೆಯನ್ನು ನೀವು ಬೇಕಾದರೆ ಒಂದು ಪುಸ್ತಕದ ಅಂಗಡಿಗೆ ಹೋಗಿ ನಡೆಸಬಹುದು. ಆ ಅಂಗಡಿಯಲ್ಲಿ ನಿಮಗೆ ಇತ್ತೀಚಿನ ಹೊಸ ಪುಸ್ತಕಗಳಲ್ಲದೆ ಕ್ಲಾಸಿಕ್ಸ್‌ಗಳು ಕೂಡಾ ಸಿಕ್ಕುತ್ತವೆ. ಆದರೆ ಸಾವಿರದ ಒಂಬೈನೂರಾ ಅರವತ್ತೈದರಲ್ಲಿ ಪ್ರಕಟವಾದ ಪುಸ್ತಕಗಳು ನಿಮಗೆ ಸಿಕ್ಕುವದಿಲ್ಲ. ಅವು ಮಾಯವಾಗಿರುತ್ತವೆ.

ಮೂವತ್ತೈದು ವರ್ಷಕ್ಕೂ ಹಿಂದೆ ಉತ್ತರ ಇಂಗ್ಲೆಂಡಿನಲ್ಲಿ ನಾನು ಒಂದು ಹೊಲದಲ್ಲಿ ಕೂಲಿಕೆಲಸಗಾರನಾಗಿ ಕೆಲಸ ಮಾಡುತ್ತಿದ್ದೆ. 300 ಎಕರೆಯುಳ್ಳ ಆ ಹೊಲವನ್ನು ದನಗಳಿಂದ ಎಳೆಯಲ್ಪಡುವ ಬೇಸಾಯದ ಸಲಕರಣೆಗಳಿಂದ ಉಳುಮೆ ಮಾಡುತ್ತಿದ್ದೆವು. ಆ ಉಳುಮೆಯ ಉಪಕರಣಗಳಿಗೆ ಇಂದಿಗೂ ಹೆಚ್ಚೆಂದರೆ 10,000 ಡಾಲರ್ ಬೆಲೆಯಾಗಬಹುದು. ಆದರೆ ಅಂತಹ ಒಂದು ಸಲಕರಣೆ ಕೂಡಾ ಇಂದಿನ ಮಾರುಕಟ್ಟೆಯಲ್ಲಿ ಸಿಕ್ಕಲಾರದು. ಅವು ಎಲ್ಲಿಯೋ ಮಾಯವಾಗಿವೆ. ಅವುಗಳ ಸ್ಥಾನದಲ್ಲಿಂದು ಶಕ್ತಿಯುತವಾದ ಯಾಂತ್ರೀಕೃತ ಆಧುನಿಕ ಸಲಕರಣೆಗಳು ಬಂದುಬಿಟ್ಟವೆ. ಈ ಸಲಕರಣೆಗಳಿಗೆ 150000 ಡಾಲರ್ ಬೆಲೆಯಾಗುತ್ತಿದೆ. ನೋಡಿ ನಾವೆಲ್ಲ ಮುಂದುವರಿಯುತ್ತಿದ್ದೇವೆ ಎಂದು ಬೊಬ್ಬೆ ಹೊಡೆಯುತ್ತೇವೆ. ಇದ್ದರೂ ಇರಬಹುದು. ಆದರೆ ಈ ಅಭಿವೃದ್ಧಿ ಕೆಲವೇ ಕೆಲವು ಜನರಿಗೆ ಸಬಂಧಪಡುತ್ತಿದೆ. ಸಿಂಹ ಪಾಲಿನಷ್ಟು ಜನತೆಯ ಬದುಕಿಗೆ ಈ ಅಭಿವೃದ್ಧಿ ಹೊರಗಾದದ್ದು. ಯಾಕೆಂದರೆ ಅಂತಹವರು ಈ ಸಲಕರಣೆಗಳಿಗಾಗಿ 10000 ಡಾಲರ್‌ಗಳಿಗಿಂತ ಹೆಚ್ಚು ಹಣ ಖರ್ಚು ಮಾಡಲಾರರು.

ಇತ್ತೀಚೆಗೆ ಇಂಗ್ಲೆಂಡಿನ ವೈಭವೋಪೇತ ಸಂಶೋಧನೆ ಹಾಗು ಅಭಿವೃದ್ಧಿ ಸಂಸ್ಥೆಯೊಂದಕ್ಕೆ ನಾನು ಆಹ್ವಾನಿತನಾಗಿ ಹೋಗಿದ್ದೆ. ಆ ಸಂಸ್ಥೆ ಬಟ್ಟೆ ತಯಾರಿಕಾ ಯಂತ್ರಗಳನ್ನು ಅಭಿವೃದ್ಧಿ ಪಡಿಸುತ್ತಿತ್ತು. ಸಂಸ್ಥೆಯ ನಿರ್ದೇಶಕ ಎಲ್ಲವನ್ನು ನನಗೆ ತೋರಿಸಿದ. ಆ ಯಂತ್ರಗಳು ಬೆರಗುಗೊಳಿಸುವಂತಿದ್ದವು. ನಂಬಲಾಗದ ವೇಗದಲ್ಲಿ ಅವು ಕೆಲಸ ಮಾಡಲು ಶಕ್ತವಾಗಿದ್ದವು. ಎಲ್ಲ ಮಾನವರೊಳಗೂ ಒಂದು ಮುಗ್ಧ ಮಗುವಿರುತ್ತದಂತೆ. ಅಂತಹ ಮುಗ್ಧತೆಯಿಂದ ನಾನು ಅವೆಲ್ಲವನ್ನು ಗಮನಿಸುತ್ತಾ ತುಂಬ ಖುಷಿಪಟ್ಟೆ. ಮತ್ತು ಆಚ್ಚರಿಗೊಂಡೆ. ಆ ಮೇಲೆ ಯಂತ್ರಗಳ ಬೆಲೆ ಎಷ್ಟೆಂದು ಕೇಳಿದೆ. ಅವುಗಳ ಬೆಲೆ 100000 ಪೌಂಡ್ ಎಂದು ತಿಳಿದಾಗ ನಾನು ನಿರ್ದೇಶಕರೊಂದಿಗೆ ವಾದಕ್ಕಿಳಿದೆ. ನೀವು ಇದನ್ನೆಲ್ಲ ಯಾಕೆ ಇಲ್ಲಿಗೇ ನಿಲ್ಲಿಸಿಬಿಡಬಾರದು–ನಿಲ್ಲಿಸುವದೆಂದರೇನು ? ಅಭಿವೃದ್ಧಿಯ ವಿರುದ್ಧ ಹೋದಂತಲ್ಲವೇ– ಇದು ಬಹುಖರ್ಚಿನ ಬಾಬತ್ತು. ಇಲ್ಲಿಗೆ ಇದು ಸಾಕು ಎನಿಸುತ್ತದೆ. ನಿರ್ದೇಶಕ ಹೇಳಿದ- ನನ್ನ ಬಳಿ ಅತ್ಯಂತ ಬುದ್ಧಿವಂತ ಯುವಕರಿದ್ದಾರೆ. ಅವರು ಇವುಗಳನ್ನು ಇಲ್ಲಿ ಬೆಳೆಸುತ್ತಾರೆ ಮತ್ತು ಅವರು ಅಲ್ಲಿ ಪುನರ್ ಸೃಷ್ಟಿಸುತ್ತಾರೆ. ಇದರಲ್ಲಿ ತಪ್ಪೇನಿದೆ ? - ತಪ್ಪೇನಿಲ್ಲ. ಇರುವ ತಪ್ಪೆಂದರೆ ಇದರ ಬೆಲೆ. ಈಗ 1000000 ಪೌಂಡಿನಷ್ಟು ಬೆಲೆಯ ಯಂತ್ರ ಮುಂದೆ 150000 ಪೌಂಡ್ ಬೆಲೆಯದ್ದಾಗಬಹುದು.- ನೀನು ಅಭಿವೃದ್ಧಿಯ ವಿರುದ್ಧದ ಮನುಷ್ಯ- ಇಲ್ಲ, ಇಲ್ಲ, ನಾನು ಅಭಿವೃದ್ಧಿಗೆ ವಿರುದ್ಧವಾಗಿಲ್ಲ. ಆದರೆ ಇದರ ಬೆಲೆ ಕೇಳಿ ನಡುಗುತ್ತಿದ್ದೇನೆ. ಈಗಾಗಲೆ ಜನತೆಯಲ್ಲಿ ಬಹುಪಾಲನ್ನು ಅಭಿವೃದ್ಧಿಯಿಂದ ಹೊರಗಿಟ್ಟಿದ್ದೇವೆ. ಇವುಗಳ ಖರ್ಚಿನ ಬಾಬ್ತು ಇನ್ನಷ್ಟು ಹೆಚ್ಚುತ್ತಾ ಹೋದರೆ ಉಳಿದಿರುವ ಜನತೆಯನ್ನು ಕೂಡಾ ನಾವು ಈ ವ್ಯವಸ್ಥೆಯಿಂದ ಹೊರಗಿಡುತ್ತೇವೆ.

ನಮ್ಮ ಜನತೆ ಮತ್ತು ಸಂಸ್ಥೆಗಳು ಕೈ ಹೊಸೆಯುತ್ತ ಬಹುರಾಷ್ಟ್ರೀಯ ಸಂಸ್ಥೆಗಳ ಸುತ್ತ ಸುತ್ತುತ್ತ ಏರು ಗತಿಯಲ್ಲಿ ಮುನ್ನುಗ್ಗುತ್ತಿವೆ. ಇದಲ್ಲದೆ ಬಹುರಾಷ್ಟ್ರೀಯ ಸಂಸ್ಥೆಗಳು ಮಾತ್ರ ಭರಿಸಬಲ್ಲ, ಸಂಕೀರ್ಣವಾದ, ವಿಪರೀತ ದುಬಾರಿಯ ಉತ್ಪಾದನಾ ತಂತ್ರಜ್ಞಾನವನ್ನು ಚಪ್ಪಾಳೆ ಹೊಡೆದು ಉತ್ಸಾಹದಿಂದ ಮೆಚ್ಚಲಾಗುತ್ತಿದೆ. ಇಂಥ ನಂಬಿಕೆ ಕೇವಲ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಷ್ಟೇ ಇಲ್ಲ. ಬಡರಾಷ್ಟ್ರಗಳಲ್ಲೂ ಇದು ಧೃಡವಾಗುತ್ತಿದೆ. ಕೆಳವರ್ಗದ ಜನರಿಗೆ ಪ್ರಜಾಸತ್ತಾತ್ಮಕವಾಗಿ ಸ್ವಲ್ಪ ಮಟ್ಟಿನ ಸ್ವಾತಂತ್ರ್ಯ ದಕ್ಕಬಹುದಾದ ಸ್ವಾವಲಂಬನೆಯ ಉದ್ಯಮಶೀಲತೆಯ ಮಧ್ಯಮ ದಾರಿಯನ್ನು ನಾಶಪಡಿಸಲಾಗಿದೆ. ಆದ್ದರಿಂದ ಪ್ರಪಂಚದ ತುಂಬ ದ್ವೇಷ ಹಾಗೂ ಉದ್ರಿಕ್ತ ವಾತಾವರಣವನ್ನು ನಾವು

ಇಂದು ಕಾಣುವಂತಾಗಿದೆ. ಬೇರೆ ರೀತಿಯ ಸಮಸ್ಯೆಗಳನ್ನು ಹಾಗೂ ವೇಗವನ್ನು ಸೃಷ್ಟಿಸಬಲ್ಲ ವಿಜ್ಞಾನಿಗಳು ಇಂಜಿನಿಯರುಗಳೊಂದಿಗೆ ಇಡೀ ಸಮಾಜ ತನ್ನ ಮುಟ್ಠಾಳತನವನ್ನು ಪ್ರದರ್ಶಿಸುತ್ತಿರುವಾಗ ಕೇವಲ ಈ ಬಹುರಾಷ್ಟ್ರೀಯ ಸಂಸ್ಥೆಗಳನ್ನಷ್ಟೇ ಬೈದು ಪ್ರಯೋಜನವಿಲ್ಲ. ಆದರೆ ಇಂಥ ವೇಗವನ್ನು ತಡೆಯಲು ನಮಗೊಂದು ತಾತ್ವಿಕವಾದ ಮಾನವೀಯವಾದ ಯಾವುದೇ ತಳಹದಿ ಇಲ್ಲವಾಗಿವೆ. ಕನಿಷ್ಟ ಸಮತೋಲನ ಮಾಡುವ ಪ್ರಯತ್ನವೂ ನಡೆಯುತ್ತಿಲ್ಲ.

ನನ್ನನ್ನು ತನ್ನ ಸಂಸ್ಥೆಗೆ ಕರೆದೊಯ್ದ ಆ ನಿರ್ದೇಶಕ ಯೋಚಿಸಬಲ್ಲವನಾಗಿದ್ದ. ನನ್ನ ಆತಂಕ ಮತ್ತು ಭಯಗಳ ಬಗ್ಗೆ ಕೇಳುತ್ತ ನಡೆಯುತ್ತಿದ್ದವನು ನಿಂತು ನಾನು ಮಾಡಲು ಸಾಧ್ಯ. ಆದರೆ ನನಗಿಂತ ಮೇಲಿರುವವನಿಗೆ ಇದನ್ನು ಇಲ್ಲಿಗೇ ನಿಲ್ಲಿಸು ಎಂದರೆ ಅವನು ಹೀಗೆ ಹೇಳುತ್ತಾನೆ- ಹೌದು. ನಿನ್ನ ಮುಖ ಕುಸ್ತಾದವರಂತೆ ಕಾಣುತ್ತದೆ. ಸ್ವಲ್ಪ ಕಾಲ ರಜೆಯ ಮೇಲೆ ಹೋಗಿ ವಿಶ್ರಾಂತಿ ತೆಗೆದುಕೋ. ಮತ್ತಷ್ಟು ಒತ್ತಾಯ ಮಾಡಿ ಹೇಳಿದರೆ- ಬಹಳ ಮುಂಚೆಯೇ ಎಚ್ಚರಿಸಿದ್ದಕ್ಕೆ ನಿನಗೆ ಧನ್ಯವಾದಗಳು. ಆದರೆ ನನ್ನ ಉತ್ತರಾಧಿಕಾರಿ ಈಗಾಗಲೇ ಉದ್ಭವಿಸಿದ್ದಾನೆ. ಆದ್ದರಿಂದ ನಾನು ನಿಲ್ಲಿಸಲಾರೆ ಎನ್ನುತ್ತಾನೆ.

ಹೌದು. ನೀವು ನಿಲ್ಲರಾರಿರಿ. ಆದರೆ ನೀವೇನು ಮಾಡುತ್ತಿದ್ದೀರಿ ಎಂಬುದಾದರೂ ನಿಮಗೆ ತಿಳಿದಿರಬೇಕು. ಇದೇನು ಬಹಳ ಆಸಕ್ತಿಯ, ಲಾಭ ನೀಡುವ ಸ್ವಯಂ ಚಾಲಿತ ತಂತ್ರಜ್ಞಾನದ ಬೆಳವಣಿಗೆಯಲ್ಲ ಎಂಬುದು ನಿಜ. ಆದರೆ ಇದೇ ಇಡೀ ಸಮಾಜವನ್ನು ರೂಪಿಸುತ್ತಿದೆ. ಅಲ್ಲದೆ ಇಂಥ ಅಭಿವೃದ್ಧಿಯಿಂದ ಹೊರಗುಳಿದ ಜನತೆಯೇ ವಾಸ್ತವವೆಂದು ಸಾರುತ್ತದೆ. ಇದನ್ನು ಸಮತೋಲಗೊಳಿಸಲು ಕೊನೆಯಪಕ್ಷ ನೀವು ಪ್ರತಿಶಕ್ತಿಯೊಂದರ (Counter force) ಬಗೆಗಾದರೂ ಕಾಳಜಿ ಮಾಡಬೇಕಿದೆ. ಆ ಪ್ರತಿಶಕ್ತಿ ಎಂಥದ್ದು ಎಂದು ಆತ ಕೇಳಿದ. ನಾನು ಹೇಳಿದೆ- ನಿಮ್ಮೊಳಗಿರುವ ಅತ್ಯಂತ ಕ್ರಿಯಾಶಾಲಿ ಬುದ್ಧಿವಂತ ಹಾಗೂ ನವೀನ ಕಲ್ಪನೆಗಳನ್ನು ಹೊಂದಿರುವ ಇಂಜಿನೀಯರುಗಳಲ್ಲಿ ಶೇಕಡ ಹತ್ತರಷ್ಟು ಜನರನ್ನು ಕೂಡಿಸಿಕೊಂಡು ನೀವು ಇಷ್ಟು ಸೂಚನೆ ಕೊಡಿ, "ಈಗಿರುವ ಕ್ಲಿಷ್ಟ ಯಂತ್ರಗಳನ್ನು ದಯವಿಟ್ಟು ಮತ್ತಷ್ಟು ಕ್ಲಿಷ್ಟಗೊಳಿಸಬೇಡಿ, ದಯವಿಟ್ಟು ಈಗಾಗಲೇ ಅತೀ ದುಬಾರಿಯಾಗಿರುವ ಯಂತ್ರಗಳನ್ನು ಮತ್ತಷ್ಟು ದುಬಾರಿಗೊಳಿಸಬೇಡಿ". ನೋಡಿ ಈ ಜನಜಂಗುಳಿಯ ಬಳಿ ಏನೂ ಇಲ್ಲ. ಅವರು ಅತ್ಯಂತ ಸರಳವಾದ ನೂಲುವ ನೇಯುವ ಯಂತ್ರಗಳಿಂದ ಒಳ್ಳೆಯದನ್ನು ಸಾಧಿಸುವಷ್ಟು ಜಾಣರೋ ಅಲ್ಲವೋ ನೋಡಿ. ಅಂಥ ಯಂತ್ರಗಳಿಂದ ಅವರು ಹೆಚ್ಚು ಹೆಚ್ಚು ಉತ್ಪನ್ನ ಮಾಡುವಂ

ಾದರೆ ಅವರು ಇನ್ನಷ್ಟು ಗೌರವದಿಂದ ಬಾಳಲು ಸಾಧ್ಯವಾಗುತ್ತದೆ. ಈ ವಿಷಯವನ್ನು ಆ ಇಂಜಿನಿಯರುಗಳು ಅರ್ಥ ಮಾಡಿಕೊಂಡರೆ ಸಾಕು. ಆದರೆ ಆ ನಿರ್ದೇಶಕ ಇಂಥ ಯಾವ ಪ್ರಯತ್ನವನ್ನು ಮಾಡದಿರುವುದು ನನ್ನಲ್ಲಿ ಭಯ ಹುಟ್ಟಿಸಿದೆ. ಇಂದಿಗೂ ಕೂಡ ನನಗೆ ಇಪ್ಪತ್ತು ವರ್ಷಗಳ ಹಿಂದೆ ಇಂಡಿಯಾದಲ್ಲಿ ಉದ್ಭವಿಸಿದ ಪ್ರಶ್ನೆ ಮತ್ತೆ ಮತ್ತೆ ಎದುರಾಗುತ್ತಿದೆ. ಈ ಪ್ರಶ್ನೆಗೆ ಉತ್ತರ ರೂಪಿಯಾದ ತಂತ್ರಜ್ಞಾನವು ನಮ್ಮ ಬಳಿ ಇಲ್ಲ ಎಂಬ ನಿರ್ಧಾರವನ್ನು ಜನ ಮಾಡಿಬಿಟ್ಟಿದ್ದಾರೆ.

ಈ ಪ್ರಶ್ನೆಯ ಹಿನ್ನೆಲೆಯ ಸಮಸ್ಯೆಗಳು ಯಾವವು ? ಶಕ್ತಿಯ ಉತ್ಪಾದನೆಗೆ ಬೇಕಾದ ಸರಿಯಾದ ತಂತ್ರಜ್ಞಾನ ನಮ್ಮ ಬಳಿ ಇಲ್ಲ. ನವೀಕರಿಸಲಾಗದಂಥ ಇಂಧನ ಸಂಪನ್ಮೂಲವನ್ನೇ ನಾವಿಂದು ಅವಲಂಬಿಸಿದ್ದೇವೆ. ಆದಾಯದ ಬದಲು ಆದಾಯದ ಮೂಲವನ್ನೇ ನಾವಿಂದು ಕಬಳಿಸಿ ಹಾಕುತ್ತಿದ್ದೇವೆ. ಹೀಗೆಯೇ ನಾವು ಮುಂದುವರೆಯುವದಾದರೆ ಇದೆಲ್ಲಕ್ಕೂ ಒಂದು ಕೊನೆ ಬಂದುಬಿಡುತ್ತದೆ. ನಮ್ಮ ಸುತ್ತಲಿನ ಪ್ರಾಕೃತಿಕ ಬದುಕಿನ ರೀತಿಗೆ ಹೊಂದುವ ತಂತ್ರಜ್ಞಾನ ಕೂಡ ನಮ್ಮ ಬಳಿ ಇಲ್ಲ. ಆದ್ದರಿಂದ ಪರಿಸರ ಸಂಬಂಧ ತಂತ್ರಜ್ಞಾನದ ಬಗ್ಗೆ ನಾವು ಯೋಚಿಸಬೇಕಾಗಿದೆ. ಅದಲ್ಲದೆ ಮಾನವೀಯ ದೃಷ್ಟಿಕೋನಕ್ಕೆ ಹೊಂದಿಕೊಳ್ಳುವಂತಹ ತಂತ್ರಜ್ಞಾನವನ್ನು ನಾವು ಹೊಂದಿದ್ದೇವೆಯೆ ?

ಇತಿಹಾಸಕ್ಕೆ ಮರಳುವದು ಆಸಕ್ತಿ ಹುಟ್ಟಿಸುತ್ತದೆ. ಹೋದ ವರ್ಷ ಅಮೇರಿಕಾಗೆ ಇನ್ನೂರು ವರ್ಷದ ಉತ್ಸವವಷ್ಟೇ ಅಲ್ಲ– ಒಡೆಮ್‌ಸ್ಮಿಥನ 'ದ ವೆಲ್ಥ್ ಆಫ್ ನೇಶನ್' ಎಂಬ ಪುಸ್ತಕಕ್ಕೆ ಇನ್ನೂರು ತುಂಬಿದ ವರ್ಷ. ಸ್ಮಿಥ್‌ನ ಈ ಪುಸ್ತಕ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ್ದು. ಆತ ಈ ಪುಸ್ತಕದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹೇಳುತ್ತಾನೆ– ದಿನವಿಡೀ ಒಬ್ಬ ಮನುಷ್ಯ ಏನು ಮಾಡುತ್ತಾನೋ ಅದರಿಂದ ಅವನು ರೂಪಗೊಳ್ಳುತ್ತಾನೆ. ಅರ್ಥಾತ್ ಅವನ ಕೆಲಸ ಅವನಿಗೊಂದು ರೂಪ ಕೊಡುತ್ತದೆ. ಅವನಿಗೆ ನೀವು ಮನಸ್ಸಿಲ್ಲದ ಕೆಲಸ ಕೊಟ್ಟರೆ ಅವನು ಮನೋರಹಿತ ವ್ಯಕ್ತಿಯಾಗುತ್ತಾನೆ. ಅಂಥವನು ನಾಡಿನ ಒಳ್ಳೆಯ ಪ್ರಜೆ ಆಗಲಾರ. ಅಂಥವನು ಕುಟುಂಬದ ಒಳ್ಳೆಯ ತಂದೆಯಾಗಲಾರ ಅಥವಾ ತಾಯಿಯಾಗಲಾರಳು. ಸ್ಮಿಥ್ ಮತ್ತೂ ಹೇಳುತ್ತಾನೆ- ಅಭಿವೃದ್ಧಿ ಶೀಲ ರಾಷ್ಟ್ರಗಳ ಜನ ಬಾಹುಳ್ಯದ ಹಣೆಬರಹವೆಂದರೆ ಮನಸ್ಸೇ ಇಲ್ಲದ ಕೆಲಸದ ಮೂಲಕ ಪೂರ್ಣವಾಗಿ ಸಂಕುಚಿತಗೊಳ್ಳುತ್ತಿರುವುದು. ಇದು ಭಯಂಕರವಾದದ್ದು, ಹೀಗಾಗಬಾರದು ಎಂದೇನೂ ಸ್ಮಿಥ್ ಬಹಿರಂಗವಾಗಿ ಹೇಳದಿದ್ದರೂ ಆ ಮಾತುಗಳ

ಆಶಯು ಇದೇ ಆಗಿದೆ. ನಮಗೆಲ್ಲ ತಿಳಿದಿರುವಂತೆ ಮಾನವ ಪ್ರಾಣಿಗೆ ಇತರರ ಸಂಕಷ್ಟಗಳನ್ನು ಗ್ರಹಿಸುವ, ಸಹಿಸುವ ಸ್ಥೈರ್ಯ ಇದೆ. ಇವತ್ತಿಗೂ ನಾವು ಒಬ್ಬರಿಗೊಬ್ಬರು ಹೇಳಿಕೊಳ್ಳುವದೇನು ? ಇದೇನು ಸಂತೋಷಕರವಾದದ್ದಲ್ಲವಾದರೂ ಕೆಟ್ಟದಲ್ಲ. ಮತ್ತು ಇದು ಅನಿವಾರ್ಯವಾದ ಕೆಲಸ. ಇದರಿಂದ ಅವರೆಲ್ಲ ಸಂತೋಷಚಿತ್ತರಾಗಿರಬಹುದು. ಆದರೆ ನಾನು ಸಂತೋಷಗೊಳ್ಳಲಾರೆ. ನಾನು ಹಲವು ವರ್ಷ ಶ್ರಮದ ಕೆಲಸ ಮಾಡಿದ್ದೇನೆ. ನನ್ನ ಅನೇಕ ಗೆಳೆಯರು ನರಳಿದ ಹಾಗೆ ನಾನು ನರಳಲಿಲ್ಲ. ಯಾಕೆಂದರೆ ಯಾವಾಗಲೂ ನಾನು ಸುರಂಗದ ಕೊನೆಯಲ್ಲಿ ಬೆಳಕನ್ನು ಕಾಣಬಲ್ಲವನಾಗಿದ್ದೆ. ಇಡೀ ಜೀವಮಾನವೆಲ್ಲ ನಾನು ಆ ಕೆಲಸವನ್ನು ಮಾಡಬೇಕಾಗಿಲ್ಲವೆಂದು ನನಗೆ ಗೊತ್ತಿತ್ತು. ಒಂದು ವೇಳೆ ಇಡೀ ಜೀವಮಾನ ಆ ಕೆಲಸ ಮಾಡಬೇಕೆಂದು ತಿಳಿದಿದ್ದರೆ ಅಲ್ಲಿ ಹೆಚ್ಚಿನ ತೊಂದರೆ ಇರುತ್ತಿತ್ತೆಂದು ನಿಮಗೆ ಹೇಳಬಲ್ಲೆ.

ಮಾನವೀಯ ದೃಷ್ಟಿಯಿಂದ ಕೂಡಿದ ಒಂದು ಸಂಗತ ತಂತ್ರಜ್ಞಾನ ನಮ್ಮ ಬಳಿ ಇಲ್ಲ. ನನ್ನ 'Small is beautiful' ಪುಸ್ತಕದಲ್ಲಿ 'Economics as people mattered' ಪ್ರಬಂಧದಲ್ಲಿ ಚರ್ಚಿಸಿದಂತೆ ನಾವು ಎಂದೂ ಜನತೆಯನ್ನು ಕೇಂದ್ರವಾಗುಳ್ಳ ಅರ್ಥಶಾಸ್ತ್ರವನ್ನು ಗ್ರಹಿಸಿಲ್ಲ. ನಮ್ಮ ಅರ್ಥಶಾಸ್ತ್ರೀಯ ಗ್ರಹಿಕೆಯ ಕೇಂದ್ರ ವಸ್ತುಗಳ ಉತ್ಪಾದನೆಯಾಗಿದೆ ಆ ವಸ್ತುಗಳ ನಂತರವೇ ನಾವು ಜನತೆಯನ್ನು ಗಮನಿಸುತ್ತಿರುವದು. ಇಂಥ ಗ್ರಹಿಕೆಯ ಮಿತಿ ಮೀರಿದರೆ ನಾವು ವಿಪರೀತ ದಂಡ ತೆರಬೇಕಾಗುವದು. ಜನರಿಗೆ ತಮ್ಮ ಕುಶಲತೆ ತೋರಲು ಸಾಧ್ಯವಾಗದಿದ್ದರೆ ನಾವು ಮತ್ತೊಂದು ಅವಕಾಶಕೊಟ್ಟು ತರಬೇತಿ ನೀಡೋಣ. ಅವರ ಉತ್ಪಾದನೆಯ ಯಂತ್ರಗಳು ಶಬ್ದ ಮಾಲಿನ್ಯವನ್ನು ಉಂಟು ಮಾಡುತ್ತಿದ್ದರೆ ಅವರು ತಮ್ಮ ಕಿವಿಗಳನ್ನು ಕಳೆದುಕೊಳ್ಳಬೇಕಾಗುವದು. ಇಂಥದನ್ನು ನಾವು ಗಮನಿಸಿ ಅವರ ಕಿವಿಗಳಿಗೆ ರಕ್ಷಣೆಯನ್ನು ಒದಗಿಸಬೇಕಾಗುತ್ತದೆ. ಇವೆಲ್ಲ ಉತ್ಪಾದನೆಯ ವಾಸ್ತವಿಕ ಸಂಗತಿಗಳು. ಇವುಗಳನ್ನು ಗಮನಿಸದೆ ನಾವು ಕಾರ್ಖಾನೆಗಳನ್ನಷ್ಟೇ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ರವಾನಿಸುತ್ತಿದ್ದೇವೆ. ಇಂಥ ಯಾಂತ್ರೀಕರಣದಿಂದ ಭವಿಷ್ಯವೇ ಇಲ್ಲವೆಂಬುದು ಹೃದಯದಾಳದವರೆಗೆ ಗೊತ್ತಿರುವ ಸಂದರ್ಭದಲ್ಲೂ ನಾವು ಇದನ್ನೆ ಮಾಡುತ್ತಿದ್ದೇವೆ. ಪ್ರಕೃತಿ ಇದನ್ನು ಸಹಿಸುವದಿಲ್ಲ. ದೈವದತ್ತ ಸಂಪನ್ಮೂಲ ಶಕ್ತಿ ಇದನ್ನು ತಾಳಿಕೊಳ್ಳಲಾರದು. ಮಾನವ ಜನಾಂಗ ಕೂಡಾ ಇದನ್ನು ಸಹಿಸಲಾರದು. ಈಗಾಗಲೇ ಅಮೆರಿಕಾ ಮತ್ತು ಬ್ರಿಟನ್ ದೇಶಗಳ ಆಸ್ಪತ್ರೆಗಳು ರೋಗಿಗಳಿಂದ ತುಂಬಿಹೋಗಿವೆ. ಆದರೆ ಅವರೆಲ್ಲರ ಅನಾರೋಗ್ಯದ ಕಾರಣ ಮಾನಸಿಕವಾದದ್ದೇ ಹೊರತು ದೈಹಿಕವಾದದ್ದಲ್ಲ. ಬ್ರಿಟನ್ನಿಗಿಂತ ಎರಡರಷ್ಟು ತಲಾ

ಆದಾಯವಿರುವ ಅಮೆರಿಕಾ ಸಂಯುಕ್ತ ಸಂಸ್ಥಾನ ತಾನು ದೊಡ್ಡ ಹಾಗೂ ಶ್ರೀಮಂತ ರಾಷ್ಟ್ರವೆಂದು ಕೊಚ್ಚಿಕೊಂಡರೂ ತನ್ನಲ್ಲಿನ ನಗರ ಸಮಸ್ಯೆ ಹಾಗೂ ಬಡತನವನ್ನು ಹೋಗಲಾಡಿಸಿಕೊಳ್ಳಲಾಗಿಲ್ಲ. ಹಾಗಾದರೆ ಅಮೇರಿಕಾ ಸಾಧಿಸಿದ್ದೇನು?

ನಾವು ಸರಿಯಾದ ದಾರಿಯಲ್ಲಿ ಸಾಗುತ್ತಿಲ್ಲ ಎಂಬ ಅನುಮಾನ ಕಾಡುತ್ತಿರುವಾಗಲೇ ನಮ್ಮ ಸುತ್ತ ಬಹಳಷ್ಟು ಉನ್ಮತ್ತರು ಮತಿಭ್ರಾಂತರು ತುಂಬಿಹೋಗಿರುವದನ್ನು ಕಾಣುತ್ತೇವೆ. ಇವರು ಎಂಥವರು ಎಂದರೆ ತಾವು ಮಾಡುತ್ತಿರುವ ಕೆಲಸ ಅತ್ಯಂತ ತಪ್ಪು ಎಂದು ತಿಳಿದರೂ ಅಂಥ ತಪ್ಪು ಕೆಲಸವನ್ನೇ ದ್ವಿಗುಣ ವೇಗದಲ್ಲಿ ನಡೆಸುವರು. ನಾನು ಇವರನ್ನು "ಮುಂದುವರೆದ ದಗಾಕೋರರು" ಎಂದು ಕರೆಯುತ್ತೇನೆ. ಈ ದಗಾಕೋರರು ಹೊಳಪುಳ್ಳ ಒಂದು ಘೋಷಣೆಯನ್ನು ತಮ್ಮ ಚಿತ್ರಪಟಗಳ ಮೇಲೆ ಕೆತ್ತಿಸಿಕೊಂಡಿರುತ್ತಾರೆ. ಅದೆಂದರೆ- ಒಂದು ದಿನದ ಬಿಡುವು ಬಿಕ್ಕಟ್ಟುಗಳಿಂದ ದೂರವಿಡುತ್ತದೆ. ಇವರು ನಮ್ಮನ್ನು ಹಿಂಸೆಯ ವಳ್ಳುರಿಗೆ ತಳ್ಳುತ್ತಿರುತ್ತಾರೆ. ಇಂಥವರೊಂದಿಗೆ ಇನ್ನೊಂದು ರೀತಿಯ ಕ್ಷುಬ್ಧ ಜನರಿದ್ದಾರೆ. ಇವರನ್ನು ನಾನು 'ನೆಲದ ಮಕ್ಕಳು' (Home Comers) ಎನ್ನುತ್ತೇನೆ. ಇವರ ಅಂಬೋಣವೇನೆಂದರೆ ನಾವು ಈ ಪೃಥ್ವಿಯಲ್ಲಿ ಹುಟ್ಟಿರುವದು ಅದನ್ನು ನಾಶಮಾಡುವದಕ್ಕಲ್ಲ. ನಮ್ಮ ಅಸ್ತಿತ್ವದ ಉದ್ದೇಶ ಅತೀ ಕಡಿಮೆ ಕೆಲಸಮಾಡುವದಲ್ಲ! ಹಾಗೆಯೇ ಹುಚ್ಚು ಆವೇಶದ ಕೊನೆ ತಂದುಕೊಳ್ಳುವದಕ್ಕೂ ಅಲ್ಲ. ಹೀಗೆ ಎರಡು ರೀತಿಯ ಜನರೂ ಒಟ್ಟಿಗೆ ಇದ್ದಾರೆ. ಇತ್ತೀಚಿಗೆ ನಾನು ಈ ಉಕ್ಕಿನ ಪರದೆಯ ಇನ್ನೊಂದು ತುದಿಯಲ್ಲಿದ್ದೆ. ಅಲ್ಲಿ ಅವರೆಲ್ಲ ನಮ್ಮದಕ್ಕಿಂತ ಅವರ ವ್ಯವಸ್ಥೆಯೇ ಉತ್ಕೃಷ್ಟವಾದದ್ದು ಎಂದು ಬಹು ದೀರ್ಘವಾಗಿ ವಿವರಿಸಿದರು ಅವರು ಹೇಳಿದರು- ಯಾವದೇ ಕಾಲಕ್ಕೂ ಪಾಶ್ಚಾತ್ಯ ಆರ್ಥಿಕ ವ್ಯವಸ್ಥೆ Express ರೈಲಿದ್ದ ಹಾಗೆ. ಅದು ಅತಿ ವೇಗದಲ್ಲಿ ಪಾತಾಳದತ್ತ ನುಗ್ಗುತ್ತಿದೆ. ಹೀಗೆ ಹೇಳುತ್ತಿದ್ದ ಅವರು, ನಾವು ನಿಮ್ಮನ್ನು ಹಿಂದೆ ಹಾಕುತ್ತೇವೆ ಎಂಬ ಮಾತನ್ನೂ ಸೇರಿಸಿದರು. ಹೀಗಿದೆ ನೋಡಿ ಅಭಿವೃದ್ಧಿಯ ಸ್ವಯಂಚಾಲನೆ! ಈ ಪರಸ್ಪರ ದ್ವೇಷ ಮೋಸ ಮತ್ತು ಆತ್ಮ ವಂಚನೆಯ ದಾರಿಯಿಂದ ಒಂದು ಹೆಜ್ಜೆ ಹಿಂದಿಟ್ಟು ಸಮತೋಲನದ ಹೊಸ ಮಾರ್ಗವನ್ನು ಕಂಡುಕೊಳ್ಳಬೇಕಿದೆ. ನಾವೀಗ ಮಧ್ಯವರ್ತಿ ಎಂಬ ಪದದಿಂದ ಇನ್ನೂ ಸ್ವಲ್ಪ ಮುಂದೆ ಹೋಗಬೇಕಾಗಿದೆ- ನಿಧಾನವಾಗಿ ನಾವೊಂದು ನಿರ್ಣಾಯಕ ಘಟ್ಟ ತಲುಪುತ್ತಿದ್ದೇವೆ. ಆದರೆ ಇರುವ ಕೊರತೆ ಏನೆಂದರೆ ಸಣ್ಣ ಪ್ರಮಾಣದ ತಂತ್ರಜ್ಞಾನದ್ದು. ನಮಗೀಗ ತಿಳಿದಿರುವ ತಂತ್ರಜ್ಞಾನವೆಂದರೆ ವಸ್ತುಗಳನ್ನು ಉತ್ಪಾದಿಸುವದು ಮಾತ್ರ. ನಾವು ಇದೇ ರೀತಿಯಲ್ಲಿ ದೊಡ್ಡ ಪ್ರಮಾಣದ ಉತ್ಪಾದನೆಯಲ್ಲಿ

ತೊಡಗಿವೆಯೆಂದರೆ ನಮ್ಮ ಉದ್ಯಮಗಳು ಕೇವಲ ದೊಡ್ಡ ಪಟ್ಟಣಗಳಿಗೆ ಸೀಮಿತವಾಗುತ್ತ ಒಂದು ರೀತಿಯ ಧೃವೀಕರಣ ಉಂಟಾಗುತ್ತದೆ. ಸೀಮಿತ ಸ್ಥಳಗಳಲ್ಲಿ ಮಾತ್ರ ಅತಿ ಹೆಚ್ಚಿನ ದಾಸ್ತಾನು ಕೂಡಿಬಿದ್ದು ಉಳಿದೆಲ್ಲ ಕಡೆಯೂ ಬಹುಪಾಲು ಖಾಲಿ ಉಳಿಯುವುದೇ ಈ ಹೊಸ ಧೃವೀಕರಣ. ಅಟ್ಲಾಂಟಿಕ್ ದೇಶಗಳಾದ ಕೆನಡಾ ಮತ್ತು ಅಮೇರಿಕಾ ಇವುಗಳತ್ತ ನೋಡಿದರೆ ನಾವು ಇದನ್ನು ಮನಗಾಣುತ್ತೇವೆ. ಉತ್ತರ ಅಮೇರಿಕೆಯ ಅನೇಕ ಸಮುದಾಯಗಳು ಮಧ್ಯವರ್ತಿ ತಂತ್ರಜ್ಞಾನ ಗುಂಪಿಗೆ ಸೇರಿಕೊಂಡು ದೊಡ್ಡ ಮೆಟ್ರೋಪಾಲಿಟನ್ ವಾತಾವರಣದಲ್ಲಿ ತಾವು ವಸಾಹತುಗಳು ಆಗುತ್ತಿದ್ದೇವೆ ಎಂಬ ಅಭಿಪ್ರಾಯ ಪಡುತ್ತಿರುವರು. ಆದರೆ ನಾವು ವಸಾಹತುಗಳು ಆಗಬೇಕಿಲ್ಲ. ನಾವು ನಾವೇ ಆಗುತ್ತ ನಮ್ಮದೇ ಆದ ಒಂದು ಸಮಾಜವನ್ನು ನಿರ್ಮಿಸಬೇಕಿದೆ. ಇಂಥ ಸಮಾಜದ ನಿರ್ಮಾಣ ಚಿಕಾಗೊದಂತಹ ದೊಡ್ಡ ನಗರಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುವದಕ್ಕಾಗಿ ಅಲ್ಲ. ಮಾಂಟಾನಾದಂತಹ ಚಿಕ್ಕಪಟ್ಟಣಗಳಲ್ಲಿಯೇ ನಮಗೆ ಕೆಲಸವಿರಬೇಕು. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದ ಶೇಕಡ 85 ಪದವೀಧರರಿಗೆ ಮೊಂಟಾನಾದಲ್ಲಿ ಕೆಲಸ ಸಿಕ್ಕದೆ ಅವರು ದೊಡ್ಡ ಪಟ್ಟಣಗಳಿಗೆ ವಲಸೆಹೋಗಬೇಕಾಗಿದೆ. ಏಕೆಂದರೆ ಮೊಂಟಾನಕ್ಕೆ ಹೊಂದುವಂಥ ಯೋಗ್ಯವಾದ ತಂತ್ರಜ್ಞಾನ ನಮ್ಮಲ್ಲಿಲ್ಲ. ಆದರೆ ಒಂದು ಯೋಗ್ಯವಾದ ಸಣ್ಣ ಪ್ರಮಾಣದ ತಂತ್ರಜ್ಞಾನವನ್ನು ಸೃಷ್ಟಿಸಲಾರದಷ್ಟು ನಾವು ಅಸಹಾಯಕರಾಗಿರುವೆವೇ ? ಎಂಬುದು ಮೊದಲ ಪ್ರಶ್ನೆ. ಎರಡನೆಯ ಪ್ರಶ್ನೆ ಎಂದರೆ ಅತಿ ಸಂಕೀರ್ಣವಾದ ಚಿಕಾಗೊ, ಟೊರಾಂಟೊ ಗಳಲ್ಲಿನ ತಂತ್ರಜ್ಞಾನವು ನಮ್ಮ ತಜ್ಞ ಇಂಜಿನಿಯರುಗಳನ್ನು ತಮ್ಮತ್ತ ಸೆಳೆದುಕೊಂಡು ಬಿಡುತ್ತವೆ. ಹೀಗಾಗಿ ಸರಳವಾದ ಜೀವದ ಮೂಲದ ಬೇರುಗಳನ್ನೊಳಗೊಂಡ ತಂತ್ರಜ್ಞಾನವನ್ನು ಸೃಷ್ಟಿಸಲು ಬೇಕಾಗುವ ತಜ್ಞ ಇಂಜಿನಿಯರುಗಳ ಕೊರತೆ ಉಂಟಾಗುತ್ತದೆ. ಮೂರನೆಯ ದರ್ಜೆಯ ಯಾತಕ್ಕೂ ಬಾರದ ಇಂಜಿನೀಯರನೊಬ್ಬ ಜಟಿಲವಾದದ್ದನ್ನು ಇನ್ನಷ್ಟು ಜಟಿಲಗೊಳಿಸಬಲ್ಲ. ಆದರೆ ಸರಳಗೊಳಿಸುವ ಕ್ರಿಯೆಗೆ ಅತ್ಯುತ್ತಮ ಇಂಜಿನೀಯರನೇ ಬೇಕಾಗುತ್ತಾನೆ.

ಮೂರನೆಯ ವಿಷಯವೆಂದರೆ ನಾನು ಈಗಾಗಲೆ ಸೂಚಿಸಿರುವ ಕಾರ್ಖಾನೆಗಳ ಖರ್ಚು. ಉಪಕರಣಗಳ ಮೇಲೆ ಹಾಕುವ ಬಂಡವಲು ಗಗನ ಮುಟ್ಟುವಷ್ಟು ತುಟ್ಟಿಯಾದರೆ ಬಹುರಾಷ್ಟ್ರೀಯ ಸಂಸ್ಥೆಗಳು ಹೆಚ್ಚುತ್ತಾ ಹೋಗಿ ಕಾರ್ಖಾನೆಗಳು ಮಾತ್ರ ಹುಟ್ಟಿಕೊಂಡು ಜನತೆ ಲೆಕ್ಕಕ್ಕೆ ಬಾರದೇ ಹೊರಗುಳಿಯುವಂತಾಗುತ್ತದೆ. ಈಗಾಗಲೆ ನಿರುದ್ಯೋಗಿಗಳಿದ್ದ ಸ್ಥಳಗಳಲ್ಲಿ ಇಂಥ ಪ್ರಕ್ರಿಯೆ ನಡೆದರೆ ಅದರಷ್ಟು ಹಾನಿಕರವಾದದ್ದು ಬೇರೆ ಇಲ್ಲ. ನಾಲ್ಕನೆಯ ಅಂಶ ಸ್ವಲ್ಪ ಬೇರೆ ರೀತಿಯದು.

ಅದೆಂವರೆ ಆಧುನಿಕ ತಂತ್ರಜ್ಞಾನ ಹಿಂಸೆಯನ್ನೊಳಗೊಂಡೇ ಬೆಳೆಯುತ್ತಿದೆ. ಇದನ್ನ ನಮ್ಮ ಕೃಷಿ ವಿಜ್ಞಾನದಲ್ಲಿ ಹೆಚ್ಚಾಗಿ ಕಾಣುತ್ತಿದ್ದೇವೆ. ನಾವು ಸಿಂಪಡಿಸುತ್ತಿರುವ ರಾಸಾಯನಿಕಗಳು ಅತ್ಯಂತ ಹಿಂಸಾತ್ಮಕವಾದವುಗಳು. ಅವುಗಳನ್ನು ನಾವು ಕ್ರಿಮಿನಾಶಕಗಳೆಂದು ಕರೆಯುತ್ತಿದ್ದೇವೆ. ಇದರರ್ಥವೆಂದರೆ ಇವು ಕೊಲೆ ಪಾತಕ ಪದಾರ್ಥಗಳು. ಎಲ್ಲ ಜೀವಿಗಳೂ ಜೀವಿಸಲು ಅನಿವಾರ್ಯವಾಗಿ ಅವಲಂಬಿಸಿರುವ ಭೂಗ್ರಹದ ತೆಳುವಾದ ಜೀವಪೊರೆಯ (Biosphere) ಮೇಲೆ ಈ ಕೊಲೆಗಡುಕ ಪದಾರ್ಥವನ್ನು ಮಿಲಿಯ–ಮಿಲಿಯ ಟನ್ನುಗಳಲ್ಲಿ ಎರಚುತ್ತಿದ್ದೇವೆ. ನೀವೇನೇ ಹೇಳಿದರೂ ಇದು ಅತ್ಯಂತ ಕ್ರೂರವಾದ ತಂತ್ರಜ್ಞಾನ. ಇಂಥ ಕ್ರೂರ ತಂತ್ರಜ್ಞಾನ ವೈದ್ಯಕೀಯ ವಿಜ್ಞಾನದಲ್ಲಿಯೂ, ತನ್ನ ಕೈ ಚಾಚುತ್ತಿದೆ. ಹಿಂಸಾತ್ಮಕ ಹಾದಿಯ ಮೂಲಕವೆ ಅತೀ ವೇಗದ ಫಲ ಬಯಸುತ್ತಿದ್ದೇವೆ ನಾವಿಂದು. ಅಷ್ಟೇ ವೇಗದಲ್ಲಿ ಡಾಕ್ಟರುಗಳು ರೋಗಗಳನ್ನು ಹೆಚ್ಚಿಸುತ್ತಿದ್ದಾರೆ. ಉಚಿತವಾದ ಒಂದು ಸಲಹೆ ನೀಡಬಹುದಾದ್ದೆಂದರೆ– ಕಾಯಿಲೆ ಬಿದ್ದಾಗ ಈ ವೈದ್ಯರುಗಳ ಬಳಿ ಹೋಗಬೇಡಿ.

ಶಕ್ತಿಗೆ ಸಂಬಂಧಿಸಿದ ಬಿಕ್ಕಟ್ಟನ್ನು ಬಗೆಹರಿಸಲು ನಾವು ಮಾಡುತ್ತಿರುವ ಎಲ್ಲ ಪ್ರಯತ್ನಗಳಲ್ಲೂ ಈ ಹಿಂಸೆಯನ್ನೇ ಕಾಣುತ್ತಿದ್ದೇವೆ. ಪ್ಲುಟೋನಿಯಂ ಎಂಬ ನಂಬಲಸಾಧ್ಯವಾದಷ್ಟು ಭಯಂಕರವಾದ ದ್ರವ್ಯದೊಳಗೆ ಇಡೀ ಜಗತ್ತಿನ ನಾವೆಲ್ಲರೂ ಬೀಳಲು ತಯಾರಾಗಿದ್ದೇವೆ. ಇದನ್ನು ಸರ್ವಶ್ರೇಷ್ಟನಾದ ದೇವರು ನಿರ್ಮಿಸಲಿಲ್ಲ. ತಾನೆಲ್ಲಿಗೆ ನಿಲ್ಲಿಸಬೇಕೆಂದು ಅವನಿಗೆ ಗೊತ್ತಿತ್ತು. ಇದು ಮಾನವ ನಿರ್ಮಿತವಾದದ್ದು. ನಮ್ಮ ನಡುವೆ ಚಕಿತಗೊಳಿಸಬಲ್ಲ ವಿಜ್ಞಾನಿಗಳಿದ್ದಾರೆ. ನೀವೇನೂ ಹೆದರಬೇಕಾದದ್ದಿಲ್ಲ, ಎಲ್ಲವೂ ಸುಸೂತ್ರವಾಗಿದೆ ಎಂದು ನಮಗೆ ಭರವಸೆ ನೀಡುತ್ತಲೇ ಇರುತ್ತಾರೆ. ಆದರೆ ಇದು ಕುರುಡನಿಗೆ ದಾರಿ ತೋರುವ ರೀತಿ. ನಮಗೆ ಹಿಂಸೆಯ ಈ ತಂತ್ರಜ್ಞಾನ ಬೇಕಿಲ್ಲ. ನಮಗೆ ಆಧಾರವಾಗಿ ನಿಲ್ಲಬಲ್ಲ ಜನ ಖಂಡಿತ ಇದ್ದಾರೆ. ಅವರು ಯಾವುದೇ ಹಿಂಸೆಯ ಗೋಜಿಲ್ಲದೆ ನಮಗೆ ಸಾಕಾಗುವಷ್ಟು ಆಹಾರ ಉತ್ಪಾದನೆ ಹೇಗೆ ಸಾಧ್ಯ, ನಾವು ಹೇಗೆ ಆರೋಗ್ಯವಾಗಬಲ್ಲೆವು ಎಂಬುದನ್ನೆಲ್ಲ ಸಾಧಿಸಬಲ್ಲರು. ಆದರೆ ಇಂಥದಕ್ಕೆ ಯಾವ ಸರಕಾರವೂ ಬೆಂಬಲ ಕೊಡುತ್ತಿಲ್ಲ. ಯಾವದೇ ಅಕಡೆಮಿಯಾಗಲಿ ವ್ಯವಹಾರ ಸಂಸ್ಥೆಯಾಗಲೀ ಇತ್ತ ಗಮನ ಹರಿಸುತ್ತಿಲ್ಲ. ಕೃಷಿಗಾಗಿ ಸರ್ಕಾರಗಳು ಸುರಿಯುತ್ತಿರುವ ದೊಡ್ಡ ದೊಡ್ಡ ಮೊತ್ತಗಳೆಲ್ಲ ರಾಸಾಯನಿಕಗಳ ರೂಪವಾಗುತ್ತಿವೆ. ಆದರೆ ನೈಸರ್ಗಿಕ ರೈತನೊಬ್ಬ ಈ ಯಾವ ರಾಸಾಯನಿಕಗಳನ್ನೂ ಬಳಸದೆ ಏನನ್ನು ಸಾಧಿಸಿ ತೋರಿಸುತ್ತಾನೆ ಅದಕ್ಕೆ ಕಿಂಚಿತ್ತೂ ಪ್ರೋತ್ಸಾಹವಿಲ್ಲ. ರಾಸಾ

ಯನಿಕಗಳ ಹಿಂಸೆ ಇಲ್ಲದ ಬೇಸಾಯದ ಬೇರೆ ಬೇರೆ ವಿಧಾನಗಳನ್ನು ಪಂಡಿತರುಗಳ ಗಮನಕ್ಕೆ ತಂದರೆ ಅವರು ವಿನಾಕಾರಣ ರೇಗುತ್ತಾರೆ.

ಈಗ ನಮಗುಳಿದಿರುವ ಕೆಲಸವೆಂದರೆ ಈ ದಿಕ್ಕಿನ ಚಿಂತನೆಗೆ ಜನತೆಯನ್ನು ಪ್ರೇರೇಪಿಸುವದು. ಇದಕ್ಕೆ ಸಂಬಂಧಿಯಾಗಿ ನಾವು ಹೇಳುವುದೇನೆಂದರೆ–ನೋಡಿ, ಅತ್ಯಂತ ಸಮರ್ಥವಾಗಿ ರೂಪಿಸಲ್ಪಟ್ಟ ಸ್ಟೀಮರುಗಳು ಕೂಡಾ ಅಪಾಯದ ಸಂದರ್ಭದಲ್ಲಿ ಬಳಸುವ ಪುಟ್ಟ ಜೀವನೌಕೆಗಳನ್ನು ಕೊಂಡೊಯ್ಯುತ್ತವೆ. ಯಾಕೆಂದರೆ ಈ ಸ್ಟೀಮರುಗಳು ಖಂಡಿತವಾಗಿ ನೀರ್ಗಲ್ಲುಗಳ ನಡುವೆ ಸಿಕ್ಕಿಹಾಕಿಕೊಳ್ಳುತ್ತವೆ ಎನ್ನುವದಕ್ಕಲ್ಲ. ಆದರೆ ಈ ಸ್ಟೀಮರುಗಳು ಒಮ್ಮೊಮ್ಮೆ ನೀರ್ಗಲ್ಲುಗಳ ನಡುವೆ ಸಿಕ್ಕಿಹಾಕಿಕೊಳ್ಳಬಹುದು ಎಂಬ ಕಾರಣಕ್ಕಾಗಿ. ಹಾಗೆಯೇ ಆಧುನಿಕ ಜಗತ್ತಿನ ಈ ಸಮರ್ಥ ಸ್ಟೀಮರಿನೊಂದಿಗೂ ಪುಟ್ಟ ಜೀವದೋಣಿಗಳು ಇರಬೇಕಲ್ಲವೇ ? ಇಂಥ ಜೀವದೋಣಿಗಳಿಗಾಗಿ ನೀವು ನಿಮ್ಮ ಇಡೀ ಸಂಪತ್ತನ್ನು ಸುರಿಯಬೇಕಾಗಿಲ್ಲ. ಹಾಗೆಯೇ ಚಿಕ್ಕ, ಸರಳ ಹಾಗೂ ಅಹಿಂಸಾತ್ಮಕ ತಂತ್ರಜ್ಞಾನದ ಅನ್ವೇಷಣೆಗೆ ನಿಮ್ಮ ಇಡೀ ಸಂಶೋಧನಾ ವ್ಯವಸ್ಥೆ ತೊಡಗಬೇಕಾಗಿಲ್ಲ. ನಿಮ್ಮ ಸಂಪತ್ತಿನ ಸಂಶೋಧನೆಯ ಶೇಕಡಾ 5 ಅಥವಾ 10 ರಷ್ಟು ಈ ಕೆಲಸಕ್ಕೆ ತೊಡಗಿದರೆ ಸಾಕು.

ನಾವು ಸಧ್ಯಕ್ಕೆ ಏನನ್ನಾದರೂ ಮಾಡಬೇಕಾದರೆ ನಮಗೆ ಮುಖ್ಯವಾಗಿ ಬೇಕಾಗಿರುವದು ಸಹಕಾರೀ ಮನೋಧರ್ಮ. ನಾವು ಕೆಲಸ ಮಾಡುವ ಪ್ರತಿ ವಿಭಾಗದಲ್ಲೂ ಇಂತಹ ದೃಷ್ಟಿಕೋನ ಬೇಕು. ನಮ್ಮ ಚಿಂತನೆಯನ್ನು ಪ್ರಚುರಪಡಿಸಲು ಮತ್ತು ಸಾಧಿಸಲು ರೂಪಿಸಿಕೊಂಡ ITDG ಸಂಸ್ಥೆಯಲ್ಲೂ ನಾವಿದನ್ನು ಸಾಧಿಸಲು ಪ್ರಯತ್ನಿಸಿದ್ದೇವೆ. ಇದನ್ನು ನಾವು ABCD ಸಂಯೋಜನೆ ಎನ್ನುತ್ತೇವೆ.

A ಎಂದರೆ ಆಡಳಿತ. ಸರಕಾರದಿಂದ ಬಂದ ಜನ ಇವರಾದರೂ ಇವರು ಸರಕಾರವನ್ನು ಪ್ರತಿನಿಧಿಸುವದಿಲ್ಲ. ಇವರು ಹಣಕಾಸಿನ ಸ್ಥಿತಿಯನ್ನು ನಿಯಂತ್ರಿಸುತ್ತಾರೆ. ಸೂತ್ರವನ್ನು ಹೇಗೆ ಆರಿಸಬೇಕೆಂಬುದು ಇವರಿಗೆ ಚನ್ನಾಗಿ ಗೊತ್ತು. ಇವರು ಸಂಸ್ಥೆಗಾಗಿ ಕಂದಾಯ ವಸೂಲು ಮಾಡುತ್ತಾರೆ ಮತ್ತು ಅದನ್ನು ಖರ್ಚು ಮಾಡುತ್ತಾರೆ.

B ಎಂದರೆ ವ್ಯಾಪಾರ. ಈ ವ್ಯಾಪಾರ ಎಂಬುದು ಜಾಣತನ ಹಾಗೂ ಒಂದು

ೀಸ್ತು. ಇವುಗಳ ಮೂಲಕ ಸರಕುಗಳು ಜೀವಂತವಾಗಿರುವಂತೆ ಅದು ನೋಡಿ ಕೊಳ್ಳುತ್ತದೆ. ಬಾಳದಂತಹ ವಸ್ತು ನಿರ್ಮಾಣ ಕೇವಲ ಕಾಲವನ್ನು ವ್ಯರ್ಥ ಮಾಡಿದಂತೆ.

C ಎಂದರೆ ಸಂಪರ್ಕ. ಇದರಲ್ಲಿರುವವರು ಭಾಷೆ ಹಾಗು ಸಂಶೋಧನೆಗೆ ಸಂಬಂಧ ಪಟ್ಟವರು. ಯೋಚಿಸಲು ಬರೆಯಲು, ಸಮಯವಿರುವ ಜನರಿವರು. ಇವರು ಸಮಸ್ಯೆಗಳನ್ನು ಬಗೆಹರಿಸುತ್ತಾರೆ. ಆದರೆ ಇವರನ್ನು ಒಂಟಿಯಾಗಿ ಕೆಲಸ ಮಾಡಲು ಬಿಡಬಾರದು. ಯಾಕೆಂದರೆ ಇವರೆಲ್ಲ ಆಡಳಿತ ನಡೆಸದ ಬುದ್ಧಿಜೀವಿಗಳು ಅವರಿಗೆ ಸಮಸ್ಯೆಗಳು ಬೇಕು. ಅದು ಚೆಸ್ ಆಟದಂಥ ಸಮಸ್ಯೆಯಾಗಿರಬಹುದು ಅಥವಾ ಬೇರಾವದೇ ಸಮಸ್ಯೆಯಾಗಿರಬಹುದು. ಅವರು ಸಮಸ್ಯೆಯನ್ನು ಬಗೆ ಹರಿಸಿ ಫೈಲಿನ ಮೇಲೆ "ಅತಿ ಗೌಪ್ಯ" ಎಂದು ಗುರುತಿಸಿ ಪಕ್ಕಕ್ಕಿಟ್ಟು ಬೇರೊಂದು ಸಮಸ್ಯೆಗೆ ಹೋಗಿಬಿಡುತ್ತಾರೆ. B ಸಂಸ್ಥೆಯ ಜನ ಅವರ ಪಕ್ಕದಲ್ಲಿಯೇ ಕುಳಿತು ಹೇಳಬೇಕು. "ಈ ಬಾಬ್ತು ದುಡ್ಡು ಹಾಕಿದ್ದೇವೆ. ನಾವದನ್ನು ಹಾಳಾಗದಂತೆ ಸಾಯದಂತೆ ನೋಡಿಕೊಳ್ಳಬೇಕು". ಆಗ ಮಾತ್ರ C ದ ಜನ ಹೆಚ್ಚು ಪ್ರಯೋಜನಶೀಲರಾಗುತ್ತಾರೆ.

D ಎಂದರೆ ಪ್ರಜಾಸತ್ತಾತ್ಮಕ ಸಂಘಟನೆ. ಅದು ಕಾರ್ಮಿಕ ಸಂಸ್ಥೆ, ಪರಿಸರ ಸಂಸ್ಥೆ, ಸ್ತ್ರೀ ಸಂಸ್ಥೆ ಮುಂತಾದ ಸಂಘಟನೆಗಳ ಜನರನ್ನು ಒಳಗೊಂಡಿರುತ್ತದೆ. ಸಂತೋಷದ ಸಂಗತಿ ಎಂದರೆ ಎಲ್ಲ ದೇಶಗಳಲ್ಲೂ ಇಂಥ ಪ್ರಜಾಸತ್ತಾತ್ಮಕ ಸಂಘಟನೆಗಳು ಬಹು ಸಂಖ್ಯೆಯಲ್ಲಿವೆ.

ಎಲ್ಲಿ ನಿಮಗೆ ABCD ಗುಂಪುಗಳು ಜನರ ರೂಪದಲ್ಲಿ ಒಟ್ಟಾಗಿ ದೊರಕುವವೋ ಅದೇ ನಿಮಗೆ ತುಂಬಾ ಒಳ್ಳೆಯದು. ಮೊದಮೊದಲು ಈ ಗುಂಪುಗಳ ನಡುವೆ ತಿಳುವಳಿಕೆ ಇರುವದಿಲ್ಲ. ಆದರೆ ಕ್ರಮೇಣ ಅವರು ತಮ್ಮಷ್ಟಕ್ಕೆ ತಾವೇ ತಾವೆಲ್ಲರೂ ಬುದ್ಧಿವಂತರು ಮತ್ತು ಉಪಯುಕ್ತ ಜೀವಿಗಳು ಎಂಬುದನ್ನು ಅರ್ಥ ಮಾಡಿಕೊಂಡು ಸಂತೋಷಪಡುವರು. ABCD ಸಂಯೋಜನೆ ಸಾಧ್ಯವಾಯಿತೆಂದಾಕ್ಷಣ ಎಲ್ಲವೂ ಸಾಧ್ಯವಾಗಿಬಿಡುತ್ತದೆ. ಎಂದು ಭಾವಿಸಬಾರದು.

ಆದರೆ ಒಟ್ಟಿನಮೇಲೆ ಇಷ್ಟು ಹೇಳಬಲ್ಲೆ. ಏನೆಂದರೆ ಇಂಥ ವ್ಯವಸ್ಥೆ ನಿಮ್ಮ ಅಗಾಧವಾದ ಹಣದ ಥೈಲಿಯನ್ನು ಬಯಸುವುದಿಲ್ಲ. ಆದ್ದರಿಂದಲೇ ಈ ಸಂಸ್ಥೆಯನ್ನು, ಈ ಚಿಂತನೆಯ ಪ್ರವಾಹವನ್ನು ಸೇರಿಕೊಂಡ ಜನ ಸಂತೃಪ್ತರಾಗಿರುತ್ತಾರೆ.

ಅಮ್ಮನ ನೆನಪು.
(ಕೆಲವು 'ಲಬಸಾ'ಗಳು)

● ಯಶವಂತ ಚಿತ್ತಾಲ

ಕೊಯಿಲು ಮುಗಿದ ಗದ್ದೆಯ ಮಧ್ಯದಲ್ಲೇ
ಹಳೇ ಅಶ್ವತ್ಥ ಕಟ್ಟೆ : ಅರ್ಥಾತ್ ಇದು ಬಹಳ ಹಿಂದಿನ ಮಾತು.
ಮಾಡು ಕುಸಿದ ಗುಡಿಸಲಂಥ ಗಣಪತಿಯ ಗುಡಿಯಿತ್ತು
ಕಟ್ಟೆಯ ಮೇಲೆ, ಅಶ್ವತ್ಥ ಕಾಂಡದ ಸುತ್ತ ಕಟ್ಟಿಸಿದ್ದು.
ಮರದ ರೆಂಬೆಗಳಲ್ಲಿ ಹಳದಿ ಬಣ್ಣದ ಬಿಸಿಲು
ಹೊಳೆಯುತ್ತಿತ್ತು ಅಸ್ತಕ್ಕೆ ನಡೆದ ಸೂರ್ಯನ ಹಾಗೆ.
ಎಲೆ ಗಿಲಿಗಿಲಿಸುವ ಕೊಂಬೆಯಲ್ಲೆಲ್ಲೋ ಅವಿತಿದ್ದ ಒಂಟಿ ಕಾಗೆ
ಬಾಡಿದ ಬೆಳಕನ್ನು ದೂರುವ ತರ ಕೂಗುತ್ತಿತ್ತು
ಕಣ್ಣಿಗೆ ಬೀಳದೇ, ನಿಂತು ನಿಂತು.
ನೋಡುತ್ತಿದ್ದೆ ನಾನು :

ಗದ್ದೆಯಂಚಿನ ಹಳೇ ಮನೆಯೊಂದರ ಜಗಲಿ ಮೇಲಿಂದ,
ಗಂಜೀ ಊಟ ಅನ್ನದೂಟಗಳ ಜೊಂಪು ಕಳೆದಿರದ ಕಣ್ಣಿನಿಂದ
ನೋಡುತ್ತಿದ್ದಂತೆಯೆ ಎದ್ದು ಬಂತು ಎಂದಿನಂತೆ, ಎಂದೋ
ಕಳಕೊಂಡ ಅಮ್ಮನ ನೆನಪು ಒಳಗಿಂದ. ಬೂದಿಯಲ್ಲಡಗಿದ ಕೆಂಡ
ಹೊತ್ತಿಕೊಂಡಂತೆ ಮೆಲ್ಲನೆ ಕರುಳ ಒಳಮೈ ಕಾದು ಬೆಚ್ಚ
ಗಾದದ್ದೇ ತಡ; ಗದ್ದೆ ಕಟ್ಟೆ ಗುಡಿ ಮರ ಕಾಗೆ ಬಿಸಿಲು ಎಲ್ಲ
ಒಂದೇ ಕ್ಷಣದಲ್ಲಿ ಉರಿದು ಒಂದಾಗಿ ಕಣ್ಣೆದುರೇ
ಕಣ್ಮರೆಯಾದದ್ದು ಕಾಣಲೇ ಇಲ್ಲ. ನಿಮ್ಮಳ ತಾಯ
ದನಿಯುಳ್ಳ ಹೊಳಪಾಗಿ ಬೆಳಗಿ ನಿಂತದ್ದು

ತಿಳಿಯಲಿ ಇಲ್ಲ. ಬಹಳ ಹೊತ್ತಿನವರೆಗೆ.
ಅಮ್ಮನ ನೆನಪೇ ಹಾಗೆ, ಯಾವಾಗಲೂ. ಜಳಿಗ್ಗೆ
ಮೀಯಲೆಂದು ಬಚ್ಚಲ ಮನೆಗೆ ಹೋದಾಗಲೂ
ಹೀಗೇ :

ಉಗುರು ಬೆಚ್ಚಗೆ ನೀರು ತ್ವಚೆಗುಂಟ ಹರಿಯುತ್ತ ಮೈತುಂಬ
ಅಮ್ಮನ ನೆನಪು: ತೀರಾ ಪರಿಚಯದ ಮರೆಯದ ಸ್ಪರ್ಶ- ಬೆಚ್ಚಗಿನ
ಒದ್ದೆತನದಲ್ಲಿ ಕಾದು ಕುಳಿತಿತ್ತು ಎನ್ನುವ ತರಹ ಆಹಾ!
ಫಕ್ಕನೆ ನಕ್ಕ ವಾತ್ಸಲ್ಯ ಪೂರ್ಣ ಪರಾಮರ್ಶ. ಅರಿವಿನಲ್ಲಿ
ಆಸ್ಫೋಟಿಸಿತು ರಾತ್ರಿ, ದೀಪವಾರಿಸಿ ಮಲಗಿದಲ್ಲೇ, ಇದೇ
ಈಗ :

ನನ್ನ ಕಣ್ಣಿನ ಆಳದಲ್ಲಿ ಹುದುಗಿದೆ ಇನ್ನೂ ಅಂದು
ಅಮ್ಮನನ್ನು ಖುದ್ದು ನೋಡಿದ ಕಣ್ಣು; ಕಿವಿಯ
ಒಳಗಡೆ ಅವಳ ದನಿಗೆ ಕಂಪಿಸಿದ ಪರದೆಯ ಪದರು; ತ್ವಚೆಯ
ಅಡಿಯಲ್ಲುಂಟು ಅಮ್ಮ ಸ್ಪರ್ಶಿಸಿದ ಸ್ತರ.
ಶಾಖ ದನಿ ಬೆಳಕುಗಳು ಹದವಾಗಿ ಒಂದೆಡೆ ಬೆರೆವ
ಸುಮುಹೂರ್ತಕ್ಕೆ ಜುಮ್ಮುದಟ್ಟುವ ಈ ಅಂಗಗಳ ಖೋಲ
ಪದರುಗಳಲ್ಲಿ ಪಳಿಯುಳಿಸಿಹಳು ಅಥಾಂಗ, ಹೊತ್ತು ಹೆತ್ತವಳು;ಸಕಲ
ನೆನಪುಗಳ ತಾಯಿ ಬೇರಾಗಿ; ನನ್ನ ಅನುಭೂತಿಗಳ ತಂಪು
ತವರೂರಾಗಿ.

ಕಡಲಾಳ

● ಸ. ಉಷಾ

ಹೆಪ್ಪಿಟ್ಟ ಕತ್ತಲೆಯಮಾವಾಸ್ಯೆಯಲ್ಲ
ಹುಚ್ಚೆದ್ದ ಕಡಲ ದಿಕ್ಕುತಪ್ಪಿದ
ಬೆಟ್ಟದಲೆಗಳುರುಳಾಡಿ
ಧಿಂಗಣಗುಣಿವಾಗ
ಪುಟ್ಟ ಹಡಗೊಂದು ತಲೆತಿರುಗಿ
ಬೀಳುತಿದೆ ಕಡಲಾಳದ ತಾಯ್ಮಡಿಲಿಗೆ

ಜೀವದೋಣಿಗಳ ಹುಡುಕಿ
ಹಾಯಿ ಎಳೆದು ಹಗ್ಗ ಬಿಗಿದು
ಹಾಹಾಕರಿಸಿ ವಿಲಿಗುಡುವ
ಪಯಣಿಗರ ನಿಳುವಿ
ದೋಣಿಗಳಕಳುವಿ
ತಾನಿಳಿದ ಕೊನೆಯ ದೋಣಿಗೆ
ನಾಯಕ

ದಿಕ್ಕು ತಪ್ಪಿ ನಾವೆಗಳು
ಚಂಡ ಮಾರುತಕೆ ತುಳ್ಳಾಡಿ
ನೆಲವೆಲ್ಲಿಂದು ಅರಸುವಾಗ
ಘಣಗುಟ್ಟಿ ಕರೆವ ಗಂಟೆಸದ್ದು

ಚಂದ್ರ ತಾರೆಗಳಿರದ ಕರಿರಾತ್ರಿಯಲ್ಲಿ
ಕಣ್ಮಿಟುಕಿ ಕರೆವುದು

ಮೌನ ಸಮುದ್ರ ತೀರ ದೀಪಗೃಹದ
ಚಂದ್ರಿಕೆ

ಹೇಗೋ ಜನರ ತೀರ ಸೇರಿಸಿ
ಬಿದ್ದಿದ್ದಾನೆ ಬಸವಳಿದು
ತಣ್ಣನ್ನ ಮಳಲಪ್ಪಿ
ಉಕ್ಕಿತು ಕಡಲು
ಅಲೆಗುದುರೆಯೇರಿ

ನೊರೆತೆರೆಗಳುರುಳಿ ನೈಮೇಲೆ
ತಳದ ಮರಳ ಕೊಚ್ಚಿ ಕೊರೆದು
ಕೊಂಡು ಹೋಯಿತು
ಉಸಿರಿಲ್ಲದೊಡಲ
ತೋರಲು ಬಡಬಾನಲ
ಜಲಕನ್ನೆಯರ ನಗೆ ಧವಳ
ಅಲ್ಲಲ್ಲಿ ಒಂದೊಂದು ಶಂಖದಹುಳ
ನಿಜದ ಬೆಳಕು ಮುಕ್ಕುಳಿಸುವ
ಕಡಲಾಳದಲ್ಲೂ
ಮೂಗಿಗೆ ಹತ್ತಿ ತುಂಬಿಬಿಟ್ಟ
ಸಾಲ್ಮನ್ ಗುಂಪು
ದಾರಿಯರಸುತಿದೆ
ತನ್ನ ಗುರಿಗೆ
ಹೇಗೆ ಮರೆತೆ ಸಾಲ್ಮನ್
ನಿನ್ನಪ್ಪ ಅವ್ವ ಅಜ್ಜಿಯರು
ತುಳಿದ ನೀರೊಡಲ ಹಾದಿ
ಉಪ್ಪು ನೀರಲಿ ಬೆರತು ಬೆಳೆದು
ಕೊಬ್ಬಿ ಮರಿ ಹೊತ್ತು ಹೊರಟರೆ
ಮತ್ತೆ ಕಾದಿಹುದು ನೀ ಬೆಳೆದ
ತಾಯಿ ತೊರೆ
ದಾರಿ ದೂರ ಸಾಲ್ಮನ್
ಆಗಸದಿ ಕಾದಿಹವು

ಹದ್ದು ಗರುಡ
ತಾಯಿ ನೀರಲ್ಲಿ ಕಾದಿಹವು
ಶಾರ್ಕುಗಳು
ಸಾಲೋಮನ್ನಿಗಲೆತದ ಶಿಕ್ಷೆ
ಹವಳಕ್ಕೋ ತಾ ಹುಟ್ಟಿ ಬೆಳೆದ
ಸೌಂದರ್ಯದರಮನೆಯಲ್ಲಿ ಸಮಾಧಿ
ಯಾರು ಮಾಡಿದರೀ ಚಿತ್ರಮೋಳ
ಹೊರಗೆ ನೀಲಸಾಗರದ ಚಂದ
ಒಳಗೆ ಬಡಬಾನಲ
ಹೇಗೆ ಉಳಿದಿದೆ ಈ ಅಗ್ನಿದಿವ್ಯ
ಯಾಕಿನ್ನೂ ಕಡಲಾಳ ಸಿಡಿಯದು
ತಾಯ್ಮಳಲು ಕುಸಿಯದು
ಮರುಳ ಮರುಳಾ
ಮೊರೆಯಿತು ಇಡೀ ಕಡಲು
ದೋಣಿಯಲಿ ಮೇಲೆ ಮೇಲೆ ತೇಲಾಡಿ
ಆಳಕಿಳಿವಾಗಲೂ ಮುಳುಗು ಮುಸುಕಿಕ್ಕಿ
ಇಳಿವ ನೆಲದ ಮಗ ನೀನು
ಏನ ಬಲ್ಲೆ ತಾಯ್ಮಳಲ ಅಂತರಾಳ
ಕೊಚ್ಚಿ ಹೋಗಿವೆ ಒಂದು ನಿಟ್ಟುಸಿರಿಗೆ
ತೆಪ್ಪ ದೋಣಿ ಹರಿಗೋಲು ಹಡಗು ನಾಗರೀಕತೆಗಳು
ನೆಲದಡ ಕೊಚ್ಚಿ ಕೊರೆದರೆ
ಒಮ್ಮೆ ಹುಡುಗಾಟಕ್ಕೆ
ಕ್ಷೀರದ ಮಳಲಗುಪ್ಪೆಯಲಿ
ಬೇರಸಿಳಿಸಿ ನೆಲವ ಬೆಳಸುತ್ತಾವೆ
ಮ್ಯಾಂಗ್ರೋವ್ ತೋಪು
ಹೇಳ ಹೇಳುತ್ತ ಬೀಸಿ ಒಗೆದಳು ದಡಕೆ
ತಾಯಿಕಡಲು

ಹೋಗು ಹುಡುಕಿಕೋ ನಿನ್ನ ತಾಯಿನೆಲ
ನನ್ನೊಡಲ ಬಗೆವಾಸೆ ಇದ್ದರಿನ್ನೂ
ಹುಟ್ಟಿ ಬರುವಂತೆ
ಈಜು ರೆಕ್ಕೆಯು ಕಡಲೊಡಲ
ಹಕ್ಕಿಯಾಗಿ

ಬರೀ ನೆಗೆಟಿವ್‌ಗಳು

● ರಾಮಗಿರಿ ರವೀಂದ್ರ

ನಾನು ಒಂದು ಕಾರ್ಮೋಡವನ್ನು
ಪ್ರಾರಬ್ಧವೆಂದೂ ಮತ್ತು
ದಿಕ್ಕಿಲ್ಲದಲೆವ ಆಪತ್ತೆಂದು
ಅಂದುಕೊಳ್ಳುತ್ತಿದ್ದಾಗಲೆ
ರಪರಪನೆ ಮಳೆ
ಸುರಿದು ಮರದಡಿ ನಿಂತಿರುವಾಗ
ಕ್ಷಣದಲ್ಲೆ ಶುಭ್ರವಾಯ್ತು ಗಗನ.

ಈ ಭೂಮಿಗೇನಾಗಿದೆ
ಧಿಮಿ ಧಿಮಿ ಸುತ್ತುತ್ತ ತಲೆ ಸುತ್ತಿ-
ಬಂದು ತನ್ನಷ್ಟಕ್ಕೆ ತಾನೆ
ಮಲಗಿ ಬಿಡಲು ? ಇಲ್ಲ
ಮರುಳೆ; ಇವಳು ತಿರುತಿರುಗಿ
ಬೇಡುವುದಿಲ್ಲ ಯಾರನ್ನು
ಭೂಮಿ ಬಿಡುತ್ತಾಳೆ ಹಗಲು-ರಾತ್ರಿ
ಕತ್ತಲು ಬೆಳಕಿನ ರೀಲನ್ನು.

ನಾವಿರುವುದು ಈ ರೀಲಿನೊಳಗೆ
ಬರೀ ನೆಗೆಟಿವ್‌ಗಳಾಗಿ.

ಪ್ರಶ್ನೆಗಳು

ಹೆಚ್. ಪ್ರೇಮಲೀಲಾ

ಒಪ್ಪುವುದರಲ್ಲಿರುವ
ದರ್ಪವನ್ನು
ಅಪ್ಪುವುದರಲ್ಲಿರುವ
ಹಿಡಿತವನ್ನು
ನನ್ನೆದುರಿಗಿನ ಕಟುವಾಸ್ತವದಲ್ಲಿ
ಸವಾಲಾಗಿ ಸ್ವೀಕರಿಸುತ್ತೇನೆ.
ಬಂಡುತನವೆಂದು ಬೇಸರಿಸುತ್ತೀಯಾ ?

ಸ್ವಾರ್ಥ ಸೋಂಕಿರುವ
ಪ್ರೀತಿಯನ್ನು
ಅವಶ್ಯಕತೆಗಳ ಹಂಗಿನ
ಸಂ - ಬಂಧಗಳನ್ನು
ಬದುಕಿನ ಬದ್ಧತೆಯಲ್ಲಿ
ಭ್ರಮೆಗಳಿಲ್ಲದೆ ಒಪ್ಪಿಕೊಳ್ಳುತ್ತೇನೆ.
ಸಿನಿಕತನವೆಂದು ಸಿಡುಕುತ್ತೀಯಾ ?

ಮುಖವಮ್ಮಲನ್ನು ಹೊದ್ದಿರುವ
ಆ ದೂರದ ಬೆಟ್ಟವನ್ನು
ಬೆರಗುಗಣ್ಣುಗಳಿಂದ ದಿಟ್ಟಿಸುತ್ತೇನೆ;
ಕಲ್ಪನೆಯಲ್ಲೇ
ಖುಷಿ ಪಡೆವ ಮನಸ್ಸು
ಅಮೂರ್ತವನ್ನು ಮಾತ್ರ ಪ್ರೀತಿಸುತ್ತದೆ.

ಭಾವನಾತ್ಮಕ ಮೂರ್ಖಳೆಂದು ಮೂದಲಿಸುತ್ತೀಯಾ ?

ಧೂಳು

● ಜಯಂತ ಕಾಯ್ಕಿಣಿ

ಏಳುವದು ಧೂಳು ಬೆಳಕಿನ ಹುಡಿಯಂತೆ ನೆಲದಿಂದ. ಗಾಳಿಗಲ್ಲ, ಮಳೆಗಲ್ಲ. ಸುಮ್ಮನೆ ಏಳುವದು ಮಣ್ಣ ಕಡಲ ತೆರೆಯಂತೆ ಸಣ್ಣಗೆ ಗಗನದೆಡೆಗೆ ಎದ್ದು ಧಾವಿಸುವದು ಕಣ್ಣುಗಳ ಎದುರು. ಧೂಳು ತುಂಬಿದ ಕಣ್ಣು. ಧೂಳು ತುಂಬಿದ ಮೀನು. ಎಲೆಗಳ ಮೇಲೆ ಹೂಗಳ ಒಳಗೆ ಧೂಳಿನಾ ಬಿಂದು. ಎಂಥ ಬೆಳಕು ಹೊಲಿದೀತು ಧೂಳಿನೊಂದು ಅಂಗಿ - ಬೆಳಗಿನ ಅಂಗಿ. ಮುಖ ಮುಚ್ಚಿಕೊಳ್ಳಲು ಅಥವಾ ಅಂಗಾತ ನಿದ್ದೆ ಹೋದ ಸಾಲು ಮಕ್ಕಳಿಗೆ ಹೊದಿಸಿ ನೇವರಿಸಲು. ಮಕ್ಕಳು ಧೂಳಿನ ಮಕ್ಕಳು. ಧೂಳಿನ ನಂಟು ಬಹುಶಃ ಗರ್ಭದೊಳಗೆ ಯಾರು ಹೇಳುತ್ತಾರೆ ಸುಖದ ಕೂಡಿಕೆಯಲ್ಲಿ ಧೂಳಿಲ್ಲ ಎಂದು. ಮಣ್ಣು ಗಿಣ್ಣು ಬೇರು ಕಾಂಡಗಳ ಭಾಷೆ ಬೇರೆ. ಮಹತ್ವಾಕಾಂಕ್ಷೆಯದ್ದು. ಆದರೆ ಧೂಳು. ಅತ್ತ ಮಣ್ಣಲ್ಲ ಇತ್ತ ಹವೆಯಲ್ಲ ಅತ್ತ ನೋಟವಲ್ಲ ಇತ್ತ ಮಾಟವಲ್ಲ. ಬರೀ ಧೂಳು ಎಲೆಯಿಂದ ಎಲೆಗೆ ನುಗ್ಗೆಯಿಂದ ಎಕ್ಕೆಗೆ ತಂತಿಯಿಂದ ಬಲ್ಬಿಗೆ ಪರಾಗದಂತೆ ಹಾರುತ್ತ ನೋವಿನ ಸ್ಪರ್ಶ ಕೊಡುವ ಧೂಳು.

ಕೂತ ಧೂಳು ಆರಿಸಿ ಟಿನ್ನಿನ ಡಬ್ಬದಲ್ಲಿ ಸಂಪರ್ಕ ಹೊಳೆಸಿದರು ಗಂಗಣ್ಣ. ಚಾರಮಿನಾರ್‌ನ ಹೊರಗಿನ ಮಾರಾಟದ ಮಾಲೆಗಳಲ್ಲಿನ ಧೂಳು ಕಂಡರು ತಿರುಮಲೇಶ. ತೀವ್ರ ಕಂಪನದ ಆಲಾಪದ ತುದಿಯಲ್ಲಿ ಕಿಶೋರಿ ತಾಯಿಯನ್ನು ಹಿಡಿದು ನಿಲ್ಲಿಸುತ್ತದೆ ಸಂಜೆ ಆಕಾಶದಲ್ಲಿ ಕೆಂಪಗೆ ಕವಿದ ಧೂಳು. ಶಾಲೆ ತಲುಪದ ಮಕ್ಕಳು, ಮದುವೆ ತಪ್ಪಿದ ಪೋರಿಯರು, ನೌಕರಿ ಕಳೆದುಕೊಂಡ ಗಂಡಸರು ರಾತ್ರಿಯ ಎದುರು ಹೆದರುವಾಗ ಶಹರದ ಅಂತರಂಗಕ್ಕೆ ಮುಸುಕು ನೆಪಗಳ ಮುಸುಕು ಹಾಕುತ್ತದೆ ಧೂಳು. ಬಾಚಣಿಗೆಯ ಹಲ್ಲುಗಳಿಗೆ ಅಂಟಿಕೊಂಡಿದ್ದಲ್ಲ ಕಾಲರಿಗೆ ಗೆರೆಯಾಗಿ ಅಂಟಿಕೊಂಡಿದ್ದಲ್ಲ, ಗ್ಯಾರೇಜಿನ ಕೆಲಸ ಮುಗಿಸಿ ತಿಕ್ಕಿ ತಿಕ್ಕಿ

ಕೈ ತೊಳೆದು ಅನ್ನ ಕಲಸುವಾಗ ಅನ್ನಕ್ಕೆ ಕಪ್ಪಗೆ ಅಂಟಿಕೊಂಡಿದ್ದಲ್ಲ, ಬೆಳೆದ ಮಗುವಿನ ಆಡದೇ ಹೋದ ಆಟಿಗೆಗಳಿಗೆ ಅಂಟಿಕೊಂಡಿದ್ದಲ್ಲ. ಇದು ಹಾರುವ ಹಾರುತ್ತಲೇ ಇರುವ ವಾಹನಗಳ ಬೆನ್ನಟ್ಟುತ್ತಲೇ ಇರುವ ಮೈಲಿಗಲ್ಲುಗಳ ನೊಸಲಿಗೆ ತಟ್ಟುತ್ತಲೇ ಇರುವ ಹೊರಳೆಗಳ ರೆಪ್ಪೆಗಳ ಸರೀ ಎದುರು ತೇಲುವ ಧೂಳು.

ಕಲಾವಿದನಿಗೆ ಗಡ್ಡ ಮೂಡುವ ಮೊದಲೇ ಮೂಡಿದ ಬಣ್ಣ ಧೂಳು. ಎಲ್ಲ ವರ್ಣಗಳ ಮೂಲ. ಕಲಾಕೃತಿಯ ಮೇಲೆ ಕೂತ ಧೂಳು ವಿಗ್ರಹಕ್ಕೆ ಬಂದ ರೋಮದಷ್ಟೇ ನಿಜ. ಮಣ್ಣಿನ ಬಣ್ಣ ಎಂದರೆ ಚಂದದ ಮಾತಾಯಿತು. ಧೂಳಿನ ಬಣ್ಣ ಎಂದರೆ ಅಂತರಂಗ ಯಾಕೆ ಕಲಕುತ್ತದೆ- ಹಸಿವೆಯ ಎದುರು ಹಾಸಿಕೊಂಡ ನಿದ್ರಾಹೀನ ರಾತ್ರಿಗಳಂತೆ. ಧಣಿಯೊಬ್ಬ ರಸ್ತೆ ಬದಿ ಹಂಚಲಿರುವ ಪಕ್ವಾನ್ನ ಪ್ರಸಾದಕ್ಕೆ ಅಳುಕುತ್ತಲೇ ಸಾಲಿನಲ್ಲಿ ಕೂತ ಅನಾಮಿಕ ವೃದ್ಧರಂತೆ. ಎಲ್ಲಿಂದ ಬಂದರು ಈ ವೃದ್ಧರು ತಮ್ಮ ಹಿಂದೆ ಎಂತೆಂಥ ಹಾದಿಗಳ ಬಿಟ್ಟು. ಇವರ ಕನ್ನಡಕಕ್ಕೆ ಗಂಟು ಹಾಕಿದ ನೂಲಿನ ಹತ್ತಿ ನಕಾಶೆಯ ಯಾವ ಭಾಗದಲ್ಲಿ ಬೆಳೆಯಿತು. ಎಂಥ ಮಕ್ಕಳಿಂದ ತ್ಯಜಿತರಾಗಿ ಬಂದರು. ಮೊದಲ ಸಲ ಬಿಕ್ಕೆಗೆ ಪಕ್ಕಾದ ಈ ಕ್ಷಣ- ಅದೆಷ್ಟು ಶಿಶುಗಳು ಧರೆಗಿಳಿದವು- ಸಿಸೇರಿಯನ್, ನಾರ್ಮಲ್, ಐದು ಹೊಲಿಗೆ, ಎಂಟು ಹೊಲಿಗೆ, ದಾದಿಗೆ ಭಕ್ಷೀಸು, ಫೇಡೆ ಬರ್ಥ್ ನೋವು ಆತ್ಮಹತ್ಯೆ, ಗುರ್ತೇ ಹತ್ತದ ಶಿಶುಗಳ ಹುಟ್ಟಿನ ಗಿರಣಿ. ಹಾರುವ ಧೂಳು ನೋಡುತ್ತಲೇದೆ ಊಡ್ಡವಾಗುವವೇ ಮಕ್ಕಳು. ಬೂಟುಗಳ ನಡುವೆ ಒಣ ಹಾಕಿದ ವಸ್ತ್ರಗಳ ನಡುವೆ ನಡುಬೀಧಿಯಲ್ಲಿ ಮೈ ನೆರೆದು ಅತ್ತ ಪೋರಿಯರ ನಡುವೆ ನೇಣುಬಿದ್ದ ಅಕ್ಕಂದಿರ ನೆರಳುಗಳ ನಡುವೆ. ವೃದ್ಧರು ಕಾಯುತ್ತಾರೆ ಸರದಿಗೆ ಕೈಯಲ್ಲಿ ಕಾಗದ ಹಿಡಿದು. ಕಾಗದದ ತಂಬ ಅಕ್ಷರುಗಳು - ಮುದ್ರಿತ ಗೀಚಿನ-ಪರೀಕ್ಷೆಗೆ ಬರೆದ ನಕಾಶೆ ಫಲವತ್ತಾದ ಎರೆಮಣ್ಣಿನ ಭೂಮಿ. ತಿಂದೊಗೆದ ನಂತರ ಮತ್ತೆ ತಿಪ್ಪೆಯ ಬಳಿ ಇದೇ ಕಾಗದಕ್ಕೆ ಮುಗಿಬೀಳುವ ಸಾಲು - ಬೆನ್ನಿಗೆ ಗೋಣಿ ಚೀಲ ಹಾಕಿದ ಕಣ್ಣುಗಳು - ನೆಕ್ಕುತ್ತ ನೆಕ್ಕುತ್ತ ಬೀದಿಯನ್ನು ಸ್ವಚ್ಛಗೊಳಿಸುತ್ತವೆ. ನುಂಗಿದ ಧೂಳು ರಕ್ತವಾಗಲು ಶತಮಾನಗಳು ಬೇಕಿಲ್ಲ. ಒಂದು ರಾತ್ರಿ ಸಾಕು ನಿದ್ದೆ ಬಿದ್ದ.

ಶಹರದ ಎಂಥದೋ ಪಾರ್ಕಿನಲ್ಲಿ ವಿಗ್ರಹದಂಥ ವ್ಯಕ್ತಿಗಳು- ಒಡೆದ ಬಲ್ಬಿನಂಥ ಕಣ್ಣುಗಳು- ಧೂಳಿನಡಿ ಅಕಾಲ ನಿದ್ರೆ ಹೋಗುತ್ತವೆ. ಇಡೀ ದಿನ ನಿದ್ದೆ ಹೋದ ಕಂಗೆಟ್ಟ ಪಥಿಕ ಅಥವ ಕಂಠಪೂರ್ತಿ ನೋವು ಕುಡಿದ ಖಿನ್ನ ಪ್ರೇಮಿ. ಇವರು ಬಲ್ಲರು ಒರಟು ಮಧ್ಯಾಹ್ನದ ಉರಿವ ತೊಗಲು, ಹರಿದ ಕಿಸೆಗಳಲ್ಲಿ ಸೋರುವ

ಆಯುಸ್ಸು. ಫುಟಪಾಥುಗಳುದ್ದಕ್ಕೂ ಮಲಗಿರುವ ಮಾನವರು ಪ್ಲಾಟಫಾರ್ಮುಗಳ ಗುಂಟ ಮಲಗಿರುವ ಮಾನವರು ಸಿಂತ ಟ್ರಕ್ಕುಗಳಡಿಗೆ ಯಾರ್ಡಿನ ಡಬ್ಬಿಗಳಲ್ಲಿ ನೀರು ಟಾಕಿಯ ಅಡಿಗೆ ಮಲಗಿರುವ ಮಾನವರು ಏಣಿಗಳ ಅಡಿಗೆ ಕುಂತಲ್ಲೇ ನಿಂತಲ್ಲೇ ಮಲಗಿರುವ ಮಾನವರು ಸಂದಣಿಯು ನೇತಾಡುತ್ತಾ ಮಲಗಿರುವ ಮಾನವರು ಎರಡು ಕಾಲಿನ ಮೇಲೆ ಮಲಗಿರುವ ಮಾನವರು. ಎಲ್ಲರಿಗೂ ನಿರಂತರ ಧೂಳಿನ ಹೊದಿಕೆ ಮುಸುಕು ಮಚ್ಚರದಾನಿ. ಒಳಗಿಂದ ಕಾಣುವ ಗಗನಕ್ಕೆ ಸಹಸ್ರ ಛಿದ್ರ. ಒಂದೊಂದು ಛಿದ್ರಕ್ಕೂ ಒಂದೊಂದು ಬಾಲ್ಯ. ಒಂದೊಂದು ಬಾಲ್ಯಕ್ಕೂ ಒಂದೊಂದು ತಾಯಿ. ಒಂದೊಂದು ತಾಯಿಗೂ ಬತ್ತಿದ ಮೊಲೆ.

ಎಲ್ಲಿ ಆಡಿ ಬಂದರು ಈ ಎಲ್ಲ ಕೈದಿಗಳು. ಒಳಗಿರುವ ಕೈದಿಗಳು. ಹೊರಗಿರುವ ಕೈದಿಗಳು. ಅವರ ಬಾಲ್ಯದ ಉಡುಪು, ಎತ್ತಿ ಆಡಿಸಿದವರು. ಅತ್ತೆ ದೊಡ್ಡತ್ತೆ ವೈನಿ ಕಾಕಾ ಎಲ್ಲಿ ಕರಗಿ ಹೋದರು. ಕಂಬಗಳ ನಡುವಿನ ಅವಕಾಶದಲ್ಲಿ ನಿಶ್ಚಲ ಧೂಳು. ಕಂಬಿಯ ಮೇಲೆ ಹೆಸರು ಬರೆಯಲಾಗುವದಿಲ್ಲ. ಅಂತೆಯೇ ಗೋಡೆಗಳು. ಜೊಡ್ಡ ಕಲ್ಲು ಸಿಮೆಂಟು ಗಾರೆ ಸರಳು ಮುಳ್ಳು ಗಾಜು. ಧೂಳಿನ ಪದರದಲ್ಲಿ ಬೆರಳೋಡಿಸಿ ಕೈದಿ ಬರೆವ ಮುಗಿಯುವ ಲೆಕ್ಕ–ಹುಂಬ ರೋಷ-ಪ್ರಿಯತಮೆಯ ಹೆಸರು ಅಥವಾ ಬರೇ ಗುಪ್ತಾಂಗ ಗುಪ್ತಾಂಗ, ಮೊಟ್ಟ ಮೊದಲ ಬಾರಿಗೆ ಅವನದು ಕಳುವು ಎಲ್ಲಿ ಆಯಿತು. ಆಗ ಕೈ ತಡವರಿಸಿತೆ. ಮೊದಲ ನಾಗಾಲೋಟಕ್ಕೆ ಗುಂಡಿಗೆ ಹೇಗೆ ಹಾರಿತು. ಮೊಟ್ಟ ಮೊದಲ ಬೈಗಳನ್ನು ಪೋರ ಎಲ್ಲಿ ಹೇಗೆ ಉಗುಳಿದ. ಮೊದಲ ತಪರಾಕಿ ಅವ ಎಲ್ಲಿ ತಿಂದ. ಅವನ ತಾಯಿಯ ಬಸಿರು ಸುಡುವಂಥ ಬೈಗುಳಗಳ ಹೇಗೆ ಹಿಡಿದುಕೊಂಡ ಹೇಗೆ ತಿರುಗಿ ಎಸೆದ ಉಳಿದ ಮಕ್ಕಳಿಗೆ. ಸುಳ್ಳಿನ ಚೂರಿಗಳ ಗಂಟಲಲ್ಲಿ ಎಂದು ಇಳಿಸಿದ. ಕೊಲೆಗಾರನಿಗೆ ಮೊದಲ ಕೊಲೆ ಹೇಗೆ ಕಾಡಿತು. ಅಥವಾ ಕಾಡಲಿಲ್ಲವೆ ? ಬಸಿದ ರಕ್ತದ ಅಂಟು ಹೇಗೆ ಮಾಸಿತು. ಯಾವ ಧೂಳು ಮರೆಸಿತು ಹೊರಗೆ ಬಂದ ರಕ್ತ ? ಕಂಬಿಗಳ ಹಿಂದೆ ಎಷ್ಟೊಂದು ಮನುಷ್ಯ ಮೂಟೆ. ಚಿಣ್ಣರು, ಸ್ವಲ್ಪ ತಪ್ಪಿದ್ದರೆ ಏನಾಗುತ್ತಿತ್ತು– ಕ್ಲಾಸ್ ವನ್ ಕ್ಲಾಸ್ ಟೂ – ನಾಟಕ ಕಂಪನಿ ಮ್ಯಾನೇಜರು - ಕವಿ - ಅಕಾಡಮಿ ಮೆಂಬರು– ತಾಪ್ಕಂಟಿನ ಚಿತ್ರೋತ್ಸವ- ಆಸ್ಪಾಮಿನ ಚಹತೋಟಿಗ ಜಯಪ್ರದಳ ಪ್ರಿಯಕರ- ರೇಖಾಳ ಬಾಡೀಗಾರ್ಡ್ - ಕೇಹಾರನ ಸಾಕ್ಷಿದಾರ - ಮಲಬಾರಿನ ಗಂಡು ಸೂಳೆ– ಗೋಕರ್ಣದ ಬಸ್‌ಸ್ಟಾಂಡಿನ ದುಬ್ಬ- ಏನಾಗಬಹುದಿತ್ತು. ಆದರೂ ಏನಾದಂತಾಗುತಿತ್ತು. ಏಳುತ್ತಲೇ ಇರುತ್ತದೆ ಧೂಳು ನೆಲದಿಂದ ಮುಗಿಲ ಕಡೆಗೆ ಭಯದ ಸಂದಿಗ್ಧದ ನೋವಿನ ತೆರೆಗಳನ್ನು ತೂಗಿ.

ರಿನಾಂಡ್ ಹೋಮಿನ ಪ್ರಾರ್ಥನೆಗಳನ್ನು ಮೋಡಗಳು ಅಂಗೈಯಲ್ಲಿ ಎತ್ತಿಕೊಳ್ಳುತ್ತವೆ - ಗಿಡದಿಂದ ಹೂವನ್ನು ಎತ್ತಿದಂತೆ. ನಂತರ ಅವು ಬಹುಶಃ ನಿರ್ಜನ ಗುಡ್ಡಗಾಡು ಪ್ರದೇಶಗಳಲ್ಲಿ ಧಾರಾಕಾರ ಮಳೆಯಾಗಿ ಹುಯ್ಯುತ್ತವೆ. ಈ ಮಳೆ ರಿನಾಂಡ ಹೋಮುಗಳನ್ನು ಎಂದೂ ತಲುಪುವದಿಲ್ಲ. ಏಕೆಂದರೆ ಇದರ ಸುತ್ತ ದಟ್ಟ ಧೂಳಿನ ಪ್ರಭಾವಳಿ ಇದೆ. ಗೇಟಿನಾಚೆಯ ಅಂಕಲ್‌ಗಳು ಕರೆಯುತ್ತಾರೆ ಹಲ್ಲು ಮಸೆದು. ಮಕ್ಕಳು ಜೇಲಿ ಜಿಗಿದು ತೆವಳುತ್ತವೆ. ಬಗೆ ಬಗೆ ಕೈಗಳಿಗೆ ಸಿಕ್ಕುತ್ತವೆ ಮಕ್ಕಳು. ನುಣ್ಣಗೆ ಸವೆದು ಸವೆದು ಗೋಲಿಗಳಾಗುತ್ತವೆ- ಮಕ್ಕಳು. ಈ ಗೋಲಿಗಳು ಉರುಳುತ್ತವೆ ತಗ್ಗಿಗೆ-ಗುಂಡಿಗೆ-ಪಾತಾಳದ ಸುರಂಗ ಚರಂಡಿಗೆ ಗಡ್ಡ ಮೀಸೆ ಬರುವ ಮೊದಲೇ ಚೌರಗೊಂಡ ಗೋಲಿಗಳು ಟ್ರಕ್ಕಿಗೆ ಕ್ಲೀನರುಗಳಾಗುತ್ತಿವೆ- ಹಸಿದ ಹೋಟೆಲುಗಳ ಮಾಣಿಗಳಾಗುತ್ತವೆ. ಈ ಗೋಲಿಗಳೊಳಗೆ ಘನಗೊಂಡ ಧೂಳು ಯಾವ ಕವಿತೆಯ ಕಣ್ಣಿಗೆ ಕಂಡೀತು - ಯಾವ ಕಲೆಯ ಕನಸೀಗೆ ಬಂದೀತು. ಗೋಲಿಗಳು ದಪ್ಪವಾಗುತ್ತ ಹೋಗುತ್ತವೆ ತಿಪ್ಪೆಯ ಮಾಲೀಕನಾಗಿ- ನೇಪಾಳಿ ಸೌಥ ಇಂಡಿಯನ್ ಟೀನೇಜ್ ಮೆನೂ ಕಾರ್ಡಿನ ಸೇವಕನಾಗಿ - ಡಾಕ್‌ಯಾರ್ಡಿನ ವಿದೇಶಿ ಹಡಗುಗಳ ರೋಮಭರಿತ ಮಂಚಕ್ಕೆ ಊರುಗೋಲಾಗಿ - ತಪ್ಪಿ ಜೀಪಿನ ಹಿಂದೆ ಮುಂದೆ ಬದಿಗೆ ಮೈಕಾಗಿ- ಮತಗಟ್ಟೆಯ ಸೈಕಲ್ಲಾಗಿ- ಮುನ್‌ಸಿಪಲ್ ಆಸ್ಪತ್ರೆಯ ನಿರ್ಗತಿಕ ಶವಗಳ ಮೇಲಿನ ನಂಬರುಗಳಾಗಿ ಹೊಲಿಗೆಗಳಾಗಿ. ಎಂಥ ಕಣ್ಣಿದು ಯಾವ ಧೂಳಿಗೂ ರೆಪ್ಪೆ ಬಡಿಯುವದಿಲ್ಲ. ಎಂಥ ಅನಿಮೇಷ ದೇವತೆಗಳ ಸಾಲು ಇದು ಬೆಳ್ಳಗೆ. ಯಾವ ಹಕ್ಕಿ ಹಾರಿದೆ ಆಸ್ಪತ್ರೆಯಿಂದ ಆಸ್ಪತ್ರೆಗೆ.

ಬಲ್ಲವರು ಅಹರ್ನಿಶಿ ದುಡಿಯುತ್ತಲೇ ಇರುವರು ಪೃಥ್ವಿಯ ಮೇಲೆ ಅಕ್ಷರ ಬಣ್ಣಗಳ ವಿವಿಧ ಗೋರಿಗಳ ಸೌಧ ಕಟ್ಟುತ್ತ ಭಾವದ ಶವ ಪೆಟ್ಟಿಗೆಗಳ ಕುಸುರಿ ಕೆತ್ತುತ್ತ. ಎದ್ದ ಶಿಶ್ನದ ಮೇಲೆ ಶಹರದ ಗೋವರ್ಧನ ನಿಲ್ಲಿಸಿ ಸರ್ಕಸ್ ನಡೆಸುತ್ತಾನೆ ಒಬ್ಬ- ಮತ್ತೊಬ್ಬ ಜಗತ್ತಿನ ಪಾಡಿನಲ್ಲಿ ತನ್ನ ಕಂಪನ ಕಂಡು ಮಿಡಿಯುತ್ತಾನೆ - ಶಬ್ದದ ತಲೆಗಟ್ಟನ್ನು ತಿಕದಲ್ಲಿ ಹೋಗಿಸಿಕೊಂಡು ಹಮ್ಮ್ಯೋ ಎಂದು ಹುಯಿಲಿಡುವನು ಮತ್ತೊಬ್ಬ. ಭಾಷೆಯ ಮೇಲೆ ಜೂಪಾದ ಉಜ್ಜುಗೊರಟು ಉಜ್ಜುಜ್ಜಿ ತೆಗೆದ ಚೆಕ್ಕೆಗಳು ಭಂಡಾರ ತುಂಬ. ಪಠ್ಯವಾಗಿವೆ ಕೆಲವು ನೀಟಾಗಿ. ಗೋದಾಮುಗಳೋ ಗೋದಾಮುಗಳು ಗಾಳಿ ಸುಳಿಯದ. ಪುಸ್ತಕದ ಧೂಳಿನ ಆಢ್ಯತೆಯೇ ಬೇರೆ. ಒರೆಸಿದರೆ ರಕ್ತವೇ ಚಿಮ್ಮುತ್ತದೋ ಎಂಬ ಹಾಗೆ. ಪುಟದ ಮೇಲೆ ತುಸುವೇ ಹೊತ್ತು ಕಳೆದರೂ ಸಾಕು. ಧೂಳು ಮೇಯುತ್ತದೆ ಶಬ್ದದ ಹುಲ್ಲುಗಾವಲು - ಆಗುತ್ತ ಫಾಸಿಲ್ಲು ಮುಚ್ಚಿದ ಪುಸ್ತಕ

ನೊಳಗೆ. ಕವಿತೆಯ ಹೆಣ ಧೂಳು ಹೊತ್ತುಕೊಂಡು ಹೋದದ್ದು ಕಂಡರೂ ಕಾಣದಂತೆ ತರಕಾರಿ ಕೊಳ್ಳುವೆವು ಬಗ್ಗಿ ಪೇಟೆಯಲ್ಲಿ.

ಎಂಥ ಮಳೆಗೂ ಕೊಡೆ ಇದೆ-ಧೂಳಿಗಲ್ಲ, ಕೊಡೆ ಹಿಡಿದು ಹುಡುಕುವೆವು ದರ್ಜಿಯ ಅಂಗಡಿ. ದರ್ಜಿಯ ಮಗ ಬರೇ ಕಾಚು ಹೊಲಿಯುವದಿಲ್ಲ. ತನ್ನ ಎಂಟು ವರುಷದ ಕಣ್ಣು ಹೊಲಿಯುತ್ತಾನೆ ಹತ್ತಾರು ಗಾಳಿಪಟಗಳ ತುಂಬಿಕೊಂಡು, ಏನಾಗಿವೆ ಈ ಗಾಳೀಪಟಗಳಿಗೆ. ಹಾರ ಹರಿದರೂ ಹಾರುವದಿಲ್ಲ ಇವು ತೊಪ್ಪನೆ ಹಕ್ಕಿಯಂತೆ ಬೀಳುತ್ತವೆ ತಂತಿಗೆ ಸಿಕ್ಕು ಬಣ್ಣಗೆಟ್ಟು. ಧೂಳು ಕತ್ತರಿಸುವ ತಂತಿಗಳು. ಸತ್ತ ಪಕ್ಷಿಗಳಿಂದ ಕಣ್ಣಿಂದ ಸುರಿದು ಪೃಥ್ವಿಗೊಂದು ಹಕ್ಕಿಯ ಮಾಲೆ ಮಾಡಿವೆ. ಸತ್ತ ಮೇಲೆ ಎಲ್ಲ ಹಕ್ಕಿಗಳೂ ಒಂದೇ. ಧೈರ್ಯವಿದ್ದ ಭಂಡರು ಬಚ್ಚಿಡುತ್ತಾರೆ ಹಕ್ಕಿಗಳ ಹೆಣವನ್ನೂ ಕವಿತೆಯಲ್ಲಿ ವರುಷಗಟ್ಟಲೆ ಕಪಾಟಿನಲ್ಲಿ-ಮನೆ ಗಿರವಿ ಆಗುವ ತನಕ, ರಸ್ತೆಗೆ ಮಹಿಳೆ ನೂಕಲ್ಪಡುವ ತನಕ, ತಾಯಿಗೆ ಭೋಸುಡೀ ಎಂದು ಮಗ ಉಗಿಯುವ ತನಕ. ಕೊನೆಗೂ ಅವ ಉಗಿವುದು ನೆಲಕ್ಕೆ. ಒದೆಯುವದು ನೆಲಕ್ಕೆ- ಎಬ್ಬಿಸಿ ಚಿಟಕೆ ಧೂಳು ನಿರ್ವಾತದೊಳಗೆ.

ಹಸಿದ ಕುದುರೆಗಳು ಬಡಕಲು ಟಾಂಗಾಗಳನ್ನು ಎಳೆಯುತ್ತವೆ ಭೋರ್ಗರೆವ ವಾಹನಗಳ ಎದುರು. ಖುರಪುಟದ ಕಂಪನ ಕರುಳಲ್ಲಿ ಮಾತ್ರ. ಗಾಳೀಪಟಗಳ ಮೇಲೆ ಹುಲ್ಲು ಬೆಳೆಯುವದೆ. ಬೆರಳಿಲ್ಲದ ಮೊಂಡು ಕೈ ತುತ್ತು ಹೆಕ್ಕುವದೆ. ದಿನಪತ್ರಿಕೆಗಳಲ್ಲಿ ಪೊಟ್ಟಣ ಕಟ್ಟಿ ಎಸೆದಿದ್ದಾರೆ ಕಿಟಕಿಯಿಂದ ಶುದ್ಧಿಯ ಅನೌಧ್ಯ. ಶಹರವಿಡೀ ಬೀಸುತ್ತದೆ ಇದರ ಒಣ ಅಗರು ಇಡೀ ರಾತ್ರಿ ನಿರಂತರ. ಹಿಮಪಾತದಲ್ಲೂ ಭೂಕಂಪದಲ್ಲೂ ಗಾಳಿ ಬೀಸುವದು ಬಿಟ್ಟಿಲ್ಲ. ಇದೇ ಗಾಳಿಗೆ ಬೀಜ ತೂರುವವು ಹೆದ್ದಾರಿಯ ಬದಿಯ ಮರ. ಘಟ್ಟದ ತಿರುವುಗಳಲ್ಲಿ ಝಗ್ಗನೆ ಬೆಳಗಿ ಮತ್ತೆ ಕಾಡಲ್ಲಿ ಕರಗುವರು ಕಂಬಳಿಯ ಜನ. ಬ್ಯಾಂಡೇಜು ತೆಗೆದು ಗಾಯ ತೊಳೆದು ನೋವು ನೇವರಿಸುವ, ಗದ್ಗದ ಕ್ಷಣಗಳಿಗೆ ಎದೆ ತೆರೆದು ಕೊಡುವ ಚೇತನ ಸಿಕ್ಕರೆ ಸಾಕು ಸಮೂಹ ಶಬ್ದ ಹಿಡಿದು ನುಗ್ಗುವೆವು ಹೆಡೆಮುರಿಗೆ ಬಿಗಿದು ಮಾರುವೆವು ಕಂಕುಳಲ್ಲಿ ರಸೀದಿ ಪುಸ್ತಕ ಹಿಡಿದು. ಲೇವಡಿ ಮಾಡುತ್ತದೆ ಧೂಳು ಆಗ. ಲೇವಡಿ ಮಾಡುತ್ತದೆ ಧೂಳು ರಕ್ತ ಸಂಬಂಧಗಳನ್ನು ಆಲ್ಬಮ್ಮು ಪತ್ರಗಳನ್ನು ಲೇವಡಿ ಮಾಡುತ್ತದೆ ಧೂಳು ಆಯುಷ್ಯ ಆಡಿದ್ದನ್ನು.

ಧೂಳೀಗ ಚೇತನದ ಭಾಗ. ಅಂತರಾಳದಲ್ಲಿ ಸಿಂತ ಧೂಳಿನ ಮಾರ್ದವದಲ್ಲಿ -ಮೂಲೆ ಮನೆ ಮಾಣಿ ಮನೋರೋಗಿಗಳ ವಾರ್ಡಿನಲ್ಲಿ ಕೈಕಾಲು ಬಿಗಿಸಿಕೊಂ

ಡು ಶಾಕು ಪಡೆಯುವನು. ಹಿರಿಯಡ್ಕದ ಸರಸ್ವತಿ ಮುಂಬಯಿ ಧಾರಾವಿಯಲ್ಲಿ ಟಾಯರು ಡ್ರಮ್ಮುಗಳ ನಡುವೆ ಲಂಚ್ ಹೋಮಿನ ಶೆಟ್ಟಿಯಿಂದ ಮೂರು ರೂಪಾಯಿಗೆ ಒದೆಸಿಕೊಳ್ಳುವಳು. ಮನೆ ಬಿಟ್ಟು ಓಡಿದ ಓಡುತ್ತಲೇ ಇರುವ ಬಾಬು, ತಂಬಿ, ಶಂಕರ, ಪದ್ದು, ಅಜೀಜ ಪೋಸ್ಟರುಗಳ ಹಿಂದೆ ಮಲಗುವರು ಸುಳಿಸುಳಿಯಾಗಿ ಬೀಡಿಯಂತೆ ಶಿವಕಾಶಿಯಲ್ಲಿ ಪಟಾಕಿ ಹೊಸೆಯುವರು ತಮ್ಮದೇ ತೂಕದ ಮಣ್ಣು ಹೊರುವರು ಪೈಪಿನೊಳಗೆ ಓಡುವರು. ಬದುಕುವ ಗಾಳಿಪಟಗಳ ಹಿಂದೆ ಒಡೆಯದ ಪಟಾಕಿಗಳ ಹಿಂದೆ ತಿನ್ನದ ತುಣುಕುಗಳ ಹಿಂದೆ ಕೋರೈಸುವ ಬಣ್ಣದ ಬಲ್ಬುಗಳ ಹಿಂದೆ ದಟ್ಟ ರಾತ್ರಿಗಳ ಹಿಂದೆ ಓಡುವರು ಪೋರರು ಪೈಪಿನೊಳಗೆ ಉದ್ದ ಅಮೃತ ಶಿಲೆಯ ಪಾರ್ಕಿನಲ್ಲಿ ಬೆಂಚಿನ ಮೇಲೆ ಕಾದ ಸಾಲು ಪೇಲವ ಬಸುರಿಯರು – ನಿಟ್ಟಿಸುವರು ಎದುರು ರಸ್ತೆಯ ಭಣ ಭಣ ಹಗಲು ಧೂಳಾಗುತ್ತಿರುವದನ್ನು. ಸಮುದ್ರದಂಚಿಗೆ ಕೂತಲ್ಲೇ ನಿದ್ದೆ ಹೋದಂತೆ ನಿಧನ ಹೊಂದಿದ ವೃದ್ಧನ ಕಣ್ಣಲ್ಲಿ ಒಂದು ಕ್ಷಣ ಹೊಯ್ದಾಡಿ ಸ್ಥಗಿತಗೊಳ್ಳುವದು ಕಡಲು. ಕವಿಯುತ್ತದೆ ಧೂಳು ಪ್ರೀತಿಸಲು ಎದೆ ತೆರೆದ ಶಿಶುಗಳ ಒಳಗು ಹೊರಗೂ.

ನನ್ನ ನೆನಪುಗಳು

● ಡಾ|| ಬೆಟಗೇರಿ ಕೃಷ್ಣಶರ್ಮ [ಆನಂದಕಂದ]

೧೭. ಗುಡಸ ಎಂಬ ಹಳ್ಳಿಯ ವಾಸ

ಪರೀಕ್ಷೆ ಮುಗಿದು ನಮ್ಮ ಹಳ್ಳಿಗೆ ಬಂದ ಅಣ್ಣನಿಗೆ ವಿದ್ಯಾಖಾತೆಯಿಂದ ಅಪ್ಪಣೆ ಬಂದಿತು- "ನೀವು ಹುಕ್ಕೇರಿ ತಾಲ್ಲೂಕಿನ ಗುಡಸ ಗ್ರಾಮದ ಶಾಲೆಗೆ ಹೋಗಿ ಶಿಕ್ಷಕರಾಗಿ ಕೆಲಸ ಮಾಡುವುದಕ್ಕೆ ಹಾಜರಾಗಬೇಕು" ಎಂದು. ಅದರಂತೆ ನಮ್ಮ ಹಣಮಣ್ಣ ಗುಡಸ ಗ್ರಾಮಕ್ಕೆ ಹೋದ. ನಮ್ಮ ಹಳ್ಳಿಯಿಂದ ೨೪ ಮೈಲಿಗಳಷ್ಟು ಅಂತರದ ಮೇಲೆ ಗುಡಸ ಗ್ರಾಮವಿದೆ. ದೂರದ ಊರು. ಅಲ್ಲಿ ನಮ್ಮ ಪರಿಚಯದವರಾರೂ ಇರಲಿಲ್ಲ. ಆದರೂ ಅಲ್ಲಿಗೆ ಧೈರ್ಯ ತಂದುಕೊಂಡು ನಮ್ಮ ಅಣ್ಣ ಕೆಲಸಕ್ಕೆ ಹೋದ. ಅವನ ಕಾಗದದಿಂದ ತಿಳಿದುಬರುವ ಸಂಗತಿಯೆಂದರೆ- ಗುಡಸ ಗ್ರಾಮವು ತೀರ ಚಿಕ್ಕ ಹಳ್ಳಿಯಾಗಿದೆಯೆಂದೂ, ಆದರೂ ಪುಣೆ-ಬೆಂಗಳೂರು ದಾರಿಯಲ್ಲಿಯೇ ಈ ಹಳ್ಳಿಯಿರುವುದರಿಂದ ಅಧಿಕಾರಿಗಳ ಪೀಡೆ ಬಹಳವಾಗುವವೆಂದೂ, ಶಾಲೆಯ ಸ್ಥಿತಿಯೇನೂ ಸದ್ಯ ಚೆನ್ನಾಗಿಲ್ಲವೆಂದೂ, ತನಗೆ ಅಲ್ಲಿಯ ಬಂಡೋಪಂತ ಜಮನೀಸ್ ಎಂಬ ಬ್ರಾಹ್ಮಣರ ಮನೆಯಲ್ಲಿ ಎರಡೂ ಹೊತ್ತಿನ ಊಟವ ವ್ಯವಸ್ಥೆಯಾಗಿದೆಯೆಂದೂ, ಅವರು ಮಾಡಿಕೊಂಡ ಸರಕಾರೀ ಸುಂಕದಕಟ್ಟೆಯಲ್ಲಿಯೇ ಮಲಗುವ ಏರ್ಪಾಟೂ ಮಾಡಿರುವನೆಂದು.

ನಮ್ಮ ಹಣಮಣ್ಣ ಗುಡಸ ಶಾಲೆಗೆ ಹೋಗಿ ಎರಡು ತಿಂಗಳಾಗಿರಬಹುದು. ಇನ್ನೂ ನಮಗೆ ಯಾರಿಗೂ ಅಲ್ಲಿಗೆ ಬರಲು ಅವನು ತಿಳಿಸಿರಲಿಲ್ಲ. ಸುಮಾರು ಎರಡು ತಿಂಗಳು ಕಳೆದಿರಬಹುದು. ಎರಡು ದಿನಗಳ ಬಿಡುವು ಇದ್ದುದರಿಂದ ನಮ್ಮನ್ನು ಕಾಣಬೇಕೆಂದು ಅಪೇಕ್ಷೆಯಾಗಿ ಅವನು ಒಂದು ದಿನ ಗುಡಸ ಗ್ರಾಮದಿಂದ ಹೊರಟನು. ಆ ಗ್ರಾಮದಿಂದ ಬೆಟಗೇರಿ ೨೪ ಮೈಲುಗಳ ಅಂತರದಲ್ಲಿದ್ದುದನ್ನು ಈ ಮೊದಲೇ ಹೇಳಿದ್ದೇನೆ. ಬೇಸಗೆಯ ಕಾಲವದು. ಹೊತ್ತೇರಿದಂತೆ ಗೋಕಾವಿ ನಾ

ಡಿನ ಉರಿಬಿಸಿಲು ಒಂದೇ ಸವನೆ ಸುಡುತ್ತಲಿದ್ದಿತು. ಸುಮಾರು ೨೦ ಮೈಲುಗಳಷ್ಟು ದಾರಿಯನ್ನು ಅವನು ಹೇಗೋ ಕ್ರಮಿಸಿ ಬಂದ. ಪ್ರಕೃತಿಯಲ್ಲಿಯೂ ಅಶಕ್ತತೆ ತುಂಬಿಕೊಂಡಿದ್ದಿತು. ಹೊಟ್ಟೆಯಲ್ಲಿ ಏನೂ ಇರಲಿಲ್ಲ. ಬೆಳಗಿನಲ್ಲಿ ಯಾವ ತಿಂಡಿಯನ್ನೂ ತಿನ್ನದೆ, ಸ್ವಗ್ರಾಮಕ್ಕೆ ಬರುವ ಉತ್ಸಾಹದಿಂದ ಹೊರಟಿದ್ದ. ಆದರೆ ಆ ಬಿಸಿಲಬೇಗೆಯನ್ನು ತಡೆದುಕೊಳ್ಳಲು ಅವನಿಗೆ ಅಸಹನೀಯವಾಯಿತು. ಹೊಟ್ಟೆಯ ಹಸಿವಿನಿಂದಲೂ, ಬಾಯಾರಿಕೆಯಿಂದಲೂ ಅವನು ತೀರ ನಿತ್ರಾಣನಾದ. ನಮ್ಮ ಊರು ಮೂರು ಮೈಲುಗಳಷ್ಟು ಇರುವಾಗ ಅವನಿಗೆ ಮುಂದೆ ಅಡಿಯಿಡಲು ಸಾಧ್ಯವಾಗಲಿಲ್ಲ. ಬಾಯಾರಿ, ಸ್ಪಷ್ಟವಾಗಿ ಮಾತುಗಳು ಹೊರಡದಾದವು. ಅವನು ಒಂದು ಚಿಕ್ಕ ಕಂಟಿಯ ನೆರಳಿನಲ್ಲಿ ಬಿದ್ದುಕೊಂಡನು. ದೊಡ್ಡ ನೆರಳನ್ನು ಕೊಡುವ ಗಿಡಗಳೂ ಬಳಿಯಲ್ಲಿ ಇರಲಿಲ್ಲ. ನೀರಿದ್ದ ಸ್ಥಳವು ಎರಡು ಮೈಲುಗಳಷ್ಟು ದೂರವಿದ್ದಿತು. ಹಾಗೆಯೇ ನೆರಳನ್ನು ಅನುಸರಿಸಿ ಅಲ್ಲಿಯೇ ಬಿದ್ದುಕೊಂಡ. ಆ ಬಿಸಿಲು ಬೇಗೆಯಲ್ಲಿ ದಾರಿಹೋಕರು ಎಲ್ಲಿಯೂ ಕಂಡು ಬರಲಿಲ್ಲ. ಮುಂದೆ ಅವನು ಅಪೂರ್ವವಾಗಿ ಕಂಡುಬಂದ ದಾರಿಹೋಕರಿಗೆ ತನ್ನದೊಂದು ಗುರುತನ್ನು ಕೊಟ್ಟು, ಅಸ್ಪಷ್ಟವಾದ ಮಾತಿನಲ್ಲಿಯೇ ತಾನು ಗುಡಸ ಗ್ರಾಮದಲ್ಲಿ ಮಾಸ್ತರನಾಗಿ ಇರುವನೆಂದೂ, ಹಸಿವೆ-ಬಾಯಾರಿಕೆಗಳಿಂದ ಮುಂದೆ ಹೆಜ್ಜೆ ಇಡದಷ್ಟು ಅಶಕ್ತತೆ ಬಂದಿದೆಯೆಂದೂ, ಇದನ್ನು ನಮ್ಮ ಮನೆಗೆ ತಿಳಿಸಬೇಕೆಂದೂ, ಹೇಳಿ ಕಳುಹಿದನು. ಅದಕ್ಕಾಗಿ ಅವನು ಆ ದಾರಿಹೋಕರಿಗೆ ಒಂದು ರೂ. ಬಹುಮಾನ ಕೊಟ್ಟಿದ್ದನೆಂಬುದು ನಮಗೆ ಆಮೇಲೆ ತಿಳಿಯಿತು.

ಮೂರು ಗಂಟೆಯ ಸುಮಾರು. ನಾವೆಲ್ಲ ಊಟ ಮಾಡಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಲಿದ್ದ ಸಮಯ. ಆಗ ಆ ದಾರಿಹೋಕರು ನಮ್ಮ ಮನೆಯನ್ನು ಹುಡುಕುತ್ತ ಬಂದರು. ಬಂದವರೇ ನಮ್ಮ ಹಣಮಣ್ಣ ಗುರುತಿಗಾಗಿ ಕೊಟ್ಟ ಸರಕಾರಿ ಕಾಗದವೊಂದನ್ನು ನಮಗೆ ತೋರಿಸಿದರು. "ಇವರು ಗುಡಸದಿಂದ ನಡೆದು ಬಂದರಂತೆ. ಹಸಿವೆ–ಬಾಯಾರಿಕೆಗಳಿಂದ ಕಂಗೆಟ್ಟು ಇಲ್ಲಿಂದ ಮೂರು ಮೈಲುಗಳ ಮೇಲೆ ಒಂದು ಕಂಟಿ ನೆರಳಲ್ಲಿ ಮಲಗಿಕೊಂಡಿದ್ದಾರೆ. ಕೂಡಲೆ ಅವರಿಗೆ ನೀರನ್ನೂ, ಆಹಾರವನ್ನೂ ನೀವು ಒದಗಿಸಬೇಕು" ಎಂದು ಹೇಳಿದರು. ಆಗ ನಮ್ಮ ಮನೆಯ ಜನರೆಲ್ಲರೂ ಗಾಬರಿಗೊಂಡೆವು. ನಮ್ಮ ಹಿರಿಯಣ್ಣನಂತೂ ಎದ್ದು, ಒಂದು ಚಕ್ಕಡಿಯನ್ನೇ ಹೂಡಿಸಿಬಿಟ್ಟ. ಜೊತೆಗೆ ಒಂದು ನೀರಿನ ತಪ್ಪೇಲಿಯನ್ನೂ, ಒಂದು ಸೇರಿನಷ್ಟು ಬತ್ತಾಸುಗಳನ್ನೂ, ಲಿಂಬೆಹಣ್ಣು – ಸಕ್ಕರೆಗಳನ್ನೂ, ತೆಗೆದುಕೊಂಡು ನಮ್ಮ ತಾಯಿ ಹೇಳಿದ ಗಾಬರಿಯ ಮಾತುಗಳನ್ನು ಕೇಳುತ್ತಲೇ ಹೊರಟು ನಡೆದ. ಆ ಚಕ್ಕಡಿಯಲ್ಲಿ ನಾನೂ ಕುಳಿತುಕೊಂಡೆ. ನಮ್ಮ ಮನೆಯ

ಎತ್ತುಗಳು, ನಮ್ಮ ಮನೆಯ ಚಕ್ಕಡಿ. ಬಿರುಗಾಳಿಯ ಓಟದಲ್ಲಿಯೇ ನಾವು ಅಲ್ಲಿಗೆ ಹೋದೆವು. ಬೆನ್ನು ಹತ್ತಿ ಓಡಿ ಬರುತ್ತಲಿದ್ದ ನಮ್ಮ ಬಲರಾಮಣ್ಣನ ಪರಿವೆಯೂ ನಮಗಿರಲಿಲ್ಲ.

ಹೋಗಿ ನೋಡಿದೆವು. ಅಶಕ್ತನಾದ ಹಣಮಣ್ಣ ಏಳಲಾರದೆ ಬಿದ್ದುಕೊಂಡಿದ್ದ. ನಮ್ಮನ್ನು ನೋಡಿ ಅವನಿಗೆ ಕಂಬನಿಗಳು ಉಕ್ಕಿ ಬಂದವು. ನೀರು ಸಿಕ್ಕದೆ ಗಂಟಲೆಲ್ಲ ಒಣಗಿದ್ದರೂ ಅವನ ಕಣ್ಣಿನಲ್ಲಿ ಧಾರಾಳವಾಗಿ ನೀರು ಹರಿದವು. ಒಮ್ಮೆಲೆ ಮಾತನಾಡಲಿಕ್ಕೆ ಬರಲಿಲ್ಲ. ನಮ್ಮ ರಾಘಣ್ಣ, ನಮ್ಮ ತಾಯಿಯ ಹೇಳಿಕೆಯಂತೆ ಮೊದಲು ನೀರಲ್ಲಿ ತೋಯಿಸಿದ ನಾಲ್ಕೈದು ಬತ್ತಾಸುಗಳನ್ನು ಹಣಮಣ್ಣನಿಗೆ ತಿನ್ನಿಸಿದ. ಆಮೇಲೆ ಒಂದು ಥಾಲಿ ತುಂಬ ನೀರನ್ನು ಕುಡಿಸಿದ. ತರುವಾಯ, ಜೊತೆಗೆ ಒಯ್ದ ಲಿಂಬೆ ಹಣ್ಣು–ಸಕ್ಕರೆಗಳಿಂದ ಪಾನಕ ಮಾಡಿ, ಒಂದೆರಡು ಬಟ್ಟಲಿನಷ್ಟು ಕುಡಿಸಿದ. ಇದರಿಂದ ನಮ್ಮ ಹಣಮಣ್ಣನಿಗೆ ಸ್ವಲ್ಪ ಚೇತನ ಬಂದಂತಾಯಿತು. ಒಂದೊಂದೇ ಮಾತನ್ನು ಆಡತೊಡಗಿದ. ಅವನ ಆಗಿನ ಸ್ಥಿತಿಯನ್ನು ನೋಡಿ ನನಗೆ ತುಂಬ ಕಳವಳವಾಯಿತು. ರಾಘಣ್ಣನೂ, ನಾನೂ ಕೈ ಹಿಡಿದು ಮೇಲಕ್ಕೆಬ್ಬಿಸಿ ಅವನನ್ನು ಮೆಲ್ಲ ಮೆಲ್ಲಗೆ ನಡೆಸುತ್ತ ಚಕ್ಕಡಿಯ ಮೇಲೆ ಕುಳ್ಳರಿಸಿದೆವು. ಆಮೇಲೆ ಮೆಲ್ಲಗೆ ಎತ್ತುಗಳನ್ನು ನಡೆಸುತ್ತ ಆ ಚಕ್ಕಡಿಯೊಳಗಿಂದ ಕರೆದುಕೊಂಡು ಮನೆಗೆ ಬಂದೆವು. ಹೋಗುವಾಗ ನಾವು ಇಬ್ಬರೇ. ಈಗ ಬರುವಾಗ ನಮ್ಮ ಹಣಮಣ್ಣ ಮತ್ತು ಹಿಂದೆ ಓಡಿ ಬಂದ ಬಲರಾಮಣ್ಣ ಇಬ್ಬರೂ ಚಕ್ಕಡಿಯಲ್ಲಿದ್ದರು.

ನಮ್ಮ ತಾಯಿಯ ಮುಂಜಾಗ್ರತೆ ತುಂಬ ಹೆಚ್ಚಿನದು. ನಾವು ಹೋಗುವುದರಲ್ಲಿಯೇ ಬಿಸಿ ಬಿಸಿ ಅನ್ನವನ್ನೂ, ಬೆಲ್ಲ-ಹುಣಿಸೆಯ ಸಾರನ್ನೂ, ಸಿದ್ಧಗೊಳಿಸಿ ಇರಿಸಿದ್ದಳು. ಬಂದೊಡನೆಯೇ ಅವನಿಗೆ ಊಟಕ್ಕೆ ಬಡಿಸಿದಳು. ನಾಲ್ಕಾರು ತುತ್ತು ಅನ್ನವು ಹೊಟ್ಟೆಯಲ್ಲಿ ಹೋದ ಕೂಡಲೇ ಅವಸಿಗೆ ಮಾತನಾಡುವ ಪ್ರಾಣ ಬಂದಿತು. ಊಟ ಮುಗಿದ ಮೇಲೆ ಎಲ್ಲರೂ ಸೇರಿ ಮಾತನಾಡುತ್ತ ಕುಳಿತೆವು. ಅವನು ತಾನು ಬೆಳಗಿನಲ್ಲಿ ಬರಿ ಹೊಟ್ಟೆಯಿಂದ ಹೊರಟುದನ್ನೂ, ಬಿಸಿಲ ಜೇಗೆಯ ಸಂತಾಪವನ್ನೂ, ಮತ್ತೆ ಮತ್ತೆ ಹೇಳಿದನು. ಅಲ್ಲದೆ ಗುಡಸ ಗ್ರಾಮದ ಸ್ಥಿತಿಯನ್ನೂ, ತಾನು ಊಟ ಮಾಡುತ್ತಿರುವ ಮನೆಯವರ ಒಳ್ಳೆಯತನವನ್ನೂ ಕುರಿತು ಹೇಳಿದನು. ಎರಡು ದಿನ ಬೆಟಗೇರಿಯಲ್ಲಿದ್ದು ಮೂರನೆಯ ದಿನ ಚಕ್ಕಡಿಯಲ್ಲಿ ಹೊರಟು, ಮತ್ತೆ ಗುಡಸದ ದಾರಿ ಹಿಡಿದನು. ಆಗಲೇ ನಮ್ಮ ತಾಯಿ ಯೋಚಿಸಿ ನಿರ್ಣಯಿಸಿದರು- "ಇನ್ನು ಒಬ್ಬನನ್ನೇ ಆ

ಹಳ್ಳಿಯೂರಲ್ಲಿ ಇರಗೊಡುವುದು ಒಳ್ಳೆಯದಲ್ಲ. ನಾವಾರಾದರೂ ಅಲ್ಲಿ ಅವನ ಯೋಗಕ್ಷೇಮದ ವಿಚಾರವನ್ನು ಮಾಡಲಿಕ್ಕೆ ಬೇಗನೆ ಹೋಗಬೇಕು."

ಮುಂದೆ ಯುಗಾದಿಯ ಹಬ್ಬದ ದಿನವನ್ನೂ ಗಣಿಸದೆ ನಮ್ಮ ತಾಯಿ ನನ್ನನ್ನೂ, ನನ್ನ ಇಬ್ಬರು ತಮ್ಮಂದಿರನ್ನೂ, ಒಬ್ಬ ತಂಗಿಯನ್ನೂ, ಜೊತೆಯಲ್ಲಿ ಕರೆದುಕೊಂಡು ಚಕ್ಕಡಿಯಲ್ಲಿ ಕುಳಿತು ಎಲ್ಲ ಅಡಿಗೆಯ ಪಾತ್ರೆ–ಪಡಗಗಳೊಂದಿಗೆ ಗುಡಸ ಗ್ರಾಮಕ್ಕೆ ಹೋದೆವು. ಗುಡಸದಿಂದ ಒಂದೆರಡು ಮೈಲು ಈಚೆಗೆ ಇರುವ ಸಿಂದಿಯ ಬನವು ನಮ್ಮನ್ನು ಭೀತಿಗೊಳಿಸಿತು. ಅಲ್ಲಿಯೇ ಅನೇಕ ದಾರಿಹೋಕರು ಸುಲಿಗೆಗೊಳಗಾದುದನ್ನು ನಾವು ಕೇಳಿ ಅರಿತಿದ್ದೆವು. ಆದರೂ ನಾವು ಯಾವ ತೊಡಕು-ತೊಂದರೆಗಳಿಲ್ಲದೆ ಗುಡಸ ಗ್ರಾಮವನ್ನು ತಲುಪಿದೆವು.

ನಾನು ಮರುದಿನವೇ ಆ ಚಿಕ್ಕ ಹಳ್ಳಿಯನ್ನು ಕುತೂಹಲ ಬುದ್ಧಿಯಿಂದ ತಿರುಗಾಡಿ ನೋಡಿದೆ. ಊರ ಮಧ್ಯದಲ್ಲಿಯೇ ಭವ್ಯವಾದ ನಂದಿಯ (ಬಸವಣ್ಣನ) ಗುಡಿ. ಆದರ ಎಡಬದಿಯ ಪೌಳಿಯ ಭಾಗದಲ್ಲಿಯೇ ನಮ್ಮ ಶಾಲೆಯಿದ್ದಿತು. ಗುಡಿಯ ಹಿಂಗಡೆಯ ಒಂದು ಕಿರುಮನೆಯು, ಆರೇಳು ಅಂಕಣದ ಪಡಸಾಲೆಯು ನಮ್ಮ ಇರುವ ಮನೆಯಾಗಿದ್ದಿತು. ಬಯಲು ಪಡಸಾಲೆಯನ್ನು ತಡಿಕೆಗಳಿಂದ ಸಾಲಾದ ಕಂಬಗಳಿಗೆ ಕಟ್ಟಿ ಮರೆಮಾಡಿದ್ದರು. ಅದಕ್ಕೆ ಮುಂಬಾಗಿಲೇ ಇರಲಿಲ್ಲ. ಅದನ್ನು ನೋಡಿದ ನನಗೆ ಹುಯೆನ್‌ತ್ಸಾಂಗನ ಮಾತು ನೆನಪಾಯಿತು. ಅವನು ನೋಡಿದ ಮನೆಗಳಿಗೆ ಕೀಲಿಗಳು ಇರುತ್ತಿದ್ದಿಲ್ಲವಂತೆ. ಆದರೆ ಈಗ ನಮ್ಮ ಮನೆಗೆ ಕೀಲಿ ಹಾಕುವ ಬಾಗಿಲು ಕೂಡ ಇರಲಿಲ್ಲ. ಕಳ್ಳರ ಭಯವನ್ನು ಮರೆತು ನಾವು ಅದೇ ಮನೆಯಲ್ಲಿರಬೇಕಾಯಿತು. ಆ ಹಳ್ಳಿಯಲ್ಲಿ ನಮಗೆ ತಕ್ಕ ವಸತಿಗೃಹಗಳು ಬೇರೆಯಾಗಿ ಸಿಕ್ಕುವಂತೇ ಇರಲಿಲ್ಲ. ಬಸವಣ್ಣನ ಗುಡಿಯ ಹಿಂಬದಿಯೇ ನಮಗೆ ಎಡೆಯನ್ನು ಒದಗಿಸಿತು. ಊರ ಉತ್ತರ ಬದಿಗೆ ಪುಣೆ–ಬೆಂಗಳೂರು ರಾಜಮಾರ್ಗವಿದ್ದಿತು. ಅಲ್ಲಿ ಯಾವಾಗಲೂ ಮನುಷ್ಯರ–ವಾಹನಗಳ ಗೊಂದಲವಿರುವುದು. ದಕ್ಷಿಣ ಭಾಗದಲ್ಲಿ ಊರ ಮುಂದೆಯೇ ಘಟಪ್ರಭೆಯ ತುಂಬಿದ ಪ್ರವಾಹದಿಂದ ಹರಿಯುತ್ತಿರುವುದು. ಮುಂದೆ ಸಮೀಪದಲ್ಲಿಯೇ ಗೋಕಾಕ ಮಿಲ್ಲಿನವರು ಘಟಪ್ರಭೆಯನ್ನು ಒಡ್ಡು ಹಾಕಿ ಕಟ್ಟಿದುದರಿಂದ ಗುಡಸದ ಹತ್ತಿರ ಪ್ರವಾಹವು ಆ ತಡಿಯಲ್ಲಿದ್ದ ಮರಗಳಲ್ಲಿ ಅಸಂಖ್ಯವಾದ ಕೊಡರು–ಕೊಂಚೆ ಮನೆ ಮಾಡಿಕೊಂಡಿರುವುವು. ಅವು ಬೆಳಗಿನಲ್ಲಿ ಒಳ್ಳೆಯ ಸೈನ್ಯದ ಶಿಸ್ತಿನಿಂದ ಗುಂಪುಗುಂಪಾಗಿ ಆಹಾರ ಶೋಧನೆಗೆ ಹೊರಡುವುವು. ಸಂಜೆಯ ಕಡೆಗೆ ಅವು ಮರಳಿ ಬಂದು ಆ ಮರಗಳಲ್ಲಿಯ ಮನೆಗಳಲ್ಲಿ ಸೇರುವವು.

ಗುಡಸದಲ್ಲಿರುವ ಒಂದೇ ಒಂದು ಬ್ರಾಹ್ಮಣರ ಮನೆಯೆಂದರೆ ಬಂಡೋಪಂತ ಜಮನೀಸ್‌ರದೆಂದು ಹಿಂದೆಯೇ ಹೇಳಿದ್ದೇನೆ. ಅವರ ಮನೆ ತುಂಬಾ ವಿಶಾಲವಾದುದು. ಮನೆಯಲ್ಲಿ ಶ್ರೀಮಂತಿಕೆ ನಾಟ್ಯವಾಡುತ್ತಿದ್ದುದು ನೋಡಿದವರ ಕಣ್ಣಿಗೆ ಕಾಣುವಂತಿತ್ತು. ಎಂತಹ ಭವ್ಯವಾದ ಮನೆ! ಮನೆಯಲ್ಲಿ ಹೋದೊಡನೆ ಮೊಗಸಾಲೆಯಲ್ಲಿ ಎದುರಿಗೆ ಮೇಲ್ಬದಿಯಲ್ಲಿ ಬಂಡೋಪಂತರ ದೊಡ್ಡದು ಮಾಡಿದ ಚಿತ್ರವನ್ನು ನೇತು ಹಾಕಲಾಗಿತ್ತು. ಆದರಂತೆಯೇ ಎಡಗಡೆಯ ಗೋಡೆಯ ಮಧ್ಯದಲ್ಲಿ ಅವರ ಮಗನಾದ ಅಣ್ಣಾಸಾಹೇಬ ಎಂಬ ಇಳಿವಯಸ್ಸಿನ ತರುಣನ ಭಾವಚಿತ್ರವನ್ನು ಇಳಿಬಿಡಲಾಗಿತ್ತು. ಇವಲ್ಲದೆ ರಾಜಾ ರವಿವರ್ಮನು ಬರೆದ ಎಷ್ಟೋ ಪೌರಾಣಿಕ ಚಿತ್ರಗಳನ್ನು ಗೋಡೆಗೆ ನೇತು ಹಾಕಿದ್ದರು. ಅಚ್ಚುಕಟ್ಟಾದ ಮನೆ. ಮನೆಯಲ್ಲಿ ಅಣ್ಣಾಸಾಹೇಬನ ಹೆಂಡತಿ ಹೆರಿಗೆಗಾಗಿ ಗದುಗಿಗೆ ಹೋಗಿದ್ದಳು. ಬಂಡೋಪಂತರ ಹೆಂಡತಿ, ವಿಧವೆಯಾದ ಅವರ ತಂಗಿ, ಬೇರೆ ಅವರ ದೀನರಾದ ಆಪ್ತ ಬಂಧುಗಳು, ಅವರ ಮನೆಯಲ್ಲಿದ್ದರು. ನೀರನ್ನು ತರಲು ಭೀಮಪ್ಪನೆಂಬ ಅರೆಮೂಕನು ಒಬ್ಬ ವಿದೂಷಕನಂತೆ ಕಾಣುತ್ತಿದ್ದನು. ಬಂಡೋಪಂತರ ಮೊಮ್ಮಗ ಸುಬ್ಬು ಎಂಬುವನು ನಮ್ಮ ಶಾಲೆಗೆ ಬರುತ್ತಿದ್ದ. ತೀರ ಚಿಕ್ಕ ಹುಡುಗ, ಬಾಲಕರ ವರ್ಗದಲ್ಲಿದ್ದು ಅಕ್ಷರ ಕಲಿಯುತ್ತಿದ್ದ. ನನಗೆ, ಅವನಿಗೆ ತುಂಬ ಸ್ನೇಹವಾಯಿತು.

ಬಂಡೋಪಂತರ ಮನೆಯು ಹೆಣ್ಣುಮಕ್ಕಳಿಲ್ಲರೂ ಧಾರಾಳ ಮನಸ್ಸಿನವರು; ಸಿಗರ್ವಿಗಳು. ನಾವು ಹೊಸತಾಗಿ ಹೋದುದರಿಂದ ನಮಗೆ ಬೇಕಾದುವೆಲ್ಲವನ್ನೂ ಕೊಟ್ಟು ನೆರವಾದರು. ಇಷ್ಟೇ ಅಲ್ಲ ಹೊತ್ತು ನೀರನ್ನು ತರಬೇಕಾದುದರಿಂದ ಅವರ ಉದಾರ ಬುದ್ಧಿ ಆ ಶ್ರಮವನ್ನು ಬಿಡಿಸಿತು. ತಮ್ಮ ಮನೆಯ ಕುದುರೆಯ ಲಗಳಿಯನ್ನೇ ತುಂಬಿಸಿ ತಮ್ಮ ನೀರಿನವನ ಕಡೆಯಿಂದ ನಮ್ಮ ಮನೆಗೆ ಹಾಕಿಸುತ್ತಿದ್ದರು. ಅಲ್ಲಿ ಲಗಳಿಗೆ ಹೇಳುವ ಮಾತು. 'ಮಂಕಣಿ' ಎಂದು. ಮರಾಠಿಯಲ್ಲಿ ಇದಕ್ಕೆ 'ಮಾಕಣ' ಎಂದು ಹೇಳುವರು. ಕನ್ನಡದಿಂದ ಮರಾಠಿಗೆ ಈ ಪದವು ವಿಕೃತವಾಗಿ ಹೋಗಿದೆಯೋ ಅಥವಾ ಮರಾಠಿಯಲ್ಲಿಯ ಪದವೇ ವಿಕೃತವಾಗಿ ಮಂಕಣಿ ಎಂದು ಕನ್ನಡದಲ್ಲಿ ಬಂದಿದೆಯೋ ಎಂಬ ಯೋಚನೆ ಆಗ ನನ್ನ ಮನಸ್ಸಿಗೆ ಬಾರದೆ ಹೋಗಲಿಲ್ಲ.

ಜೈನ ಪ್ರಧಾನವಾದ ಆ ಪ್ರದೇಶದಲ್ಲಿ ಅವರ ಭಾಷೆಯಾದ ಪ್ರಾಕೃತದ ಪ್ರಭಾವವು ಸಾಕಷ್ಟು ಆಗಿರಬಹುದೆಂದು ಈಗ ನಾನು ಭಾವಿಸುತ್ತೇನೆ. ಒಂದು ಕಾಲದಲ್ಲಿ ಕನ್ನಡದ ಮೇಲೆ ಪ್ರಾಕೃತ ಭಾಷೆಯ ಪ್ರಭಾವವು ಬಹಳವಾಗಿತ್ತು. ಮ

ರಾಠಿ ಭಾಷೆಯ ಮೇಲೂ ಸಾಕಷ್ಟು ಪ್ರಭಾವವಿದ್ದಿತು. ಕುಮಾರವ್ಯಾಸನು ತನ್ನ ಮಹಾಭಾರತದ ಕಾವ್ಯದಲ್ಲಿ ಅನೇಕ ಪ್ರಾಕೃತ ಪದಗಳನ್ನು ಬಳಸಿದ್ದಾನೆ. ಇಂದಿನ ಸಂಶೋಧಕರು ಆ ಪದಗಳನ್ನು ಮರಾಠಿಯವೆಂದು ಹೇಳುತ್ತಿರುವುದನ್ನು ಕೇಳಿ ನಗಬೇಕೋ, ಅಳಬೇಕೋ ತಿಳಿಯದ ಸಂಗತಿಯಾಗಿದೆ. ಪ್ರಾಕೃತ ಪ್ರಭಾವವಿದ್ದ ಕಾಲದಲ್ಲಿ ಸೇರಿಕೊಂಡ ಅನೇಕ ಪ್ರಾಕೃತ ಪದಗಳು ಕನ್ನಡದಲ್ಲಿ ಕಣ್ಮರೆಯಾಗಿ ಹೋಗಿ ಮಹಾರಾಷ್ಟ್ರದಲ್ಲಿ ಇದುವರೆಗೂ ಉಳಿದುಕೊಂಡಿವೆ. ಆದರೆ ಆಗಿನ ಭಾಷಾ ಪದ್ಧತಿಯನ್ನು ಅನುಸರಿಸಿ ಕುಮಾರವ್ಯಾಸನು ಬಳಕೆ ಮಾತಿನಲ್ಲಿ ಕಾವ್ಯವನ್ನು ಬರೆದ. ಅಂದಿನ ಭಾಷೆಯಲ್ಲಿ ಬಳಸಲಾಗುತ್ತಿದ್ದ ಪ್ರಾಕೃತ ಪದಗಳನ್ನೇ ಸೇರಿಸಿ ಭಾಷೆಯನ್ನು ಸುಲಭಗೊಳಿಸಿದ್ದಾನೆ. ಅವು ಪ್ರಾಕೃತ ಭಾಷೆಯಿಂದ ತೆಗೆದುಕೊಂಡ ಪದಗಳಲ್ಲದೆ ಮರಾಠಿಯಿಂದ ತೆಗೆದುಕೊಂಡವುಗಳಲ್ಲ.

ಹೋಗಲಿ, ಇಂದಿನ ಪರಿಗಣನೆಯಲ್ಲಿ ರಾಘವಾಂಕ ಕವಿಯು ಕುಮಾರವ್ಯಾಸನಿಗಿಂತ ಮೊದಲಿನವನಷ್ಟೇ. ಅವನು ಕೂಡ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ಅನೇಕ ಪ್ರಾಕೃತ ಪದಗಳನ್ನು ತೆಗೆದುಕೊಂಡಿದ್ದಾನೆ. ಕಂಟಣಿಸು ಅಂದರೆ ಬೇಸರಪಡು, ಜಿಗುಪ್ಸೆಪಡು ಎಂದರ್ಥ. ಇದಕ್ಕೆ ಸರಿಯಾಗಿ ಮಹಾರಾಷ್ಟ್ರದಲ್ಲಿ ಕಂಟಾಳವಾಣಾಏಣೆ ಎಂದು. ಆ ಕಂಟಣಿಸು ಎಂಬುದರ ಮೂಲಧಾತುವಿನ ಪ್ರಯೋಗವನ್ನೇ ಸ್ವೀಕರಿಸಿದ್ದಾರೆ. ಪೈಸರಿಸು ಎಂದರೆ ಅಡಿಯೊಡನೆ ಹಿಂದಕ್ಕೆ ಸರಿ ಎಂಬುದಕ್ಕೆ ಪಾಯಾಸರಸಿ ಎಂದು ಮಹಾರಾಷ್ಟ್ರಿಗರು ಈಗಲೂ ತಮ್ಮ ಮಾತಿನಲ್ಲಿ ಬಳಸುತ್ತಾರೆ. ಪಾರಧಿ ಎಂಬ ಇನ್ನೊಂದು ಪದವನ್ನೂ ಬೇಟೆಗಾರ ಅಥವಾ ವ್ಯಾಧ ಎಂಬರ್ಥದಲ್ಲಿ ರಾಘವಾಂಕನು ಬಳಸಿರುವನು. ಆದರೆ ಅದೀಗ ಕನ್ನಡದಲ್ಲಿಲ್ಲ. ಮರಾಠಿಯಲ್ಲಿ ಈಗಲೂ ಅದೇ ಅರ್ಥದಲ್ಲಿ ಬಳಕೆಯಾಗುವುದು. ಕನ್ನಡದಲ್ಲಿ ಇಲ್ಲವೆಂದು ಈ ಪ್ರಾಕೃತ ಪದಗಳನ್ನು ಮರಾಠಿಯವೆಂದು ಹೇಳಬೇಕೆ!

ಜನ್ನಕವಿಯು ತನ್ನ ಕಾವ್ಯಗಳಲ್ಲಿ ಪ್ರಾಕೃತವನ್ನು ಸಾಕಷ್ಟು ಬಳಸಿರುವನು. ಇಷ್ಟೇ ಅಲ್ಲ. ಕನ್ನಡ ಭಾಷೆಯಲ್ಲಿಯೇ ಕಾವ್ಯ ಬರೆಯುವೆನೆಂದು ಪ್ರತಿಜ್ಞೆ ಮಾಡಿ ಹೊರಟ ಆಂಡಯ್ಯ ಕವಿಯು ಸಂಸ್ಕೃತಕ್ಕೆ ಅರ್ಧ ಚಂದ್ರ ಕೊಟ್ಟಿದ್ದರೂ ಪ್ರಾಕೃತ ಪದಗಳಿಗೆ ಸ್ವಾಗತವಿತ್ತಿದ್ದಾನೆ. ಪ್ರಾಕೃತದಿಂದ ಕನ್ನಡದಲ್ಲಿ ಬಂದಿರುವ ಪದಗಳನ್ನು ನಾವು ಪ್ರಾಕೃತದವೆಂದೇ ಹೇಳಬೇಕಲ್ಲದೆ ಅವು ಬೇರೆ ಸಂಸ್ಕೃತದ ಉಪಭಾಷೆಯಿಂದ ಬಂದುವೆಂದು ಹೇಳುವುದು ಸರಿಯಾಗುವುದಿಲ್ಲ. ಆಯಿತು. ನಾನು ಏನೋ ಹೇಳಲು ಹೊರಟು ಈ ಕನ್ನಡ – ಪ್ರಾಕೃತ ಭಾಷೆಗಳ ವಿಷಯವನ್ನು ಬೆಳೆಸಿ ಹೇಳಿದಂತಾಯಿತು. ಅದೇನೂ ಮುಂಕಣಿಯ ನೀರೆಂದು ನಾನು ಹೇಳಿದೆನ

ಲ್ಲವೇ ? ಅದು ನಮ್ಮ ಬಳಕೆಗೆ ಸಾಲುತ್ತಿತ್ತು. ಕುಡಿಯುವ ನೀರು, ಮಡಿ ನೀರುಗಳಿಗಾಗಿ ಹೊತ್ತು ತರುವ ಪ್ರಸಂಗವೇ ಇತ್ತು. ನಮ್ಮ ತಾಯಿ ಆ ಶ್ರಮವನ್ನು ಹೇಗೋ ಸಹಿಸಿದಳು.

ಗುಡಸವಲ್ಲಿಯ ಜನಸಾಮಾನ್ಯರ ಒಂದು ಔದಾರ್ಯದ ಪರಂಪರೆ ಎಂದರೆ ಕಬ್ಬಿನ ಗಾಣ ಮಾಡಿದವರು ಪ್ರತಿಯೊಂದು ಗಾಣಕ್ಕೂ ಒಂದು ಹೊರೆ ಕಬ್ಬು, ಒಂದು ದೊಡ್ಡ ಪಾತ್ರೆ ತುಂಬ ಕಬ್ಬಿನ ರಸ, ಒಂದು ತಂಬಿಗೆಯಷ್ಟು ಕಾಕಂಬಿ ನಾಲ್ಕೈದು ಸೇರಿನಷ್ಟು ಹೊಸ ಬೆಲ್ಲ ಅಲ್ಲದೆ ಕೆನೆ ಬೆಲ್ಲ, ಚರಕಿನ ಬೆಲ್ಲಗಳನ್ನು ಸ್ವಲ್ಪ ಸ್ವಲ್ಪ ಮಾಸ್ತರರ ಮನೆಗೆ ಕಳುಹಿಸುತ್ತಿದ್ದರು. ಇದು ಬೇಡವೆಂದು ನಮ್ಮ ಹಣಮಣ್ಣನು ಬೇಕಾದಷ್ಟು ಸಲ ಹೇಳಿದ. ಆದರೆ ನಮ್ಮ ತಾಯಿ ಆತನಿಗೆ “ನಾವೇನೂ ಅವರಿಗೆ ಒತ್ತಾಯ ಮಾಡುವುದಿಲ್ಲ. ಪ್ರೀತಿಯಿಂದ ತಂದು ಮನೆಗೆ ಕೊಡುತ್ತಾರೆ. ಬೇಡವೆಂದು ಹೇಳಿದರೆ ಅವರು ನೊಂದುಕೊಳ್ಳುತ್ತಾರೆ. ಆದುದರಿಂದ ತಂದು ಕೊಡಲಿಬಿಡು” ಎಂದು ಹೇಳಿದರು. ನಾವು ಹೋದಾಗ ಕಬ್ಬಿನ ಗಾಣದ ಕೊನೆಕೊನೆಯ ದಿನಗಳು ಬಂದಿದ್ದವು. ಬಹುಭಾಗದ ಕಬ್ಬು ಗಾಣವಾಡಿ ಬೆಲ್ಲದ ರೂಪದಿಂದ ಸಿದ್ಧವಾಗಿ ಹೋಗಿದ್ದಿತು. ಆದರೆ ಉಳಿದಿರುವ ಈ ಕೆಲವೇ ದಿನಗಳಲ್ಲಿ ನಮ್ಮ ಮನೆಯಲ್ಲಿ ಸಾಕಷ್ಟು ಬೆಲ್ಲದ ಸಂಗ್ರಹವಾಯಿತು. ಕಾಕಂಬಿ ಕೂಡ ಬಿದ್ದಿತು. ಕೆನೆಬೆಲ್ಲ, ಚರಕಿನ ಉಂಡಿಗಳಂತೂ ನಮಗೆ ನಿತ್ಯವು ತಿನ್ನಲು ದೊರೆಯತೊಡಗಿದವು. ಗುಡಸವೆಂದರೆ ಕಬ್ಬಿನ ಊರು ಎಂದೇ ಹೇಳಬಹುದಾಗಿದ್ದಿತು.

ಇನ್ನೊಂದು ಮಾತು, ನಮ್ಮ ಮನೆಗೆ ತಂದುಕೊಟ್ಟಂತೆಯೇ ಬಸವಣ್ಣ ದೇವರ ಗುಡಿಗೂ. ದೇವರಿಗಾಗಿ ಕಬ್ಬು, ರಸ, ಬೆಲ್ಲ, ಕೆನೆಬೆಲ್ಲ, ಚರಕಿನ ಉಂಡಿಗಳನ್ನು ದಿನದಿನವೂ ತಂದುಕೊಡುತ್ತಿದ್ದರು. ಕೆಲವರು ಗರಿಗಬ್ಬುಗಳನ್ನು ತಂದು ಕಂಬಗಳಿಗೆ ಕಟ್ಟುತ್ತಿದ್ದರು. ವ್ಯವಹಾರಿಯಾದ ಆ ಪೂಜಾರಿಯು ಆ ರಸವನ್ನೆಲ್ಲ ಬೆಲ್ಲವನ್ನಾಗಿ ಪರಿವರ್ತಿಸುವುದಲ್ಲದೆ ಕಬ್ಬು, ಗರಿಗಬ್ಬುಗಳನ್ನು ಕೈ ಗಾಣದಿಂದ ರಸ ತೆಗೆದು, ಆ ರಸದಿಂದ ಬೆಲ್ಲವನ್ನು ತಯಾರಿಸಿ ಕೊಡುತ್ತಿದ್ದನು. ದೇವರಿಗೆಂದು ಕೊಟ್ಟ ಈ ಪದಾರ್ಥಗಳು ಪೂಜಾರಿಯ ಹಣವಂತಿಕೆಯನ್ನು ಬೆಳೆಸಲು ಸಹಾಯಕವಾಗುತ್ತಿತ್ತು.

ಒಂದು ಮೋಜಿನ ವಿಷಯ. ಬಂಡೋಪಂತರು ಊರಿಗೆ ಬೇಕಾದ ಹಿರಿಯರಾಗಿದ್ದರೂ, ಅವರಿಗೆ ಚೆಲುವೆಯಾದ ಒಬ್ಬ ಹೆಂಡತಿಯಿದ್ದರೂ, ಒಬ್ಬ ರಜಪೂತ ರಮಣಿಯನ್ನು ಪ್ರೇಯಸಿಯನ್ನಾಗಿ ಸ್ವೀಕರಿಸಿದ್ದರು. ಆಕೆಯ ಹೆಸರು ಸುಂದರಾ

ಎಂದು. ಬಾಬು ಎಂಬ ಹೆಸರಿನ ಆಕೆಯ ಮಗನೂ ನಮ್ಮ ಶಾಲೆಗೆ ಬರುತ್ತಿದ್ದ. ಅವನ ಗೆಳೆತನ ನನಗಾದುದರಿಂದ ನಾನು ಅವರ ಮನೆಗೂ ಹೋಗಿ ಬರತೊಡಗಿದೆ. ಸುಂದರಾಬಾಯಿ ವಯಸ್ಸಾಗಿದ್ದರೂ ನಿಜವಾದ ಸುಂದರಿಯೇ ಆಗಿದ್ದಳು. ಅವಳ ಮನೆಯೂ ಅಚ್ಚುಕಟ್ಟಾಗಿತ್ತು. ಬಂಡೋಪಂತರು ತಮ್ಮ ಸ್ವಂತದ ಮನೆಯ ಒಂದು ಕಟ್ಟಡವನ್ನೇ ಆಕೆಗೆ ಉಚಿತವಾಗಿ ಕೊಟ್ಟಿದ್ದರು. ಅದರಲ್ಲಿ ಅವಳು ಆರಾಮವನ್ನು ಅನುಭವಿಸುತ್ತ ಸುಖವಾಗಿ ಇರುತ್ತಿದ್ದಳು. ತಂದೆ ಹೀಗೆ ಬೇರೆ ಹೆಣ್ಣಿನ ಕಡೆಗೆ ಮನಸ್ಸು ಮಾಡಿದ್ದರೂ ಮಗ ಅಣ್ಣಾಸಾಹೇಬನು ರಸಿಕನಾಗಿದ್ದರೂ ತನ್ನ ಹೆಂಡತಿಯ ಪ್ರೇಮವನ್ನೇ ಅವಲಂಬಿಸಿದ್ದನು.

ರಾಜಮಾರ್ಗದ ಆಚೆಯ ಬದಿಯ ಊರ ಜಾಗದಲ್ಲಿ ಒಂದು ಬಂಗಲೆಯನ್ನು ಅಣ್ಣಾಸಾಹೇಬರು ಕಟ್ಟಿಸಿದ್ದರು. ಅವರು ತುಂಬ ರಸಿಕರು. ಆ ಬಂಗಲೆಯಲ್ಲಿ ತಬಲಾ, ಹಾರ್ಮೋನಿಯಮ್‌ಗಳಿದ್ದವಲ್ಲದೆ ಒಂದು ಅತ್ಯುತ್ತಮವಾದ ಪ್ರತಿಯೊಂದು ಸಾಲಿಗೂ ಮುಳ್ಳು ಚುಚ್ಚಿ ತಿರುಗಿಸಿದ ಗ್ರಾಮೋಫೋನ್ ಇದ್ದಿತು. ಇದನ್ನೆಲ್ಲ ನೋಡಿದಾಗ, ತೂಗಿ ತಿನ್ನಬೇಕಾದ ಬಡತನದ ನಮಗೆ 'ಇಷ್ಟೊಂದು ಸಿರಿವಂತಿಕೆ ಇವರಿಗೆ ಹೇಗೆ ಬಂದಿತು' ಎಂದು ವಿಸ್ಮಯವಾಗುತ್ತಿತ್ತು. ಮನೆಯ ತೋಟ-ಹೊಲಗಳೇ ಇವರಿಗೆ ಬೇಕಾದಷ್ಟು ಇದ್ದವು. ಎರಡು ಸಾವಿರ ಪೆಂಟಿಗಳಿಗಿಂತ ಹೆಚ್ಚಾಗಿ ಬೆಲ್ಲದ ಬೆಳೆಯು ವರುವರುಷವೂ ಇವರಿಗೆ ಸಲುವಳಿಯಾಗುತ್ತಿತ್ತು. ಅಲ್ಲದೆ ಧಾನ್ಯಾದಿಗಳು. ಆದರೂ ಆ ತಂದೆ-ಮಗ ಇಬ್ಬರೂ ಪಿ.ಡಬ್ಲ್ಯೂ.ಡಿ, ಕಾಂಟ್ರಾಕ್ಟರರಾಗಿ ಕೆಲಸ ಮಾಡುತ್ತಿದ್ದರು. ಆದರಿಂದಲೂ ದುಡ್ಡಿನ ಸುರಿಮಳೆ. ಗುಡಸದ ಸಾರ್ವಜನಿಕ ರಸ್ತೆಯ ಸುಂಕದಕಟ್ಟೆಯನ್ನು ಅವರೇ ಗುತ್ತಿಗೆಗೆ ಹಿಡಿದಿದ್ದರಲ್ಲದೆ, ಲೈನು-ದಾರಿ, ಸರ್ಕಾರಿಯ ಪೂಲು, ಸರ್ಕಾರಿಯ ಬಂಗ್ಲೆಗಳನ್ನೂ ರಚಿಸುವ ಗುತ್ತಿಗೆ ಹಿಡಿಯುತ್ತಿದ್ದರು. ಅಲ್ಲಿಯೂ ಅವರಿಗೇನೂ ಲಾಭ ಕಡಿಮೆ ಇರಲಿಲ್ಲ. ಆದೇಕೋ ಏನೋ ಕುದುರೆಯ ಬಂಡಿಯನ್ನು ಮಾತ್ರ ಮನೆಯಲ್ಲಿಟ್ಟಿದ್ದರಲ್ಲದೆ ಹೊಸತಾಗಿ ಪ್ರಚಾರಕ್ಕೆ ಬಂದಿದ್ದ ಮೋಟಾರ್ ಕಾರನ್ನು ಅವರು ಬಳಸುತ್ತಿರಲಿಲ್ಲ.

ಬಂಗಲೆಯ ಮುಂದೆ ಸ್ವಲ್ಪ ದೂರದಲ್ಲಿ ಒಂದು ಸುತ್ತುಗೋಡೆಯ ದೊಡ್ಡಿಯನ್ನು ಬಂಡೋಪಂತರು ಪ್ರವಾಸಿಕರಿಗಾಗಿ ತಯಾರಿಸಿದ್ದರು. ಅಲ್ಲಿ ಎತ್ತು, ಬಂಡಿ ಬಿಟ್ಟು ರಾತ್ರಿಯ ವೇಳೆಯನ್ನು ಸುಖವಾಗಿ ಕಳೆದು ಮರುದಿನ ಮುಂದೆ ಹೋಗಬಹುದಾಗಿತ್ತು. ಪ್ರವಾಸಿಕರೇನೊ ಹೊರಟುಹೋಗುತ್ತಿದ್ದರು. ಬಂಡೋಪಂತರು ಇದರಿಂದಲೂ ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದರು. 30-40 ಬಂಡಿಗಳಿಗೆ

ಕಟ್ಟಿದ ಎತ್ತುಗಳ ಸಗಣಿಯಿಂದರೆ ನಿತ್ಯವೂ ಒಂದು ನೂರಾರು ಹೆಡಿಗೆಯಷ್ಟು ಆಗುತ್ತಿದ್ದಿತು. ಬಂಡೋಪಂತರು ಅದನ್ನೆಲ್ಲ ಸೇರಿಸಿ ವರ್ಷದ ತನಕ ಕೊಳೆಯಿಸಿ ಗೊಬ್ಬರವನ್ನು ಮಾಡುತ್ತಿದ್ದರು. ಮಾರಿದರೆ ಅದರಿಂದ ಸಾವಿರಾರು ರೂ. ಗಳನ್ನವರು ಗಳಿಸಬಹುದಾಗಿತ್ತು. ಬೇರೆ ಗೊಬ್ಬರವನ್ನು ಅವರು ಕೊಂಡುಕೊಳ್ಳಬೇಕಾಗಿತ್ತು. ಯಾವ ದಿಕ್ಕಿನಿಂದ ನೋಡಿದರೂ ಬಂಡೋಪಂಥರು ಭಾಗ್ಯಶಾಲಿಗಳು. ಅಂತಹ ಹಳ್ಳಿಯಲ್ಲಿ ಅವರು ಮನೆ ಮಾಡಿಕೊಂಡಿದ್ದುದು, ನಮಗೆ ಆಶ್ಚರ್ಯವನ್ನುಂಟು ಮಾಡಿತ್ತು.

ಬಂಡೋಪಂತರ ಮಗ ಅಣ್ಣಾಸಾಹೇಬರಿಗೆ ನನ್ನ ಮೇಲೆ ವಿಶೇಷವಾದ ಪ್ರೀತಿ. ದಿನದಿನವೂ ತಮ್ಮ ಬಂಗಲೆಗೆ ಕರೆಯಿಸಿಕೊಳ್ಳುವರು. ಮನೆಯಲ್ಲಿ ಬೇಕಾದಷ್ಟು ಸಂಗೀತ ಸಾಧನವಿದ್ದರೂ ಅದರಿಂದ ಅವರಿಗೆ ತೃಪ್ತಿಯಿಲ್ಲ. ಎಳೆಯ ಕಂಠದಿಂದ ಹಾಡುವ ನನ್ನ ಗೀತೆಗಳನ್ನು ಕೇಳಲು ಅಪೇಕ್ಷೆ. ಅವರ ಮಗ ಸುಬ್ಬನು ನನ್ನೊಡನೆಯೇ ಇರುತ್ತಿದ್ದ. ಒಂದು ಸಲ ಅದೇ ಊರಿನ ಮಲ್ಲಪ್ಪ ಅಮ್ಮಣಗಿ ಎಂಬ ಹಳ್ಳಿಯ ನಟನನ್ನು ಹಾಡಲು ಕರೆಯಿಸಿದರು. ಅವನು 'ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ' ಎಂಬ ಬಯಲಾಟದಲ್ಲಿ ಮುಖ್ಯ ನಟಿಯ ಪಾತ್ರವನ್ನು ಅಭಿನಯಿಸುತ್ತಿದ್ದ. ನಮ್ಮ ಊರಿನ ರಸಿಕ ಜನರು 1911 ನೇ ಇಸ್ವಿಯಲ್ಲಿ ಮಾಡಿದ ಆ ಬಯಲಾಟವನ್ನು ನಾನು ನೋಡಿದೆ. ಅದರಲ್ಲಿಯೂ ಈ ಗುಡಸದ ಮಲ್ಲಪ್ಪನೇ ಮುಖ್ಯ ಸ್ತ್ರೀ ಪಾತ್ರ ಮಾಡುತ್ತಿದ್ದ. ಆಗ ಅವನ ಬಾಯಿಂದ ಒಂದು ಹೊಸ ಹಾಡನ್ನು ಕೇಳಿದೆ. ಅದರ ಧಾಟಿಯು ಬಹಳ ದಿನಗಳವರೆಗೆ ನನ್ನ ಕಿವಿಯಲ್ಲಿ ಗುಣುಗುಣಿಸುತ್ತಿತ್ತು. ಈಗ ಪ್ರೊ. ಚಂದ್ರಶೇಖರ ಕಂಬಾರ ಅವರು ರಚಿಸಿದ ಒಂದು ಜನಪ್ರಿಯ ಗೀತೆಗೆ–"ಇಂವ ಯಾವ ಊರಿನ ಮಾಂವಾ, ಈ ಚೆಲುವಾ ನೋಡಯವ್ವ ಹುಡುಗನ" ನಾನು 1911 ನೇ ಇಸ್ವಿಯಲ್ಲಿ ಕೇಳಿದ "ಬಾ ಚದುರ ಕರೀತೀನ ನಾನs ಮಂದಿರಕ್ಕೆ ನಡೀನೀನ ॥ಪ॥

ಇನ್ಯಾಕ ಮಾಡೋದು ಅನುಮಾನಾs
ಬೇಡಿದ್ದನ್ನ ಕೊಡುವೆನು ನಾನಾs
ನನ ಮನಸ ಮಾಡ ಸಮಾಧಾನs
ಮಂದಿರಕೆ– ನಡೀ ನೀನ ॥೧॥

ಎಂಬ ಪದವೇ ಮೂಲ ಧಾಟಿಯನ್ನು ಒದಗಿಸಿಕೊಟ್ಟಿದೆ ಎಂದು ನಾನು ಭಾವಿಸಿದ್ದೇನೆ. ಇದರಂತೆಯೇ "ಜಾಣೆ ನಿನ್ನ ವಾಣಿ ಮನಕೆ ಪೂರ್ಣ ಆನಂದಾಯಿತೆ" ಎಂಬ ಹಾಡಿನ ಧಾಟಿಯೂ ನನ್ನ ಮನಸ್ಸನ್ನು ಮರುಳುಗೊಳಿಸಿತ್ತು. ಅದರಂತ ಪದ್ಯವನ್ನೇ ನಾನು ನಮ್ಮ ಜನಪದದಲ್ಲಿ ಬೇರೆಯಾಗಿ ಕೇಳಿಲ್ಲ,

ುಡಸದ ಜನರ ಭಾಷೆಯೇ ಒಂದು ವಿಚಿತ್ರ. ಅವರು ಹೇಳುತ್ತಿದ್ದ ಪುಂಜಿ, ಪುಂಜಾರಿ. ಸಂಕರಿ ಎಂಬ ಅನುಸ್ವಾರಯುಕ್ತ ಪದಗಳನ್ನು ತಿಥೆವು, ಕುಂಡಾಕೋ. ುಂಭ, ಭಕ್ಶರಿ, ಈ ಮಹಾಪ್ರಾಣಯುಕ್ತ ಪದಗಳನ್ನು ಕೇಳಿದಾಗ ಇವರಾಡುವ ಾಷೆ ನನಗೆ ವಿಚಿತ್ರವಾಗಿ ಕಾಣುತ್ತಿತ್ತು. ಒಂದು, ಈ ಭಾಷೆ ವಿಷಯಕ್ಕೆ ತಮಾ ಶೆಯನ್ನು ಮಾಡುವದುಂಟು. ಒಬ್ಬ ಗುಡಸದವನು ಒಂದು ಅಂಗಡಿಗೆ ಹೋಗಿ 'ಶೆಕರಪ್ಪಾ, ಶೆಕರಪ್ಪಾ ಒಂದ ಸೇರು ಸಂಕರಿ ಕೊಡು" ಎಂದು ಕೇಳಿದನಂತೆ. ಹೀ ುದೆ ಅಲ್ಲಿಯ ವಿಚಿತ್ರವಾದ ಕನ್ನಡ. ಆದರೂ ಮರಾಠಿ ಒಲವಿನ ಜನರು ಆ ಹಳ್ಳಿಯಲ್ಲಿ ಯಾರೂ ಇರಲಿಲ್ಲ. ಒಬ್ಬರೇ ಒಬ್ಬ ಶ್ರೀಮಂತರಾದ ಶ್ರೀ ಶೈಲಯ್ಯ ನವರು ಎಂಬ ಸಿರಿವಂತರು ಗಡಹಿಂಗ್ಲಜನಲ್ಲಿ ತಮ್ಮ ಹುಡುಗರನ್ನಿಟ್ಟು ಮರಾಠಿ ಭಾಷೆಯಲ್ಲಿಯೇ ಅವರಿಗೆ ಶಿಕ್ಷಣವನ್ನು ಕೊಡಿಸುತ್ತಿದ್ಧರು. ನಾನು ಅವರನ್ನು ಹೀಗೆ ಏಕೆ ! ಎಂದು ಕೇಳಿದೆ. ಅದಕ್ಕೆ ಅವರು ಈ ಊರ ಶಾಲೆಯಲ್ಲಿ ಒಳ್ಳೆಯ ಶಿಕ್ಷಣ ದೊರೆಯುತ್ತಿಲ್ಲ ಆದಕ್ಕಾಗಿ ನಮ್ಮ ಹುಡುಗರನ್ನು ನಮ್ಮ ನಂಟರಿರುವ ದೊಡ್ಡ ಊರಿನ ಶಾಲೆಗೆ ಕಳುಹಿಸುತ್ತಿದ್ದೇನೆ. ಅಲ್ಲದೆ ನಮ್ಮ ಆಪ್ತ ವರ್ಗವೂ ಮಹಾರಾಷ್ಟ್ರದಲ್ಲಿ ಇದ್ದುದರಿಂದ ಮರಾಠಿ ಕಲಿಸಿದರೇ ಒಳ್ಳೆಯದು" ಎಂದು ಹೇಳಿದರು. ನಾನು ಹುಡುಗ ಹೆಚ್ಚಿಗೆ ವಾದ-ವಿವಾದಗಳನ್ನು ಹೂಡದೇ ಅಷ್ಟಕ್ಕೆ ಸುಮ್ಮನಾದೆ.

ನಾವು ಗುಡಸಕ್ಕೆ ಬರುವಾಗ ನಮ್ಮ ಅಣ್ಣ (ಬಲರಾಮ) ಊರಲ್ಲಿರಲಿಲ್ಲ. ನಮ್ಮ ಬೀಗರ ಊರಾದ ಧರಮಟ್ಟಿಯಲ್ಲಿ ಒಂದು ನಾಟಕವನ್ನು ಆಡಿಸುವದಕ್ಕೆಂದು ಹೋಗಿದ್ದ. ಸುಪ್ರಸಿದ್ಧನಾದ ಹರಿಶ್ಚಂದ್ರನೆಂಬ ರಾಜನನ್ನು ಕುರಿತ ಕಥೆಯನ್ನೊ ಳಗೊಂಡ ನಾಟಕವದು. ತಾವೇ ಇಬ್ಬರು-ಮೂವರು ಸೇರಿ ಆ ನಾಟಕವನ್ನು ತಮಗೆ ಬಂದಂತೆ ಸಿದ್ಧಪಡಿಸಿದ್ದರು. ಅದೇ ನಾಟಕವನ್ನೇ ರಂಗಭೂಮಿಯ ಮೇ ಲೆ ತರಲು ಅವರು ತಾಲೀಮು ನಡೆಸಿದ್ದರು. ನಾಟಕವು ರಂಗಭೂಮಿಯ ಮೇಲೆ ಬಂದಿತಂತೆ. ಹಳ್ಳಿಯ ಜನರು ಮೆಚ್ಚಿ ಹೊಗಳಿದರಂತೆ. ಆಮೇಲೆ ಅವನು ಆ ಬೀಗರ ಊಸಿರಿನಿಂದಲೇ ನಡೆಯುತ್ತ, ಗುಡಸ ಗ್ರಾಮಕ್ಕೆ ಬಂದುಬಿಟ್ಟಿದ್ದ.

ಅವನು ಬಂದ ಮೇಲೆ ನಾನು ಕುತೂಹಲಿಯಾಗಿ ಆ ನಾಟಕದ ಪ್ರತಿಯನ್ನು ನೋಡತೊಡಗಿದೆ. ದೇವನಾಗರಿ ಲಿಪಿಯಿಂದ ಕನ್ನಡ ಭಾಷೆಯಲ್ಲಿ ಬರೆದ ನಾಟಕ ವದು. ನೋಡಿ ವಿಚಿತ್ರವೆನಿಸಿತು. ನಮ್ಮ ಬೀಗರ ಊರಿನಲ್ಲಿ ಜನರಿಗೆ "ಹದಿನಾರಾಣೆ ಕನ್ನಡಿಗರಾದರೂ", ಮರಾಠಿ ಮೇಲೆ ಮೋಹ ಹೆಚ್ಚು. ಎಂತಲೇ ಯಾರೂ ಕನ್ನ ಡವನ್ನು ಕಲಿತಿರಲೇ ಇಲ್ಲ. ಅಶುದ್ಧ ಭಾಷೆಯಾದರೂ ಮರಾಠಿಯಲ್ಲಿಯೇ ಪತ್ರ

ಗಳನ್ನು ಬರೆಯುವರು. ಮರಾಠಿಯಲ್ಲಿ ಕರ್ಮಣಿ ಪ್ರಯೋಗ ಮಾಡುವಾಗ ಕರ್ಮ, ಕ್ರಿಯಾಪದಗಳ ಲಿಂಗದ ತೊಡಕು ವಿಚಿತ್ರವಾದುದು. ಮಾದರಿಯಾಗಿ ಹೇಳಬೇಕೆಂದರೆ ನಮ್ಮ ಬೀಗರು ಬರೆದ ಮರಾಠಿ ಪತ್ರ ಒಂದರಲ್ಲಿ "ವಧು ನೇ ಮಸ್ಥ ಕೇಲಾ ಆಹೆ" ಎಂದು ಬರೆದಿದ್ದಿತು. ಅವರ ಈ ಮರಾಠಿಯ ಅಜ್ಞಾನಕ್ಕಾಗಿ ನಾನು ತುಂಬ ನಕ್ಕುಬಿಟ್ಟೆ.

ಈಗ ಈ ಹರಿಶ್ಚಂದ್ರ ನಾಟಕವನ್ನು ದೇವನಾಗರಿಯಲ್ಲಿ ಬರೆದಿದ್ದರೂ ನಾನು ಪೂರ್ಣವಾಗಿ ಅದನ್ನು ಓದಿದೆ. ಅದನ್ನು ತಯಾರಿಸಿದವರ ಹುಂಬ ತನಕ್ಕಾಗಿ ಅಂದರೆ ಭಾಷೆಯ ಅಜ್ಞಾನಕ್ಕಾಗಿ ಎತ್ತಿ ಕಟ್ಟಿ ಮಾತನಾಡಿದೆ. ಬೇಸಗೆಯು ಕಳೆಯಿತು. ಆಲೆಯ ಮನೆಗಳ ಬೆಲ್ಲದ ವಾಸನೆಯೂ ವಾತಾವರಣದಿಂದ ಇಲ್ಲವಾಯಿತು. ಬಿಸಿಲೂ ತಗ್ಗಿ, ಆಷಾಢದ ಮಳೆಗಾಲವು ಬಂತು. ನಮ್ಮ ಮನೆ ಎಂತಹದಿದ್ದಿತೆಂಬುದನ್ನು ಈ ಮೊದಲೇ ಹೇಳಿದ್ದೇನೆ. ಮುಂಗಾರಿಯ ಮಳೆ, ಗಾಳಿ, ಬೆಳಕುಗಳು ನಮ್ಮ ಮನೆಯಲ್ಲಿ ನುಗ್ಗತೊಡಗಿದವು. ಅಲ್ಲಿಯೇ ಇರುವ ನಮ್ಮೆಲ್ಲರಿಗೆ ತುಂಬಾ ತೊಂದರೆಯಾಯಿತು. ಅಂದು ಶಾಲೆಯ ಕಟ್ಟಡದಲ್ಲಿ ನಾವು ಮಲಗಿ ರಾತ್ರಿಯನ್ನು ಕಳೆದೆವು.

ಶ್ರಾವಣ ಮಾಸದಲ್ಲಿ ಒಂದು ವಿಶಿಷ್ಟವಾದ ವಾರ್ತೆ ನಮಗೆ ಬಂದಿತು. ದಾರಿಯ ಊರಾದುದರಿಂದ ಡೆಪ್ಯೂಟಿ ಎಜುಕೇಶನ್ ಇನ್‌ಸ್ಪೆಕ್ಟರರು ಗುಡಸಕ್ಕೆ ಮೇಲಿಂದ ಮೇಲೆ ಬರುತ್ತಿದ್ದರೆಂದು ಹೇಳಿದೆನಲ್ಲವೇ ? ನಮ್ಮ ಹಣಮಣ್ಣ ಬಂದ ಮೇಲೆ ಹುಡುಗರ ಸಂಖ್ಯೆ ಶಾಲೆಯಲ್ಲಿ ಹೆಚ್ಚೇನೂ ಆಗಿರಲಿಲ್ಲ. ಆ ಶಾಲೆ ನಮ್ಮ ಅಣ್ಣನಿಗೆ ಬೇಡವಾಗಿತ್ತಾದ್ದರಿಂದ ಅವನು ಉದಾಸೀನತೆಯಿಂದಲೇ ಕೆಲಸ ನಡೆಯಿಸಿದ್ದನು. ಈ ಕಾರಣದಿಂದಲೋ ಅಥವಾ ಎರಡನೇ ವರ್ಷದ ಟ್ರೇನಿಂಗ್ ಕಾಲೇಜಿನಿಂದ ಪಾಸಾಗಿ ಬಂದ ಒಳ್ಳೆಯ ಮಾಸ್ತರರನ್ನು ಈ ಊರಲ್ಲಿ ಕೊಳೆಯಿಸಬಾರದೆಂದೋ ಡೆಪ್ಯೂಟಿ ಎಜುಕೇಶನಲ್ ಇನ್‌ಸ್ಪೆಕ್ಟರ್‌ರಾದ ಶ್ರೀಮಾನ್ ಗೋವಿಂದ ವೆಂಕಟೇಶ ದೇಶಪಾಂಡೆಯವರು ಪ್ರಯತ್ನಿಸಿ ಹಣಮಣ್ಣನನ್ನು ಮೂಡಲಗಿ ಎಂಬ ದೊಡ್ಡ ಊರಿನ ಶಾಲೆಗೆ ವರ್ಗ ಮಾಡಿದರು. ನಮ್ಮ ಹಣಮಣ್ಣನಿಗೆ ತುಂಬ ಸಂತೋಷವಾಯಿತಾದರೂ ನಮಗೆ ಆ ಕಬ್ಬಿನ, ಬೆಲ್ಲದ, ಹಳ್ಳಿ ನದಿಯ ಊರನ್ನೂ, ಒಳ್ಳೆಯ ಜನರನ್ನೂ ಬಿಟ್ಟು ಹೋಗುವುದು ವ್ಯಸನವೆನಿಸಿತು. ಆದರೂ ನಿರ್ವಾಹವಿಲ್ಲದೆ ನಮ್ಮೂರಿಂದ ಚಕ್ಕಡಿಯನ್ನು ತರಿಸಿ, ನಾವೆಲ್ಲ ಹೊರಟುನಿಂತೆವು. ಹೋಗುವಾಗ ಆ ಊರಿನ ಜನರು ಕೊಟ್ಟ ಬೆಲ್ಲ, ಕೆನೆಬೆಲ್ಲ, ಕಾಕಂಬಿ, ಚರಕಿಗಳಿಂದಲೇ ನಮ್ಮ ಅರ್ಧ ಚಕ್ಕಡಿ ತುಂಬಿಹೋಗಿದ್ದಿತು. ಎಲ್ಲರೊಡನೆಯೂ ಸ್ನೇಹದಿಂದ ಬಾಳಿದ ನನ್ನನ್ನು ಕಳಿಸಬೇಕಾದರೆ ಅಲ್ಲಿಯ ಅನೇಕ ಜನರಿಗೆ ಕಣ್ಣಲ್ಲಿ ನೀರೊಗ್ಗಡಿತು.

ಕೌನ್ ಕಹತಾ ಹೈ ತುಝೆ ಮೈನೆ ಭುಲಾ ರಖಾ ಹೈ?"
ಯಾರು ಹೇಳುತ್ತಾರೆ ನಾ ನಿನ್ನ ಮರೆತಿದ್ದೆನೆಂದು ?

ಮೂಲ ಮರಾಠಿ : ಮೋಹಳಕರ
ಕನ್ನಡಕ್ಕೆ ; ಮುಕುಂದ ಜೋಷಿ

ಯೌವನದ ಸುಳಿವು ಹತ್ತಿದ ಅನಾಮಿಕ ಚಡಪಡಿಕೆ ಇತ್ಯಾದಿಗಳು ಆಗ ಆನೇ ಪ್ರಾರಂಭವಾಗಿದ್ದವು. ಮನಸ್ಸು ಸ್ವರಗಳ ಧ್ಯಾಸದಲ್ಲಿ ತೊಯ್ದು ಸಿನಾ ಸುವದನ್ನು ಆಗಷ್ಟೇ ಕಲಿತದ್ದು. ಅದರಲ್ಲಿ ಮಳೆಗಾಲದ ಒಂದು ಸಂಜೆ ನಂತ ಕಥೆಯಲ್ಲಿನ ರಾಜಪುತ್ರನಂತೆ ತಲತ ತನ್ನ ಮಧುರ ಸ್ವರದಲ್ಲಿ ಗುಲಾಬಿ ಗಲ್ಲಗಳ ಮತ್ತು ಮದಿರಾಮಯ ಧುಂಧಿಯ ಕಣ್ಣುಗಳ ಪ್ರೇಮಗೀತೆ ಹಾಡು ತ್ತ ಹಾಡುತ್ತ ಬದುಗನಲ್ಲಿ ಬಂದ.

"ಚಾಂದ್ ಮೇರೆ ಚಾಂದ್ ಸೇ ಶರಮಾ ಗಯಾ...."

ಹೋಟೆಲಿನಲ್ಲಿಯು ಸಂಜೆ ಮೂಗಿ ದೀಪ ಹತ್ತಿದ್ದವು. ಹೊರಗೆ ರಸ್ತೆಯಲ್ಲಿ ತುಂತು ರು ಮಳೆ. ಒಳಗೆ ಗಿರಾಕಿಗಳ ಗೊಂದಲ ಮತ್ತು ಕಪ್ಪು ಬಸಿಗಳ ಸಪ್ಪಳ. ನಡು ವೆಯೇ 'ಏಕ ಇಸಮ್ ಚಾರ್ ಆನಾ' ಅನ್ನುವ ಕರ್ಕಶ ಕೂಗು. ಆದರೆ ಎಲ್ಲ ವೂ-ಇದೆಲ್ಲವೂ-ತಲತನ ಸ್ವರದಲ್ಲಿ ಮುಳುಗಿ ಹೋಗಿತ್ತು. ಆತ ತನ್ನಲ್ಲಿ ಮಗ್ನ ನಾಗಿ ಏಕಾಗ್ರಚಿತ್ತದಿಂದ ಹಾಡುತ್ತಿದ್ದ.

"ಜುಲ್ಫ್ ಮೆ ರಂಗತ್ ಹೈ ಕಾಲೀ ರಾತ್ ಕೀ
ರಾತ್ ಭೀ ಕೈಸೀ ಬರಸಾತ್ ಕೀ....॥"

ಆ ಮಳೆಗಾಲದ ಸಂಜೆ; ಕೂದಲುಗಳಂತೆ ಮನಸ್ಸು ಹಾರಾಡುತ್ತಿತ್ತು. ಹಾಡನ್ನು ಒಂದು ಸಲ, ಎರಡು ಸಲ, ಮೂರು ಸಲ ಕೇಳಿಯೂ ಮನಸ್ಸಿಗೆ ತೃಪ್ತಿಯಾಗ ಲಿಲ್ಲ. ಕೌಂಟರದ ಮೇಲಿನ ಆ ಮುಸಲ್ಮಾನ ತರುಣನಿಗೆ ಪುನಃ ಪುನಃ ಸನ್ನೆ ಮಾಡುತ್ತಿದೆ: ಇನ್ನೊಂದು ಸಲ... ಇನ್ನೊಂದೇ ಸಲ. ಕೊನೆಗೆ ನನ್ನ ಕಡೆಗೆ

ನೋಡಿದೇ ಆತ 'ಬಸ್' ಎಂದು ಕೈ ಮಾಡಿ ಕೆಲಹೊತ್ತು ದುಡ್ಡು ಕೊಡು ತೆಗೆದು ಕೊಳ್ಳುವದರಲ್ಲಿ ವ್ಯಸ್ತನಾದ. ನಾನು ಸಿಟ್ಟಿನಿಂದ ಎದ್ದು ಕೌಂಟರದ ವರೆಗೆ ಬಂದೆ. ನನ್ನಿಂದ ಹಣ ತೆಗೆದು ಕೊಳ್ಳದಿಯೇ ಇವನೆಂದ, "ಯಾಕೆ ದೋಸ್ತ, ಯಾವ ಹಾಡು ಕೇಳಬೇಕೋ ಅದನ್ನು ಇನ್ನೂ ಕೇಳಿಯೇ ಇಲ್ಲ. ಮತ್ತು ಹಾಗೇ ಹೊರಟು ಬಿಟ್ಟೆಯಲ್ಲಾ... ಕೂಡು." ನಂತರ ಆತ ರೆಕಾರ್ಡು ತಿರುವಿ ಆದರ ಹಿಂಬದಿಗಿದ್ದ ಹಾಡು ಹಚ್ಚಿದ. ಆ ಹೊಸ ಗಾಯಕನ ಮೊದಲ ನೆಯ ಹಾಡು ಕೇಳಲು ಸಿಕ್ಕ ಸಂಭ್ರಮದಲ್ಲಿ ರೆಕಾರ್ಡಿನ ಹಿಂಬದಿಗೆ ಕದಾಚಿತ್ ಅವನದೇ ಇನ್ನೊಂದು ಹಾಡು ಇರಬೇಕೆಂಬುದರ ನೆನಪೂ ಇರಲಿಲ್ಲ. ಮತ್ತು ನಂತರ ತಲತ ಹಾಡಲು ಪ್ರಾರಂಭ ಮಾಡಿದ್ದು ಆ ಪ್ರೇಯಸಿಯ ಕೇವಲ ಚಿತ್ರದಿಂದ ತೃಪ್ತಿ ಆರದ ಪ್ರೇಮಿಯ ವ್ಯಾಕುಲ ಮನೋಗತ:

ತಸವೀರ ತೇರಿ ದಿಲ್ ಮೇರಾ
ಬಹಲಾ ನ ಸಕೇಗಿ

ನಾವು ಮಾತಾಡಿದರೂ ಚಿತ್ರದಲ್ಲಿನ ಆಕೆ ಸುಮ್ಮನಿರುವಳು. ಎದೆಗೆ ಅಂಟಿಸಿ ಕೊಂಡರೂ ಏನೂ ಅನ್ನಳು. ಅರೇ? ಯಾವಳು ಚಡಪಡಿಸಲು ಹಚ್ಚುವದಿಲ್ಲ ವೋ, ತಳಮಳಿಸಲು ಹಚ್ಚುವದಿಲ್ಲವೋ. ಅವಳು ಸುಖವನ್ನಾದರೂ ಏನು ಕೊ ಟ್ಟಾಳು? ಎಷ್ಟು ಕೊಟ್ಟಾಳು?

ಮೈ ಬಾತ್ ಕರೂಂಗಾ ತೋ। ಯೇ ಖಾಮೋಶ್ ರಹೇಗಿ!
ಸೀನೇಸೇ ಲಗಾವೂಂಗಾ ತೋ। ಯೇ ಕುಛ್ ನ ಕಹೇಗಿ।

ಆ ರಾತ್ರಿ ಹೊಟೆಲ ಮುಚ್ಚುವವರೆಗೆ ತಲತ ಕೇವಲ 'ತಸವೀರ್ ತೇರೀ' ಹಾಡು ತ್ತಿದ್ದ. ಆ ದಿನದಿಂದ ಅವನು ನನ್ನನ್ನು ಎಷ್ಟೊಂದು ಬೆನ್ನಟ್ಟಿದನೆಂದರೆ ಮುಂ ಜಾನೆ–ಮಧ್ಯಾನ್ಹ–ಸಂಜೆ; ಕ್ಲಾಸಿನಲ್ಲಿ – ಮನೆಯಲ್ಲಿ – ರಸ್ತೆಯಲ್ಲಿ; ಕಿವಿಯಲ್ಲಿ – ಮನದಲ್ಲಿ – ತುಟಿಯಲ್ಲಿ ಒಂದೇ;

ಪರ್‌ಛಾಯಿ ತೋ ಇನ್ಸಾನ್ ಕೇ। ಕಾಮ್ ಆ ನ ಸಕೇಗಿ
ತಸವೀರ್ ತೇರಿ। ದಿಲ್ ಮೇರಾ। ಬಹಲಾ ನ ಸಕೇಗಿ

(ನೆರಳು ಮನುಷ್ಯನಿಗೆ ನೆರಳಾಗುವದಿಲ್ಲ
ನಿನ್ನ ಚಿತ್ರ ಮನಸ್ಸನ್ನು ರಮಿಸುವಂತಿಲ್ಲ)

ಆ ಪ್ರೇಮಗೀತ ಯಾರ್ಯಾರನ್ನು ಯಾವ್ಯಾವ ರೀತಿ ಹುಚ್ಚಾಗಿಸಿತ್ತೋ ಯಾರಿಗೆ ಗೊತ್ತು ? ನಮ್ಮ ಕ್ಲಾಸಿನಲ್ಲಿ 'ರೋಮ್ಯಾಂಟಿಕ ನೇಚರಿ'ನ ಒಬ್ಬ ಮಾರವಾಡಿ ಹುಡುಗ ಮುಖದೆದುರು ರೆನ್ ಮತ್ತು ಮಾರ್ಟಿನ್ನನ ವ್ಯಾಕರಣದ ಪುಸ್ತಕ ಹಿಡಿದು ಸತತ ಗುಣಗುಣಿಸುತ್ತಿದ್ದ. 'ತಸವೀರ್ ಮೇರೀ........'. ಒಂದು ದಿನ ಆತ ಅಚಾನಕ್ 'ಚಕ್' ಎಂದು ಪುಸ್ತಕಕ್ಕೆ ಮುದ್ದಿಟ್ಟ. ಆಗ ನಮ್ಮ ಇಂಗ್ರೇಜಿ ಮಾಸ್ತರರು ಭಡಾಭಡಾ ಅವನ ಕಡೆಗೆ ಹೋಗಿ ಅವನ ಕೈಯಲ್ಲಿನ ಪುಸ್ತಕ ಕಿತ್ತೆಳೆದುಕೊಂಡರು. ಟೇಬಲ ಸಮೀಪ ಒಂದು ಪುಸ್ತಕದ ಪುಟಗಳನ್ನು ತಿರುವುತ್ತಿದ್ದಾಗ ಅದರಲ್ಲಿಂದ ಟಪ್ ಎಂದು ಬಂದು ಫೋಟೋ ಕೆಳಗೆ ಬಿತ್ತು. ಅದನ್ನವರು ನಮ್ಮೆದುರು ಹಿಡಿದದ್ದೇ ತಡ ಜನ್ಮ ಜನ್ಮಾಂತರದ ನೆನಪು ಹತ್ತಿದಂತೆ ನಾವೆಲ್ಲ ಒಂದೇ ಸ್ವರದಲ್ಲಿ ಹರ್ಷದಿಂದ ಕೂಗಿದೆವು 'ರೆSS ಹಾSS ನಾSS'.

○

ತಲತನನ್ನು ಕೇಳಲು ನಾವು ಎಲ್ಲೆಲ್ಲಿಂದಲೋ ಬಂದು ಆ ಹೋಟೆಲಿನಲ್ಲಿ ಸೇರಲು ಪ್ರಾರಂಭ ಮಾಡಿದ್ದೆವು. ಶಾಲೆ-ಕಾಲೇಜಿನ ಹುಡುಗರಲ್ಲದೆ ಎಷ್ಟೋ ಅಪರಿಚಿತ ಹಿಂದೂ-ಮುಸಲ್ಮಾನ ಯುವಕರು. ಕೆಲವರು ಸೈಗಲನ ಭಕ್ತರಾದರೆ ಕೆಲವರು ಪಂಕಜ ಮಲಿಕನ ಆರಾಧಕರು. ಕೆಲವರಿಗೆ ರಫಿಯ ಹುಚ್ಚಿದ್ದರೆ ಕೆಲವರಿಗೆ ಮುಖೇಶನ ಹುಚ್ಚು. ಜಿ.ಎಂ. ದುರಾಣಿ, ಖಾನ ಮಸ್ತಾನಾ, ಅರುಣ ಕುಮಾರ, ಕೆ.ಸಿ.ಡೆ., ಎಸ್. ಜಿ. ಬಾತಿಶ, ಕಮಲದಾಸ ಗುಪ್ತಾ ಇವರ ಮೇಲೆ ಪ್ರೇಮ ಮಾಡುವ ಜನರೂ ಕೆಲವರಿದ್ದರು. ಖರೇ ಹೇಳಬೇಕೆಂದರೆ ಎಲ್ಲರದೂ ಎಲ್ಲ ಗಾಯಕ-ಗಾಯಿಕೆಯರ ಮೇಲೆ ಪ್ರೇಮ. ಯಾಕೆಂದರೆ ಸ್ವರ ಸಂಸಾರದ ಮೇಲೆಯೇ ಅವರ ಪ್ರೇಮ. ಸೈಗಲರ ಶಬ್ದದಲ್ಲಿ ಹೇಳಬೇಕೆಂದರೆ ಎಲ್ಲರೂ 'ಆವಾಜ ಕಿ ದುನಿಯಾ ಕೆ ದೋಸ್ತ'. 'ಚೌದಹವಿ ಮಂಜಿಲ್ ಸೆ ಜಾಲಿಮ್ ಆಗಯಾ' ಎಂದು ರೋಮ್ಯಾಂಟಿಕ ಆಹ್ವಾನ ಕೊಡುತ್ತ ತಲತ ನಮ್ಮ ಗೆಳೆಯರ 'ಮಹಫಿಲ'ದಲ್ಲಿ ಯಾವಾಗ ಹೆಜ್ಜೆ ಇಟ್ಟನೋ ಆಗ ನಮ್ಮ ಮನಸ್ಸು ತರಂಗದ ಮೇಲೆ ಹೊಯ್ದಾಡತೊಡಗಿತು. ತಲತನನ್ನು ಎಷ್ಟು ಕೇಳಿದರೂ ಅಷ್ಟು ಕಡಿಮೆ ಅನ್ನುವಂತಾಗಿತ್ತು ಎಲ್ಲರಿಗೂ. ಆ ಕಾಲದಲ್ಲಿ ಹೋಟೆಲಿನಲ್ಲಿ ಹೆಚ್ಚಾನುಹೆಚ್ಚು ಸಿನೇಮಾ ಹಾಡುಗಳೇ ಕೇಳಬರುತ್ತಿದ್ದವು. ಆದರೆ ಸೈಗಲ, ಜಗಮೋಹನ, ಹೇಮಂತ ಕುಮಾರ, ತಲತ, ಮುಖೇಶ, ಜೂಥಿಕಾರಾಯ ಆದಿ ಗಾಯಕ-ಗಾಯಿಕೆಯರ ಲೋಕಪ್ರಿಯ ಖಾಸಗೀ (ಸಿನೇಮಾದಲ್ಲಿಲ್ಲದ) ಹಾಡುಗಳ ರೆಕಾ

ಪುಗಳು ಆರಿಸಿದಂತಹ ಕೆಲವೇ ಹೊಟೇಲುಗಳ ಸಂಗ್ರಹದಲ್ಲಿದ್ದವು. ಅಂಥ ಹಾಡುಗಳನ್ನು ಕೇಳುವದಕ್ಕಾಗಿ ಒಂದು ಹೊಟೇಲಿನಿಂದ ಇನ್ನೊಂದು ಹೊಟೇಲಿಗೆ ಅಲೆದಾಡಬೇಕಾಗುತ್ತಿತ್ತು. 'ತುಮು ಕಬ ತಕ ಪ್ಯಾರ ಛುಪಾಓಗಿ', 'ಭಲಾಥಾ ಅಪನಾ ಬಚಪನ' ಈ ಹೇಮಂತ ಕುಮಾರನ ಮತ್ತು 'ದಿಲ ದೇಶಕ ದರ್ದಲಿಯಾ ಮೈನೆ', 'ಮುಝುನ ಸಪನೊಂಸೆ ಬಹಲಾವೊ' ಈ ಜಗಮೋಹನನ ಹಾಡುಗಳನ್ನು ಹೀಗೆಯೇ ಅಲೆದಾಡುತ್ತ ಕೇಳಿದ್ದು ಮತ್ತು ಕೇಳುತ್ತ ಅಲೆದಾಡಿದ್ದು.

ಮುಕೇಶ ಮತ್ತು ರಫಿ ಆಗ ತಾನೇ ಸಿನೇಮಾದಲ್ಲಿ ಹಾಡಲು ಪ್ರಾರಂಭ ಮಾಡಿದ್ದರೂ ಕೂಡ ತಮ್ಮ ಪ್ರಶಂಸಕರ ವರ್ಗವನ್ನು ಬಹಳ ಬೇಗ ನಿರ್ಮಿಸಿಕೊಂಡಿದ್ದರು. ತಲತ ಮಾತ್ರ ಅಲ್ಲಿಯವರೆಗೆ ರಜತ ಪರದೆಯ ಮೇಲೆ ಹಾಡಿರಲಿಲ್ಲ. ಅವನ ಸಿನೇಮಾದಲ್ಲಿಲ್ಲದ ಖಾಸಗೀ ಹಾಡುಗಳು ಮನಸ್ಸನ್ನು ಮೋಹಿಸಿದ್ದವು-ಆಕ್ರಮಿಸಿದ್ದವು. 'ಪಂಛೀSS' ಎಂದು ಎಲ್ಲಿಂದಲೋ ಕರೆದರೂ ಹೆಜ್ಜೆಗಳು ನಮಗೆ ಅರಿವಾಗದಂತೆಯೇ ಹಿಂದೆ ಹಿಂದೆ ಸರಿಯುತ್ತಿದ್ದವು. ನಂತರ ಆತ ಮೆಲ್ಲಗೆ ಸಂತೈಸುತ್ತಿದ್ದ:

> "ಪಂಛೀ ಪ್ರೀತ ಕಿ ರೀತ ನಿಭಾ
> ಪ್ರೀತ ಕಿ ರೀತ ನಿಭಾ
> ಧೀರೇ ಧೀರೇ ಘಾವ ಭರೇಂಗೆ
> ದರ್ದ ಛಿಪಾಯೆ ಜಾ
> ಪ್ರೀತ ಕಿ ರೀತ ನಿಭಾ"
>
> (ಹಕ್ಕಿಯೇ ಪ್ರೀತಿಯ ರೀತಿ ನಿಭಾಯಿಸು
> ಪ್ರೀತಿಯ ರೀತಿ ನಿಭಾಯಿಸು
> ಮೆಲ್ಲ ಮೆಲ್ಲಗೆ ಗಾಯ ಮಾಯುವದು
> ದರ್ದ (ದುಃಖ) ಅಡಗಿಸು
> ....ಹಕ್ಕಿಯೇ........)

ಇಂತಹ ಸಾಲುಗಳ ಮೇಲೆ ನಮ್ಮನ್ನು ನಾವೇ ನಿವಾಳಿಸಿ ಬಿಡಬೇಕು ಅನ್ನಿಸುತ್ತಿತ್ತು. ನಂತರ ಕೇಳಲು ಸಿಕ್ಕರೂ ತಲತ ತನ್ನ ಪ್ರಾರಂಭದ ಹಾಡುಗಳನ್ನು ಅದಕ್ಕೂ ಮೊದಲು - ಐದಾರು ವರ್ಷ ಮೊದಲು ಹಾಡಿದ್ದ. ಬರೀ ಅಂದರೆ ತನ್ನ ಕಲಾ ಜೀವನದ ಸಾಯಂಕಾಲ ಹಾಡಬೇಕಾದ ಹಾಡುಗಳನ್ನು ಆತ ಉದಯಿಸುವಾಗಲೇ ಹಾಡಿದ್ದ—

> "ಬನ ಜಾವೂಂಗಾ ಕ್ಯಾ ಸೆ ಕ್ಯಾ ಮೈ

ಇಸಕಾ ಕುಛಛ್ಯಾನ ನಹಿಂಥಾ
ಸಬ ದಿನ ಏಕ ಸಮಾನ ನಹಿಂಥಾ"

ತಲತ್‌ನ ದಿನಗಳು ಯಾವಾಗಲೂ ಇಂದಿನಂತಿರಲಿಲ್ಲ. ಒಂದಾನೊಂದು ಕಾಲಕ್ಕೆ ಅವನೂ ಸುಖ ನಗರದ ರಾಜನಿದ್ದ.

"ಮೈಂಥಾ ಸ್ವಾಮಿ ಸುಖ ನಗರೀ ಕಾ
ದುಃಖ ಕಾ ತೋ ಮೆಹಮಾನ ನಹಿಂ ಥಾ
ಸಬ ದಿನ ಏಕ ಸಮಾನ ನಹಿಂ ಥಾ"
(ನಾನಿದ್ದೆ ಸುಖ ನಗರದ ಒಡೆಯ
ದುಃಖದ ಅತಿಥಿ ಇರಲೇ ಇಲ್ಲ
ಎಲ್ಲ ದಿನಗಳು ಹೀಗಿರಲಿಲ್ಲ.)

—೨—

ದಿನಗಳ ಮಾತೇ ಆಡಬೇಕಾದರೆ ಅವು ಸೈಗಲನ ದಿನಗಳಿದ್ದವು. 'ದೇವದಾಸ'ನಾಗಿ ಆತ 'ದುಃಖ ಕೆ ದಿನ ಬೀತತ ನಾಹಿ' ಎಂದು ಹಾಡಿದಾಗಿನಿಂದ ದುಃಖದ ದಿನಗಳು ಸರಿಯುದಂತೆಯೇ ಆಗಿದ್ದವು. ಇಡೀ ವಾತಾವರಣ ಅವನ ದುಃಖ ಪೂರ್ಣ ತುಂಬಿದ ಸ್ವರದಿಂದ ವ್ಯಾಪ್ತವಾಗಿತ್ತು. ಕೇವಲ ಕೇಳುವವರೇ ಅಲ್ಲ ಹಾಡುವವರೂ ಕೂಡ ಸೈಗಲನ ಸ್ವರದಿಂದ ಗದ್ಗದಿತರಾಗಿದ್ದರು. ಗೊತ್ತಿದ್ದೋ ಇಲ್ಲದೆಯೋ ಅವನ ಅನುಕರಣ ಮಾಡುತ್ತಿದ್ದರು. 'ಬರಬಾದ ಮೈಂ ಯಂಹಾ ಹೂಂ, ಆಬಾದ ತೂ ಕಂಹಾ ಹೈ' ಎಂದು ವ್ಯಾಕುಲನಾಗಿ ನೂರಜಹಾನಳಿಗೆ ಕೇಳುವ ಸುರೇಂದ್ರನೇ ಇರಲಿ ಅಥವಾ 'ಆಂಸೂ ನ ಬಹಾ ಫರಿಯಾದ ನ ಕರ, ದಿಲ ಜಲತಾ ಹೆ ತೋ ಜಲನೆ ದೆ' ಎಂದು ತನ್ನನ್ನೇ ತಾನು ಸಮಜಾಯಿಸಿಕೊಳ್ಳುವ ಮುಖೇಶನೇ ಇರಲಿ ಆ ಕಾಲದ ಜಗಮೋಹನ, ರಫಿ ಮುಂತಾದವರ ಮೇಲಷ್ಟೇ ಅಲ್ಲ ನಂತರದ ಅನೇಕ ಗಾಯಕರ ಮೇಲೂ ಒಂದಿಲ್ಲೊಂದು ರೀತಿಯಿಂದ ಸೈಗಲನ ಪ್ರಭಾವ ಇದ್ದೇ ಇತ್ತು. 'ಜಗಮಗ ಜಗಮಗ ಕರತಾ ನಿಕಲಾ ಚಾಂದ ಪೂನಮ ಕಾ ಪ್ಯಾರಾ' ಎಂದು ಉದಾಸಾ ಸ್ವರದಲ್ಲಿ ಹಾಡುವ ಕಿಶೋರನೇ ಇರಲಿ ಅಥವಾ 'ಪ್ರೀತಮ ಆನ ಮಿಲೋ' ಎಂದು ಆರ್ತನಾಗಿ ಹಾಡುವ ಸಿ. ಎಚ್. ಆತ್ಮಾನೇ ಇರಲಿ, ತನ್ನನ್ನು ತಾನು ಸರಿಯಾಗಿ ಗುರುತಿಸಿಕೊಳ್ಳದ ಸಿ. ಎಚ್. ಆತ್ಮಾ ಕಾಲದ ಪ್ರವಾಹದಲ್ಲಿ ವೇಗದಿಂದ ಕೊಚ್ಚಿ ಹೋದ. ಆದರೆ ತೇಲಿದರು ಈಸಿದರು ತಮ್ಮದೇ ಆದ ಸ್ವತಂತ್ರ ಶೈಲಿ ನಿರ್ಮಿಸಿಕೊಂಡ ಮುಖೇಶ, ರಫಿ, ಕಿಶೋರ ಮತ್ತು ತಲತ.

ಸೈಗಲ ಯುಗದ ಪ್ರಾರಂಭವಾದಾಗ ೨೪ ಫೆಬ್ರುವರಿ ೧೯೨೮ ರಂದು ಲಖನೋದಲ್ಲಿ ಹುಟ್ಟಿದ ತಲತ ೧೦-೧೧ ವರ್ಷದವನಿರಬೇಕು. ನೋಡಲು ಕೆಂಪು-ದೇಖಣಾ ಮತ್ತು ಹಾಡಲು ಮಧುರ ಕಂಠ. ಸೈಗಲನ ಹಾಡುಗಳು ಆವನ್ನು ಜಿನ್ನಟ್ಟಿ ವ್ಯಾಪಿಸಿ ಬಿಟ್ಟವು. ಮತ್ತು ಲಖನೋದ ವ್ಯಾಪಾರಿಯ ಆ ಹುಡುಗ ಗಾಯಕ. ನಟನಾಗುವ ಕನಸು ಕಾಣತೊಡಗಿದ. ತಲತನ ಅಬ್ಬಾ ಜಾನ (ತಂದೆ) ಸಾವಿರಾರು ಜನರ ಸಭೆಯಲ್ಲಿ ತಮ್ಮ ಉಚ್ಚ ಕಂಠದಿಂದ ಇಕಬಾಲನ 'ಸಾರೆ ಜಂಹಾಸೆ ಅಚ್ಛಾ ಹಿಂದೋಸ್ತಾಂ ಹಮಾರಾ' ಹಾಡುವಾಗ ಲಾವುಡ ಸ್ಪೀಕರದ ಅವಶ್ಯಕತೆ ಕೂಡ ಬೇಕಾಗುತ್ತಿರಲಿಲ್ಲ. ಸ್ವರದ ಗುತ್ತಿಗೆ ಅವರಿಂದಲೇ ತಲತ ಪಡೆದರೂ ಆತ ಯಾವಾಗಲೂ ಹಾಡುವದು ಸನಾತನಿ ವೃತ್ತಿಯ ಅಬ್ಬಾಜಾನರಿಗೆ ಎಳ್ಳಷ್ಟು ಮಂಜೂರಿರಲಿಲ್ಲ. ಶಿರೋಶಾಯರಿಯ (ಕಾವ್ಯದ) ಮತ್ತು ತವಾಯಫರ (ನೃತ್ಯ ಮತ್ತು ಹಾಡಿನಿಂದ ರಮಿಸುವ ಹೆಂಗಸರು) ಶಹರಾದ ಲಖನೋದಲ್ಲಿ ಹುಟ್ಟಿದ ಸೈಗಲ ಹುಚ್ಚಿನ ತಲತನಿಗಂತೂ ಗಜಲದ ಧ್ಯಾಸ. ಶಾಲೆ-ಕಾಲೇಜಿನ ಹೊತ್ತು ಬಿಟ್ಟರೆ ಉಳಿದೆಲ್ಲ ವೇಳೆ ಗ್ರಾಮೋಫೋನ ಮತ್ತು ರೇಡಿಯೋದ ಎದುರು ಕುಳಿತು ಸೈಗಲನನ್ನು ಕೇಳುವದರಲ್ಲೇ ಕಳೆಯುತ್ತಿತ್ತು. ಸೈಗಲನ ಸಿನೇಮಾಗಳನ್ನಂತೂ ಆತ ಎಂದೂ ತಪ್ಪಿಸುತ್ತಿರಲಿಲ್ಲ. ಮತ್ತೆ ಮತ್ತೆ ನೋಡುವದು ಮತ್ತು ಹಾಡುಗಳನ್ನು ಪಾಠ ಮಾಡುವದು. ಸೈಗಲನ ತುಂಬಿದ ಕಂಠದಿಂದ ಹೊರಟ ಹಾಡುಗಳನ್ನು ಆಗ ತನ್ನ ಮಧುರ ಕಂಪಿಸುವ ಕಂಠದಿಂದ ಹಾಡುತ್ತಿದ್ದ ಸೈಗಲನ ಗಜಲಗಳನ್ನಂತೂ ಹುಬೇ ಹುಬ ಸೈಗಲನಂತೆಯೇ ಹಾಡುತ್ತಿದ್ದ.

ಶಾಲೆ-ಕಾಲೇಜಿನಲ್ಲಿಯ ಮತ್ತು ಗಲ್ಲಿ ಬೋಳದಲ್ಲಿಯ ಹುಡುಗ-ಹುಡುಗಿಯರ ಮೆಚ್ಚಿನ ತಲತ ನಂತರ ಲಖನೋ ರೇಡಿಯೋದ ಮೇಲೂ ಹಾಡತೊಡಗಿದ. ಈ ನಡುವಿನ ಕಾಲದಲ್ಲಿ ಆತ ಅಬ್ಬಾಜಾನರ ವಿರೋಧ ಕಡೆಗಣಿಸಿ ಮಾರಿಸ ಸಂಗೀತ ವಿದ್ಯಾಲಯದಲ್ಲಿ ಸಂಗೀತದ ಶಿಕ್ಷಣವನ್ನೂ ಪಡೆದಿದ್ದ. ಆದರೆ ಕಾಲೇಜಿನಲ್ಲಿ ಆತ ವಿಜ್ಞಾನದ ವಿದ್ಯಾರ್ಥಿ. ಇಂಟರ ಸಾಯನ್ಸ ಪರೀಕ್ಷೆ ಕೊಟ್ಟ ಮೇಲೆ ಆತ ಕಲಕತ್ತೆಗೆ ಹೋದಾಗ ಅಲ್ಲಿ ಪೃಥ್ವೀಶ ಬರುವಾ ಅವರಿಗೆ ನಟನೆಂದು ಪಸಂದ ಬಿದ್ದ. ಆದರೆ ಅವನ ವಯಸ್ಸಿಗೆ ಅನುಗುಣವಾದ ನಟಿಯೇ ದೊರಕಲಿಲ್ಲ. ಅದೇನು ಇಂದಿನಂತಹ ಟೀನಏಜರ್ಸರ ಕಾಲವೇ ? ಕಲಕತ್ತೆಯಿಂದ ಮರಳಿದ ಮೇಲೆ ಆತ ಮತ್ತೆ ಕಾಲೇಜಿಗೆ ಹೋಗಲಿಲ್ಲ. ಸಂಗೀತಕ್ಕಾಗಿಯೇ ತನ್ನನ್ನು ಸಮರ್ಪಿಸಿಕೊಂಡ. ಹಾಡುವ 'ಮಹಫಿಲ' (ಸಂಗೀತ ಸಭೆ) ಮಾಡುತ್ತ, ಅಲೆದಾಡತೊಡಗಿದ-ಒಮ್ಮೆ ದಿಲ್ಲಿಯಾದರೆ ಮತ್ತೊಮ್ಮೆ ಲಾಹೋರ. ಹೊಸ ಆವಾಜಿನ ಶೋಧ

ಕ್ಕಾಗಿ ಒಮ್ಮೆ ಎಚ್. ಎಮ್. ವ್ಹಿ. ಅವರು ಕಲಕತ್ತೆಯಿಂದ ಲಖನೋಗೆ ಬಂದಿದ್ದರು. ಆಗ ಅವರಿಗೆ ಯಾರೋ ಹೇಳಿದರು "ಇಲ್ಲಿ ತಲತ ಎಂಬ ಹೆಸರಿನ ಹುಡುಗ ಬಹಳ ಚೆನ್ನಾಗಿ ಹಾಡುತ್ತಾನೆ. ಎರಡನೆಯ ಸೈಗಲ". ಇವರು ತಲತನ ಆವಾಜ ಕೇಳಿ ಅವನನ್ನು ಕಲಕತ್ತೆಗೆ ಕರೆದುಕೊಂಡು ಹೋದರು. ಹೊಸ ಗಾಯಕನಿಗಾಗಿ ಧಾಟಿ ಹಚ್ಚಿದರು. ತರುಣ ಸಂಗೀತಕಾರ ಸುಬಲದಾಸ ಗುಪ್ತಾ ಶ್ರೇಷ್ಠ ಸಂಗೀತಕಾರ ಕಮಲದಾಸ ಗುಪ್ತಾರ ತಮ್ಮ. ನಂತರ ರೆಕಾರ್ಡಿನ ಮೇಲೆ ತಲತನ ಆವಾಜ ವಾತಾವರಣದಲ್ಲಿ ಉದಿಸತೊಡಗಿತು. 'ಸಬ ದಿನ ಏಕ ಸಮಾನ ನಹಿಥಾ' ಈ ಸ್ವರದ ಮೇಲೆ ಕಮಲದಾರ ಪ್ರೇಮ ಹುಟ್ಟಿ, ಅವರು ತಲತನಿಗೆ ಒಂದಾದ ನಂತರ ಒಂದು ಸುಂದರ ಹಾಡು ಕೊಟ್ಟರು ಆ ಹಾಡುಗಳನ್ನು ಹಾಡುತ್ತ ಹಾಡುತ್ತ ಆತ ಸೈಗಲನ ಅನುಕರಣದ ಬಂಧನದಿಂದ ಮುಕ್ತನಾಗುತ್ತ ಹೋದ. ಅನುಕರಣದ ಸೀಮೆ, ಅಸ್ತಂಗತವಾದ ನಂತರ ಹೊಸ ಹೊಸ ಕ್ಷಿತಿಜಗಳು ಕಾಣತೊಡಗುತ್ತವೆ. ಸ್ವರ ಅರಳುತ್ತದೆ. ಮುಕ್ತವಾಗುತ್ತದೆ. ಇತರರು ತನ್ನ ಅನುಕರಣೆ ಮಾಡಬೇಕೆಂದು ಸೈಗಲನಿಗೂ ಅನ್ನಿಸುತ್ತಿರಲಿಲ್ಲ. ಅವರೇ ಒಮ್ಮೆ ಜಗಮೋಹನನಿಗೆ ಹೇಳಿದ್ದರು. "ನೀನು ಬಹಳ ಚೆನ್ನಾಗಿ ಹಾಡುತ್ತಿ. ಆದರೆ ನಿನ್ನಂತೆಯೇ ಹಾಡು. ನನ್ನಂತೆ ಹಾಡಬೇಡ." ನಂತರ ಜಗಮೋಹನನಿಗೆ ಜಗಮೋಹನ ಸಿಕ್ಕಿದ್ದ. ಕಮಲದಾರು ಕಟ್ಟಿದ ಧಾಟಿಗಳ ಮೇಲೆ ಹಾಡುವಾಗ ತಲತನಿಗೆ ತಲತ ಸಿಕ್ಕಿದ್ದ. ಒಂದು ದಿನ ತಲತ ಅತ್ಯಂತ ತುಂಬಿದ ಮನಸ್ಸಿನಿಂದ ಹಾಡಿದ. 'ತಸವೀರ ತೇರಿ ದಿಲ ಮೆರಾ ಬಹಲಾ ನ ಸಕೇಗಿ' ಆದರೆ ಯಾಕೋ ಏನೋ ಅಂದು ಕಮಲದಾರಿಗೆ ಪೂರ್ಣ ಸಮಾಧಾನವಾಗಲಿಲ್ಲ. ಹಾಡು ಬರೆದ ಫೈಯಾಜನಿಗೂ ಸಮಾಧಾನವಾಗಲಿಲ್ಲ. ಆದರೆ ರೆಕಾರ್ಡಿಂಗ ಆಗಿ ಹೋಗಿತ್ತು. ರೆಕಾರ್ಡ್ ಮಾರ್ಕೆಟಿನಲ್ಲಿ ಬಂದವು. ಮತ್ತು ಆಶ್ಚರ್ಯದ ಸಂಗತಿ ಅಂದರೆ ಆ ರೆಕಾರ್ಡ್ ರೆಕಾರ್ಡಿನ ರೆಕಾರ್ಡು ಮುರಿಯಿತು. ಸುಮಾರು ಒಂದು ಲಕ್ಷ ರೆಕಾರ್ಡುಗಳ ಮಾರಾಟ. ಇಡೀ ಹಿಂದುಸ್ಥಾನದ ತುಂಬ ತಲತನ ಸ್ವರ ನಿನಾದಿಸತೊಡಗಿತು. ಅಂದಿನಿಂದ ಸಮೀಕರಣ ಠರಾಯಿಸಿಬಿಟ್ಟಿತು: ತಲತ ಅಂದರೆ 'ತಸವೀರ ತೇರಿ ದಿಲ ಮೆರಾ ಬಹಲಾ ನ ಸಕೇಗಿ'.

ಹೆಸರಲ್ಲಿ ಏನಿದೆ ?

● ಗೌರೀಶ ಕಾಯ್ಕಿಣಿ

ಕವಿ ತಿರುಮಲೇಶರು ಒಂದು ಕವನದಲ್ಲಿ ಹೇಳಿದ್ದಾರೆ. ಕಲ್ಲಂಗಡಿ ಹಣ್ಣನ್ನು ಇಷ್ಟವಿದ್ದಂತೆ ಹೋಳು ಮಾಡಬಹುದು. ಕನ್ನಡ ಕಾವ್ಯವೂ ಕಲ್ಲಂಗಡಿಯ ಹಣ್ಣಿನಾತೆಯೆ. ಅದರ ವಿಂಗಡಣೆ, ವರ್ಗೀಕರಣ ಬೇರೆ ಬೇರೆ ರೀತಿಯಲ್ಲಿ ಮಾಡಬಹುದು. ಮಾಡುತ್ತ ಬಂದಿದ್ದೂ ಆಗಿದೆ. ಕಾಲಮಾನವನ್ನು ಅನುಸರಿಸಿ ಹಳಗನ್ನಡ, ನಡುಗನ್ನಡ, ಹೊಸಗನ್ನಡವೆಂದು ಭೇದ ಕಲ್ಪಿಸಿದ್ದಾರೆ ಆಕೃತ ಬಂಧವನ್ನು ಗಮನಿಸಿ ಷಟ್ಪದಿ ಕಾವ್ಯ, ಚಂಪೂ ಕಾವ್ಯ, ತ್ರಿಪದಿ ಕಾವ್ಯ, ರಗಳೆ, ಸಾಂಗತ್ಯ ಇತ್ಯಾದಿಯಾಗಿ ವರ್ಗೀಕರಿಸಿದ್ದಾಗಿದೆ. ಆಗಮ, ಲೌಕಿಕ, ದಾಸರ ಪದ್ಯ, ವೀರಕಾವ್ಯ ಎಂದೆಲ್ಲ ವಿಂಗಡಿಸಿದ್ದೂ ಉಂಟು. ಅಭಿಜಾತ, ಜಾನಪದವೆಂದೂ ಕಾವ್ಯದಲ್ಲಿ ಭೇದವನ್ನು ಕಲ್ಪಿಸಲಾಗಿದೆ.

ಕಾಲಮಾನ ಪರಿಸ್ಥಿತಿ ಮತ್ತು ಸಾಂಸ್ಕೃತಿಕ ಸ್ಥಿತಿ–ಗತಿಗಳಿಂದಾಗಿ ಕಾವ್ಯದ ಸ್ವರೂಪ ಪ್ರಕಾರಗಳಲ್ಲಿ ಹೀಗೆ ಮತ್ತ ಮತ್ತೆ ವರ್ಗೀಕರಣವಾಗುತ್ತಲೆ ಬಂದಿದೆ. ಇಲ್ಲಿ ಮುಖ್ಯ ಪ್ರಶ್ನೆ ಇಂಥ ವರ್ಗೀಕರಣದ್ದಲ್ಲ. ಈ ವರ್ಗೀಕೃತ ಕಾವ್ಯ ವಿಶೇಷಕ್ಕೆ ಸೂಕ್ತವಾದ ಸುಯೋಗ್ಯವಾದ ಪರಿಭಾಷೆಯನ್ನು ಬಳಸುವ ಪ್ರಶ್ನೆ ನಮಗೆ ಇಲ್ಲಿ ಪ್ರಸ್ತುತವೆನಿಸಿದೆ. ಕನ್ನಡ ಕಾವ್ಯಕ್ಕೆ ಇಂದು ಹೊಸ ಪರಿಭಾಷೆ ಅಗತ್ಯವೆನಿಸಿದೆ. ಈ ಪರಿಭಾಷೆ ಕಾವ್ಯದಲ್ಲಿ ಪ್ರಯುಕ್ತವಾಗುವ ವಾಕ್ಪ್ರಯೋಗ ವಾಗ್ಧೋರಣೆಗಳ ಮಟ್ಟಿಗೆ ಮಾತ್ರವಲ್ಲ. ಅದೊಂದು ಪ್ರತ್ಯೇಕ ಚರ್ಚಾಸ್ಪದವಾದ ವಿಷಯ. ಕಾವ್ಯವನ್ನು ವರ್ಗೀಕರಿಸುವ ಹಣೆಪಟ್ಟಿಯ ಬಗೆಗೂ ಈ ಪರಿಭಾಷೆ ಹೊಸತಾಗಬೇಕೋ ಎಂಬುದನ್ನು ವಿಚಾರಿಸಬೇಕಾಗಿದೆ.

ಏಕೆಂದರೆ ಒಂದು ಕಾವ್ಯ ಪ್ರಕಾರವನ್ನು ಇಂಥದೆಂದು ಹೆಸರಿಸುವಾಗ ಅದರ

ಸ್ವರೂಪ ಲಕ್ಷಣಗಳೆಲ್ಲವನ್ನೂ ಸಮಾಲೋಚನೆಗೆ ಒಳಪಡಿಸಿಯೇ ಹೆಸರಿಡುವ ಸಂಪ್ರದಾಯವಿದ್ದಂತಿಲ್ಲ. ಹೆಚ್ಚಾಗಿ ಈ ಹೆಸರೆಂಬುದು ಒಂದು un meaning mark. ಅದೊಂದು ಗುರುತಿಗಿಟ್ಟ ಸಂಜ್ಞೆ. ಹೊಸ ಹುಟ್ಟಿದ ಕೂಸಿಗೆ ಏನಾದರೊಂದು ಹೆಸರಿಡುವದಿಲ್ಲವೇ ? ಹಾಗೆಯೇ ಇದು. ಆದರೆ ಇಂಥ ನಾಮಕರಣವು ಅಂಕಿತ ನಾಮಗಳ ಮಟ್ಟಿಗೆ ಸಲ್ಲಬಹುದು. ಕೂಸಿನ ಬದುಕು ಬಲಿತು ಬೆಳೆಯುವ ಮುಂಚೆಯೇ ಇಂಥ ಒಂದು ಹೆಸರು ಇಡಬೇಕಾಗುತ್ತದೆ. ಆದರೆ ಕಾವ್ಯ ಪ್ರಕಾರದಂಥ ಬದುಕಿ ಬೆಳೆದು ಸಾಕಷ್ಟು ಚರಿತ್ರ ಪಡೆದ ಸಂಗತಿಗೆ ಅನಂತರ ಅದರ ಒಟ್ಟಿನ ಸ್ವರೂಪವನ್ನು, ಮುಖ್ಯ ಲಕ್ಷಣಗಳನ್ನು ದಿಕ್ಕು ದಶೆಗಳನ್ನು ಗಮನಿಸಿಯೇ ನಾಮಕರಣ ಮಾಡುವದು ಸಮರ್ಪಕವೂ, ಸಯುಕ್ತಿಕವೂ ಅನಿಸುತ್ತದೆ.

“ಹೆಸರಲ್ಲಿ ಏನಿದೆ? ಗುಲಾಬಿ ಹೂವು ಯಾವ ಹೆಸರಿನಿಂದ ಕರೆದರೂ ಅಷ್ಟೇ ಸೊಗಸು” ಎಂಬ ಕವಿವಾಣಿ ಇಂಥಲ್ಲಿ ಬರಿ ಮಾತಿನ ಜಾಣತನವಾಯಿತು. ಒಂದು ಕಾವ್ಯ ಪ್ರಕಾರವನ್ನು ಹೇಗೆ ಗುರುತಿಸಬೇಕು ? ಪಾಶ್ಚಾತ್ಯ ಕಾವ್ಯ ಚರಿತ್ರೆಯಲ್ಲಿಯೂ ಇದೇ ಸವಾಲು ತಲೆದೋರುತ್ತದೆ. ಅಲ್ಲಿ ಕೆಲ ಸಲ ಕವಿಗಳ ಗುಂಪಿನಿಂದಾಗಿ ಅವರ ಸಮಾನ ಧರ್ಮೀ ಕಾವ್ಯವನ್ನು ಗುರುತಿಸಲಾಗುತ್ತದೆ. ಬದೂಲೇಕಪ್ಪೇಯೆಟ್ಸ. ಸಿಗ್ನೇಚರಪ್ಪೇಯೆಟ್ಸ–ಕೆಲಸಲ ಈ ಸಮಾನ ಧರ್ಮವನ್ನು ಶೈಲಿ, ಚಿತ್ರಮಯತೆ ಇತ್ಯಾದಿಯನ್ನು ಲಕ್ಷಿಸಿ ಹೆಸರಿಸಲಾಗುತ್ತದೆ: ಉದಾಹರಣೆಗೆ ಪ್ರಿ–ರಫೆಲೆಟಿಕ್, ನಿಯೋಕ್ಲಾಸಿಕ್ ಇತ್ಯಾದಿ. ಇಂಗ್ಲೀಷ್ ಕಾವ್ಯವನ್ನು ಸ್ಥೂಲವಾಗಿ Classic, Romantic ಮತ್ತು Modern ಎಂದು ವರ್ಗೀಕರಿಸಲಾಗಿದೆ.

ನಮ್ಮಲ್ಲಿ ಕಾವ್ಯವನ್ನು ಕಾಲಮಾನದಿಂದ – ಹಿಂದೆಹೇಳಿದಂತೆ – ಹಳೆಗನ್ನಡ, ನಡುಗನ್ನಡ, ಹೊಸಗನ್ನಡವೆಂದು ವಿಂಗಡಿಸಲಾಗುತಿತ್ತು. ಆದರೆ ತೊಡಕು ತಲೆದೋರಿದ್ದು ಈ ಹೊಸಗನ್ನಡದ ಕಾಲದಲ್ಲಿ! ನಮ್ಮಲ್ಲಿ ಕೆಲ ಸಾಹಿತ್ಯ ಚರಿತ್ರಕಾರರು ಆಯಾ ಕಾಲಖಂಡದ ಹಿರಿಯ ಕವಿಯ ಹೆಸರಿನಿಂದ ಪಂಪಯುಗ, ಕುಮಾರವ್ಯಾಸಯುಗ, ಎಂದೆಲ್ಲ ವರ್ಗೀಕರಿಸಿದ್ದುಂಟು ಆದರೆ ಇದು ಹಿರಿಯ ಕವಿ ಯಾರು ? ಹೇಗೆ ? ಎಂಬ ಕುರಿತು ತೀವ್ರವಾದ ವಿವಾದಕ್ಕೆ ಮುಳುವಾಡದ್ದುಂಟು. !

ಈಚೆಗೆ ಕನ್ನಡ ಕಾವ್ಯವನ್ನು ಹೇಗೆ ವರ್ಗೀಕರಿಸಲಾಗಿದೆ ? ನವೋದಯ ಮತ್ತು ನವ್ಯ ಕಾವ್ಯವೆಂಬುದಾಗಿ ಇಲ್ಲಿ “ನವೋದಯ”ವನ್ನು Romantic ಎಂಬುದಕ್ಕೆ

ಸಮಾನಾರ್ಥಯಾಗಿ ಅಲ್ಲದಿದ್ದರೂ ಸಮಾಂತರವಾಗಿ ಪ್ರತಿ ಶಬ್ದವೆಂದು ಪ್ರಯೋಗಿಸಲಾಗಿದೆ. ಹಾಗೆಯೇ "ನವ್ಯ"ವು ಅತ್ಯಾಧುನಿಕ – ಅಂದರೆ ಬಹುಶಃ ೨ ನೆಯ ಮಹಾಯುದ್ಧದ ನಂತರದ ಚಾಲೂ ಯುಗಕ್ಕೆ ಹೊಂದಿದ್ದಂಬಂತೆ ಯೋಜಿಸಲಾಗಿದೆ. ಸಾಮಾನ್ಯವಾಗಿ ಬಿ.ಎಂ.ಶ್ರೀ ಅವರ "ಇಂಗ್ಲೀಷಗೀತ" ಗಳಿಂದ ವಿ. ಕೆ. ಗೋಕಾಕರ "ಸಮುದ್ರಗೀತ"ಗಳನಕ ನವೋದಯ ಕಾವ್ಯದ ಯುಗವೆನ್ನಬಹುದು ಈಗಂತೂ ನವ್ಯದಲ್ಲಿಯೂ "ಅಡಿಗೋತ್ತರ ನವ್ಯ"ವೆಂಬ ವಿಶೇಷ ಭೇದ ಕಾಣಿಸಿಕೊಂಡಿದೆ. ಇಲ್ಲಿ ನವ್ಯ ಕಾವ್ಯ ಪ್ರಕಾರ ಅಡಿಗರಿಂದಲೆ ಆರಂಭವಾಯಿತೆಂದು ಧ್ವನಿತವಿದೆ. ಆರಂಭದಿಂದಲೆ ನವ್ಯದ ಪ್ರಕಾರವು ಕವಿ ವಿನಾಯಕರ ಹಾಗೂ ಕವಿ ಗೋಪಾಲಕೃಷ್ಣ ಅಡಿಗರ ಕಾವ್ಯ ಶೈಲಿಗಳಿಂದ ಕವಲೊಡೆದಂತೆ ಆಗಿದೆ. ಆದರೆ ಈ ಕವಲುಗಳೆರಡೂ ಒಟ್ಟಿನಲ್ಲಿ ನವ್ಯವೆಂದೆ ಗುರುತಿಸಲಾಗಿದೆ. ಇರಲಿ.

ಇನ್ನೂ ಈ ಬಗೆಯು ಕಾವ್ಯ ಪ್ರಕಾರದ ವಿಂಗಡಣೆ ಸಮರ್ಪಕವೇ ? ನಾನೇ ಹಿಂದೆ ಕೆಲವೆಡೆಗೆ ಹೇಳಿದ್ದೇನೆ. 'ನವೋದಯ' ಎಂಬ ಹೆಸರೇ ಗೊಂದಲದ್ದು. ನವೋದಯವೆಂದರೇನು ? ಉದಯವೆಂಬುದೆ ಯಾವಾಗಲೂ ನವ. ಹಳೆಯ ಉದಯವೆಂಬುದಿಲ್ಲ. ಬಿ.ಎಂ.ಶ್ರೀಯವರಿಂದ ಇದರ ಶ್ರೀಕಾರ. ಬೇಂದ್ರೆ ಪುಟ್ಟಪ್ಪರಂಥ ದಿಗ್ಗಜರಿಂದ ಈ ಹೊಸ ಮಾರ್ಗದ ಮುನ್ನಡೆ: ಈ ಕಾವ್ಯಕ್ಕೆ ಪ್ರೇರಣೆ ಇಂಗ್ಲೀಷ Romantic ಸಂಪ್ರದಾಯದಿಂದ 'ಶಿಲೆಯೊಳಗೆ ಸೆಲೆಯಾಗಿ ಹರಿದ ನೀರೇ' ಇಲ್ಲಿ ಹೊಸ ಕಾವ್ಯಧಾರೆ ಆಯಿತು. ಇದನ್ನೆ ಕವಿವರ್ಯರು ತನ್ನ ಕವನಗಳ ಕುರಿತಾಗಿ "ಕಟ್ಟಿರುವೆ ನಾನು ನವಕಾವ್ಯವನ್ನು" ಎಂದು ಹೇಳಿಕೊಂಡಿದ್ದಾರೆ. ಅಂದಾಗ ಈ 'ನವ'ಕ್ಕೂ ನವ್ಯಕ್ಕೂ ಯಾವ ದೂರ ? ಅಂದು ನವೋದಯಗೊಂಡ ಈ ಆಧುನಿಕ ಕಾವ್ಯವು ಹಲವು ದಶಕಗಳ ಮೇಲೆಯೂ ಉದಯಾವಸ್ಥೆಯಲ್ಲಿಯೇ ಇರಬಲ್ಲದೆ.?

Romantic ಕಾವ್ಯದ ಮುಖ್ಯ ಅಥವಾ ಎಲ್ಲ ಲಕ್ಷಣಗಳೂ ಈ 'ನವೋದಯ' ದಲ್ಲಿದೆಯೇ ? ಹಾಗೆಂದು ನಮ್ಮ ಯಾವ ವಿಮರ್ಶಕನೂ ಸಹ ಒಪ್ಪಲಿಕ್ಕಿಲ್ಲ. ಹಿಂದಿಯಲ್ಲಿ Romantic ಕಾವ್ಯವನ್ನು 'ಛಾಯಾವಾದಿ' ಕಾವ್ಯವೆಂದು ಹೆಸರಿಸಿದರು. ಮಹಾದೇವೀ ವರ್ಮಾ, ಸುಮಿತ್ರಾನಂದನಪಂತ, ಬಚ್ಚನ, ದಿನಕರ, ಸುಭದ್ರಾ ಕುಮಾರಿ ಚೌಹಾನ ಮುಂತಾದವರೆಲ್ಲ ಇದೇ ಗೋತ್ರದವರು, – ಕೆಲವರ ಪ್ರವರ ತುಸು ಬೇರೆಯಾದರೂ. ಈ ಹೆಸರು ಕೆಲಮಟ್ಟಿಗೆ ಅನ್ವರ್ಥಕವೇ ಆಗಿದೆ. ಕವಿಯ ವ್ಯಕ್ತಿತ್ವ ಮತ್ತೂ ಭಾವಲೋಕದ ಛಾಯೆಗಾಣಿಸುವ ಇಂಥ ಕಾವ್ಯವನ್ನು ನಾವು ಛಾಯಾವಾದಿಯೆಂದು ಕರೆಯಬಹುದು. 'ನವೋದಯ' ಎಂಬ ಹೆಸರು ಹೊಸ ಹುಟ್ಟಿನಲ್ಲಿ ಸರಿ ಎನಿಸಿದರೂ ಮುಂದೆ ಅದು ಒಂದು

ಕಾವ್ಯ ಪ್ರಕಾರವನ್ನು ನಿರ್ದೇಶಿಸಲಾರವು. ಇನ್ನೂ ಈ ಪ್ರಕಾರಕ್ಕೆ 'ರಸ ಸಂಪ್ರದಾಯ' ವೆಂದೂ ಕೆಲವರು ಕರೆಯುವದುಂಟು. ಆದರೆ 'ರಸ'ವೆಂದೊಡನೆ ಅದರೊಂದಿಗೆ ಹಳೆಯ ಕಾವ್ಯ ಲಕ್ಷಣ ಶಾಸ್ತ್ರವೇ ವ್ಯೂಹಗಟ್ಟಿ ನಿಲ್ಲುತ್ತದೆ. ಈಗ Romantic ಪರಿಕಲ್ಪನೆಯು ತುಸು ಗೊಂದಲಮಯವಾಗುತ್ತದೆ. ಹಳೆಯ ಮೌಲ್ಯಕ್ಕೆ ಹೊಸ ನಾಣ್ಯದ ಬೆಲೆ ಕಟ್ಟುವದು ಬಿಗಿಯಾಗುತ್ತದೆ!

ಅನಂತರ ಕಾಣಿಸಿಕೊಂಡ ನವ್ಯ ಪಂಥದ ಅಧ್ವರ್ಯುಗಳು ತಮ್ಮ ಬೇರು ನವೋದಯ ಕಾವ್ಯ ಕ್ಷೇತ್ರದಲ್ಲಿಯೇ ಆಳಕ್ಕೆ ಇಳಿಬಿಟ್ಟ ಗೋಕಾಕ, ಗೋಪಾಲಕೃಷ್ಣ ಅಡಿಗರು! ಅವರು ತಮ್ಮ ಅಸಾಭಿನಾಳದಿಂದ ಕಡಿದು ಕೊಂಡಿದ್ದಿಲ್ಲವಾದ್ದರಿಂದಲೋ ಏನೋ ಹಿರಿಯ ವಿಮರ್ಶಕ ಕವಿ ಡಾ. ಶ್ರೀ ಮುರಳಿಯವರು "ಪುನರ್ನವೋದಯ" ವೆಂದು ಹೆಸರಿಟ್ಟರು. New Romantic ಪ್ರಕಾರವಂತೆ. ಈ ಚಿನ ಎಷ್ಟೋ ಯುವ ಕವಿಗಳ ವೈಖರಿ New Romantic ಸ್ವರೂಪದ್ದೇ ಆಗಿದೆ.

ಇನ್ನು ಈ 'ನವ್ಯ'ವೆಂಬ ಹೆಸರೂ ಸಮುಚಿತವೇ ? ಅದೂ ನವೋದಯದಂತೆ ಸಾಪೇಕ್ಷ. ಆಕ್ಷೇಪಕ್ಕೆ ಗುರಿ. ಕವಿ ವಿನಾಯಕರ 'ಸಮುದ್ರ ಗೀತ'ಗಳಿಂದ ಹುಟ್ಟಿಕೊಂಡ ಈ ಹೊಸ ಪ್ರಕಾರದಲ್ಲಿ ಆಶಯ, ಆಕೃತಿ, ಶೈಲಿ, ಪ್ರತಿಮಾ ಪ್ರಪಂಚ ಎಲ್ಲವೂ ಒಂದು ರೀತಿ ಹೊಸತಿತ್ತು. ಆದ್ದರಿಂದ ಆಧುನಿಕವಿತ್ತು. ಗೋಕಾಕರಿಗೆ ಹೊಸ ರೀತಿಯ ಪ್ರೇರಣೆ, ಇಂಗ್ಲೆಂಡಿನಲ್ಲಿರುವಾಗ, (ಕನ್ನಡದ ಮಟ್ಟಿಗೆ ದಿ. ಪೇಜಾವರ ಸದಾಶಿವರಾಯರ ಕವನಗಳಿಂದ ಬಂದಿತು. ಕಾವ್ಯದ ಹಳೆಯ ಮೂಸೆಯನ್ನು ಒಡೆದಂತೆ ಆಯಿತು. ಕನ್ನಡದಲ್ಲಿ ಗೋಕಾಕರು ಇದನ್ನು "ಸ್ವಚ್ಛಂದ ಛಂದಸ್ಸು" ಎಂದು ಕರೆದರು. ಇದು Verse Libre. ಮರಾಠೀ ಕವಿಗಳು ಇದನ್ನು "ಮುಕ್ತಛಂದ"ವೆಂದು ಹೆಸರಿಸಿದ್ದಾರೆ! ಇದನ್ನು ಅಲ್ಲಿ ವೀರಸಾವರಕರರು ಆರಂಭಿಸಿದರು. ಅದನ್ನು "ವೈನಾಯಕಿ ವೃತ್ತ"ವೆಂದು ಕರೆದರು – ತನ್ನ ಹೆಸರಿನಲ್ಲಿ.)

ಟಿ. ಎಸ್. ಈಲಿಯಟ ನವ್ಯ ಕಾವ್ಯವನ್ನು ೧೯೨೨ ರಲ್ಲಿಯೇ ಬರೆದನು. (ಅವನ 'Waste Land' ದ ೨ ಸಾಲುಗಳನ್ನು ನಮ್ಮಲ್ಲಿ ಪ್ರಥಮತಃ ಪ್ರಯೋಗಿಸಿದವರು ಪಂಡಿತ ನೆಹರೂ ಜಿ–ಅವರ ಆತ್ಮ ಚರಿತ್ರೆಯಲ್ಲಿ ಅದು ನಮಗೆ ಮೂರು ದಶಕಗಳ ನಂತರ "ನವ್ಯ"ವಾಯಿತು.! ಆದರೆ 'ನವ್ಯ'ವೆಂಬ ನಾಮಕರಣ definitive ಅಲ್ಲ. ಅದರಿಂದ ಈ ಕಾವ್ಯ ಸ್ವರೂಪದ ನಿಶ್ಚಿತ, ನಿಖರ, ನಿರ್ವಚನವಾಗದು. ಈಚೆಗೆ ಈ ನವ್ಯದಲ್ಲಿಯೂ ಹೊಚ್ಚ ಹೊಸ ಪ್ರಕಾರಗಳು ಸಂವೇದನೆಯಲ್ಲಿ

ಕಾಣಿಸಿಕೊಂಡಿವೆ. ಎ. ಕೆ. ರಾಮಾನುಜನ್, ಕೆ. ವಿ. ತಿರುಮಲೇಶ, ಜಯಂತ ಕಾಯ್ಕಿಣಿ, ಎಸ್. ಮಂಜುನಾಥ್, ದೇಶಕುಲಕರ್ಣಿ ಇವರ ಕಾವ್ಯದಲ್ಲಿ.

ಇವನ್ನು ಏನೆಂದು ಕರೆಯೋಣ ? "ಪುನರ್ನವ್ಯ"ವೆಂದೇ - "ಪುನರ್ನವ್ಯೋದಯ" ದಂತೆ ? "ಅಡಿಗೋತ್ತರ ನವ್ಯ" ವೆಂಬುದು ಇದೇ ನವ್ಯೋನವ್ಯವೇ ? ಇದಕ್ಕೂ ನಂತರ ? "ಅಡಿಗೋತ್ತರ"ವೆನ್ನುವದಾದರೆ ಅಡಿಗರು ಇಂದಿಗೂ ಬಿರುಸಾಗಿ ಬರೆಯುತ್ತಲೇ ಇದ್ದಾರೆ. (ಒಂದರ್ಥದಲ್ಲಿ ಅಡಿಗರು 'ಹಿಮಗಿರಿಕಂದರ'ದಿಂದ 'ಚಿಂತಾಮಣಿಯಲ್ಲಿ ಕಂಡ ಮುಖ'ದವರೆಗೂ ಹೆಚ್ಚುಕಡಿಮೆ ಒಂದೇ ಕವಿತೆಯನ್ನು ಬರೆಯುತ್ತಿದ್ದಾರೆ. ಅವರ ಆಶಯ ಒಂದೇ, ಆಕಾರ ಒಂದೇ, ಆವೇಶ ಒಂದೇ !)

ಅರ್ಥಾತ್ 'ನವ್ಯೋದಯ' ವೇನು, ನವ್ಯವೇನು ? ಈ ನಾಮಕರಣಗಳು ಅಷ್ಟು ಸಮರ್ಪಕವಲ್ಲ. ಇವುಗಳಿಂದ ಈ ಕಾವ್ಯಪ್ರಕಾಶಗಳ ನಿರ್ದೇಶನಿರ್ವಚನ ನಿರ್ಣಾಯಕವಾದಂತಿಲ್ಲ. ಇವುಗಳ ಬಗೆಗೆ ಮರು ವಿಚಾರವಾಗಲೂ ಬೇಕು. ಹೊಸ ನಾಮಕರಣ ಆಯಾ ಪ್ರಕಾರದ ಪ್ರಮುಖ ವೈಶಿಷ್ಟ್ಯಗಳನ್ನು ಆದಷ್ಟು ಸೂಚಿಸುವಂತೆ ಇರಬೇಕು. ನವವ್ಯೋ ನವ್ಯವ್ಯೋ ಇನ್ನೂ ಹೊಸತು ಇದಿರಾಗುವ ತನಕವೇ ನವೀನ. ಮರಾಠಿಯ "ರವಿಕಿರಣ ಮಂಡಳ"ದವರಂತೆ ನಮ್ಮಲ್ಲಿಯ "ಗೆಳೆಯರ ಗುಂಪಿ"ನ ಕವಿಗಳು ಅನಂತರದ "ಪ್ರಗತಿ" ಪಂಥದ ಕವಿಗಳು ಎಲ್ಲರೂ Romantic ಪಂಥದವರೇ. ಅವರ ಈಚಿನ ಕಾವ್ಯವೆಲ್ಲ 'ಆಧುನಿಕ' ಕಾವ್ಯವೆಂದು ಕರೆಯಲ್ಪಡುವದು ಕ್ಷೇಮ.

ಹೊಸಹೊದು

ವಧು (ಕಾದಂಬರಿ)

ಲೇಖಕಿ : ಸರೋಜ ನಾರಾಯಣರಾವ್ ; ಪ್ರಕಾಶಕರು - ಕುವೆಂಪು ಅಧ್ಯಯನ ಕೇಂದ್ರ, 681, 12 ನೇ ಕ್ರಾಸ್, ಮಾಗಡಿ ಕಾರ್ಡ್ ರೋಡ್ ವಿಸ್ತರಣ, ಬೆಂಗಳೂರು 560040 ; ಪುಟ 197 ; ಬೆಲೆ : 15 ರೂ.

ವಿವಾಹ ಹೊರ ನೋಟಕ್ಕೆ ಅತ್ಯಂತ ಸರಳವಾಗಿ ಕಂಡರೂ ಅದರ ಹಿಂದೆ ಮತ್ತು ಮುಂದೆ ಇರುವ ಸಮಸ್ಯೆಗಳಿಂದಾಗಿ, ಅದು ಸಂಕೀರ್ಣ ಸ್ವರೂಪ ತಳೆಯುತ್ತದೆ. ಈ ಸಮಸ್ಯೆಗಳು ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸ್ವರೂಪದವಿರಬಹುದು. ಇವು ಯಾವುವೇ ಆದರೂ ಯಾವಾಗಲೂ ಶೋಷಣೆಗೆ ಒಳಗಾಗುವವಳು ಸ್ತ್ರೀಯೇ. ಪಿತೃಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಹೀಗಾಗುವುದು ಕೂಡ ಸಹಜ. ಶೋಷಣೆಯ ಬೇರುಗಳ ಶೋಧನೆ ಮಾಡುವುದು ಅಷ್ಟೇನೂ ಸುಲಭದ ಕಾರ್ಯವಲ್ಲ. ಆ ಕೆಲಸ ಮಾಡುತ್ತಾ, ಇಂದಿನ ಸಾಮಾಜಿಕ ಪರಿಸ್ಥಿತಿಗೆ ಕನ್ನಡಿ ಹಿಡಿಯುತ್ತಾ, ಬದಲಾವಣೆಯ ಆಸೆಯನ್ನು ಮೈಯಲ್ಲಿ ತುಂಬಿಕೊಳ್ಳುತ್ತ ಬೆಳೆಯುವ "ವಧು" ಒಂದು ವಿಶಿಷ್ಟ ಕಾದಂಬರಿಯಾಗಿದೆ.

ಕಾದಂಬರಿಗಾರ್ತಿ ಸರೋಜ ನಾರಾಯಣರಾವ್ ತಮ್ಮ ಕಾದಂಬರಿಗೆ ಆರಿಸಿಕೊಂಡಿರುವ ವಸ್ತು ಬಹಳ ಸಾಮಾನ್ಯವಾದುದೇ. ಆದರೆ ಅವರು ಅದನ್ನು ದುಡಿಸಿಕೊಂಡಿರುವ ರೀತಿ, ಬಳಸಿರುವ ತಂತ್ರ, ವರ್ತಮಾನ ಹಾಗೂ ಭೂತ ಕಾಲಗಳನ್ನು ತಳುಕು ಹಾಕಿಕೊಂಡಿರುವ ಬಗೆ, ಈ ಕೃತಿಗೆ ಹೊಸ ಆಯಾಮ ನೀಡಿದೆ ಎನ್ನಬಹುದು. ಬದುಕಿನ ವಾಸ್ತವದ ಗ್ರಹಿಕೆ ಲೇಖಕಿಗೆ ಸಮರ್ಪಕವಾಗಿರುವುದರಿಂದಲೇ ಪಾತ್ರಗಳು, ಸನ್ನಿವೇಶಗಳು ತಾವೇ ತಾವಾಗಿ ಬೆಳೆದು ಅರಳುತ್ತವೆ.

ಸುಭಾಷಿಣಿ ಇಲ್ಲಿ ಕಥಾ ನಾಯಕಿ. ಎಲ್ಲ ಘಟನೆಗಳು ಜರುಗುವುದು ಅವಳ ಸುತ್ತಲೇ. ಅವಳು ವಿದ್ಯಾವಂತೆ, ಉದ್ಯೋಗಸ್ಥೆ ಮತ್ತು ವಿಚಾರವಂತೆ. ಭೂತ, ವರ್ತಮಾನ ಘಟನೆಗಳನ್ನು ಅವಳು ವಿವೇಚಿಸುತ್ತ, ಪ್ರಶ್ನಿಸುತ್ತ ಮುಂದೆ ಸಾಗು

ತ್ತಾಳೆ. ಒಂದು ರೀತಿಯಲ್ಲಿ ಶೋಷಣೆಗೊಳಗಾದ ಆಧುನಿಕ ಯುವತಿಯರ ಸಂಕೇತವೂ ಆವಳಾಗಿದ್ದಾಳೆ ಎನ್ನಬಹುದು. 'ಹತಾಶಳಾಗುವುದು ಸುಭಾಷಿಣಿಯ ಸ್ವಭಾವಕ್ಕೆ ವಿರುದ್ಧವಾದದ್ದು. ಬದಲಾವಣೆಗಳು ಒಂದೇ ದಿನದಲ್ಲಿ ಆಗುವುದಿಲ್ಲ ಎಂಬುದೂ ಅವಳಿಗೆ ಗೊತ್ತಿತ್ತು' ಎನ್ನುವ ಮಾತುಗಳು ಸುಭಾಷಿಣಿಯ ಗಟ್ಟಿ ಚೇತನಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

ಪ್ರಾಪ್ತ ವಯಸ್ಕಳಾದರೂ ಸುಭಾಷಿಣಿಯ ಮದುವೆಯಾಗುವುದಿಲ್ಲ. ಅವಳನ್ನು 'ನೋಡಲು' ಬಂದ ವರಮಹಾಶಯರು ವಿವಿಧ ಕಾರಣಗಳಿಂದ ಅವಳನ್ನು ತಿರಸ್ಕರಿಸುತ್ತಾರೆ. 'ಹುಡುಗನ ಎತ್ತರಕ್ಕೆ ನಿಮ್ಮ ಹುಡುಗಿಯ ಎತ್ತರ ಸಾಲದು' ಅಥವಾ 'ಅವನು ಆಸ್ಪತ್ರೆ ಪ್ರಾರಂಭಿಸಲು ಹಣ ಕೊಡುವುದಾದರೆ ಮದುವೆ ಆಗ್ತಾನಂತೆ.' ಕ್ಷುಲ್ಲಕ ಕಾರಣಗಳಿಂದ ಹಿಡಿದು ಬಹಳ ಗಂಭೀರ ಸಮಸ್ಯೆಗಳವರೆಗೂ ಇದರ ವ್ಯಾಪ್ತಿ ಹರಡುತ್ತದೆ. ವೈಯುಕ್ತಿಕ ಸಮಸ್ಯೆ ಸಾರ್ವತ್ರಿಕ ಸಮಸ್ಯೆಯಾಗಿ ಪರಿವರ್ತಿತವಾಗುವುದು ಇಲ್ಲಿಯೇ. ಇವೆಲ್ಲವುಗಳಿಂದ ನಿರಾಶಳಾದ ಸುಭಾಷಿಣಿ ಬೆಂಗಳೂರಿನಲ್ಲಿ ತನ್ನ ದೊಡ್ಡಪ್ಪನ ಜೊತೆ ಇರಲು ನಿರ್ಧರಿಸುತ್ತಾಳೆ. ದೊಡ್ಡಪ್ಪ ವಿದ್ವಾಂಸರಲ್ಲದಿದ್ದರೂ ಚಿಂತಕರು. "ಪ್ರಾಚೀನ ಕಾಲದ ವಿವಾಹ ಪದ್ಧತಿಗಳು" ಕುರಿತು ಒಂದು ಹೊತ್ತಗೆ ಬರೆಯುವ ಯೋಚನೆಯಲ್ಲಿದ್ದವರು. ಅವರ ಟಿಪ್ಪಣಿಗಳಲ್ಲಿ ಮಹಾಭಾರತದ ಶಕುಂತಲೆ–ದುಷ್ಯಂತ, ಕಚ, ದೇವಯಾನಿ ನಳ–ದಮಯಂತಿ ಇತ್ಯಾದಿ ಬಂದು ಹೋಗುತ್ತಾರೆ. ಪುರಾಣದ ಕತೆಗಳಿಗೆ ಸಾಮ್ಯವಿರುವಂತಹ ಘಟನೆಗಳು ವರ್ತಮಾನದಲ್ಲಿ ನಡೆಯುತ್ತವೆ. ಅನುರಾಧಾಳನ್ನು ನಂಬಿಸಿ ವಿವಾಹವಾಗಿ ಮಗುವಾದ ಮೇಲೆ ಕೈಬಿಟ್ಟ ರಾಜೀವನ ಪ್ರಸಂಗ ಹೇಳುತ್ತಾ ಶಕುಂತಲೆ-ದುಷ್ಯಂತರ ನೆನಪು ತೆಗೆಯುತ್ತಾರೆ. 'ಮದುವೆ ಸಮಯದಲ್ಲಿ ವರಪೂಜೆ ಮಾಡುವಾಗ ಅಗಲ ಬೆಳ್ಳಿ ತಟ್ಟೆಯಲ್ಲಿ ವರನ ಪಾದಗಳನ್ನಿರಿಸಿ ತೊಳೆದು ಅರಿಶಿನ ಕುಂಕುಮ ಹಚ್ಚಿ ಪೂಜೆ ಮಾಡಿ' ಮಗಳು ಅನುರಾಧಾಳನ್ನು ಧಾರೆ ಯೆರೆದು ಕೊಟ್ಟಿದ್ದರು. 'ಆದರೂ ಯಾಕೆ ಹೀಗಾಯಿತು ?' ಎನ್ನುವಾಗ ರಾಜೀವನಂತಹ ಗೋಮುಖ ವ್ಯಾಘ್ರಗಳ ಕ್ರೌರ್ಯ ತಣ್ಣನೆ ಕೊರೆಯುತ್ತದೆ. ಜೊತೆಗೆ ನಮ್ಮ ಸಂಪ್ರದಾಯಗಳ ಜೊಳ್ಳುತನವನ್ನು ಬಯಲಿಗೆಳೆಯುತ್ತದೆ.

ವರದಕ್ಷಿಣೆಯ ವಿವಿಧ ಮಗ್ಗುಲುಗಳನ್ನು ತಬ್ಬಿರುವುದು ಈ ಕೃತಿಯ ವಿಶೇಷ. 'ನನ್ನ ಮದುವೆ ಖರ್ಚಿಗೆ, ವರದಕ್ಷಿಣೆಗೆ ನಾನು ಸ್ವಲ್ಪ ಹಣ ಕೂಡಿಸ್ತಾ ಇದೀನಿ ಅದು ಇಲ್ಲಾ ಅಂದ್ರೆ ನಂಗೆ ಮದ್ವೆಯಾಗೋ ಛಾನ್ಸೇ ಇಲ್ಲ', ಎಂದು ಸುಭಾಷಿಣಿಯ ಗೆಳತಿ ಶೀಲಾ ಅಂದಾಗ, ಈ ಸಮಾಜದಲ್ಲಿ ವಿದ್ಯಾವಂತ ಹೆಣ್ಣು ಕೂಡ

ಎಷ್ಟು ಅಸಹಾಯಕಳು ಎಂಬುದು ವೇದ್ಯವಾಗುತ್ತದೆ. 'ಕೈತುಂಬ ವರದಕ್ಷಿಣೆ, ಉಡುಗೊರೆ ಕೊಟ್ಟರೆ ಹುಡುಗಿಯನ್ನು ಚೆನ್ನಾಗಿ ಬಾಳಿಸಬಹುದು ಎಂಬ ನಂಬಿಕೆ ವರದಕ್ಷಿಣೆಗೆ ಮೂಲ ಇರಬಹುದು ಎಂದು ದೊಡ್ಡಪ್ಪ ನುಡಿದರೆ ಗೆಳತಿ ಪ್ರೀತಿ ಇನ್ನೊಂದೇ ವ್ಯಾಖ್ಯಾನ ನೀಡುತ್ತಾಳೆ: 'ಯಾಕೆ ಅಂದ್ರೆ ಅವ್ರು ಸಾಯೋವರ್ಗೂ ನಮ್ಮನ್ನು ನೋಡಿಕೊಳ್ಳಲ್ವೇನು ? ಅದಕ್ಕೆ. 'ನೋಡಿ ಕೊಳ್ಳುವುದು' ಯಾರು ಯಾರನ್ನು ? ಸಮಾನ ಸ್ಪಂದರಾದ ಗಂಡು ಹೆಣ್ಣು ಜೊತೆಗೂಡಿದಾಗ ಪ್ರೀತಿ ಯೊಂದೇ ಮುಖ್ಯವಾಗಬೇಕು. ಆದರೆ ಪ್ರಸ್ತುತ ಸಮಾಜದಲ್ಲಿರುವುದು ವ್ಯಾಪಾರೀ ಮನೋಭಾವ ಮತ್ತು ಶೋಷಣೆ. ಇವಕ್ಕೆ ಧರ್ಮಗಳು, ಜಾತಿಗಳು, ಸಂಪ್ರದಾಯಗಳು ಇಂಬುಗೊಡುತ್ತಾ ಹೋಗುತ್ತವೆ. ಈ ವಾಸ್ತವಗಳನ್ನು ಬಿಚ್ಚಿಡುತ್ತಾ ತನ್ಮೂಲಕ ವ್ಯವಸ್ಥೆಯ ಸ್ಪಷ್ಟ ಚಿತ್ರ ನೀಡುವುದೇ ಈ ಕಾದಂಬರಿಯ ಪ್ರಮುಖ ಉದ್ದೇಶ. 'ವಿದ್ಯಾಭ್ಯಾಸದಲ್ಲಿನ ಪ್ರಗತಿಯು ವರದಕ್ಷಿಣಾ ಪದ್ಧತಿ ನಾಶಗೊಳಿಸುವ ಬದಲು ಒಂದು ರೀತಿಯಲ್ಲಿ ಮತ್ತು ಅಗಾಧವನ್ನಾಗಿ ಮಾಡಿದೆ' ಎಂಬ ಸುಭಾಷಿಣಿಯ ತೀರ್ಮಾನ, ನಾವೆಲ್ಲರೂ ಗಾಢವಾಗಿ ಯೋಚಿಸುವಂತಹ ವಿಚಾರವೂ ಆಗಿದೆ.

ಜೀರಿಗೆ ಬೆಲ್ಲ ತಲೆಯ ಮೇಲೆ ಬಿದ್ದರೂ ವರದಕ್ಷಿಣೆಯ ಕಾರಣದಿಂದ ಮದುವೆಯಾಗದೆ ಉಳಿದ ನಾಗವೇಣಿ ಹುಚ್ಚಿಯಾಗುತ್ತಾಳೆ. ಭೀಷ್ಮನಿಂದ ತಿರಸ್ಕೃತಳಾದ ಅಂಬೆಗೂ ಇವಳಿಗೂ ಹೋಲಿಕೆಯಿದೆಯೆ ? ಸುಭಾಷಿಣಿ ಸಂತೋಷನನ್ನು ಪ್ರೀತಿಸಿದಳು, ಆದರೆ ಅವನು ಕೈಕೊಟ್ಟ. ಕಚ–ದೇವಯಾನಿಯರ ಬದುಕಿನ ಸಾಮ್ಯ ಇಲ್ಲಿ ಕಾಣಿಸುತ್ತದೆ. ಹಾಗೆಯೇ ಸಾವಿತ್ರಿ, ನಳ ದಮಯಂತಿ, ದ್ರೌಪದಿ ಮುಂತಾದ ಪಾತ್ರಗಳ ಹೋಲಿಕೆಗಳಿವೆ. ಪ್ರಮುಖ ಪೌರಾಣಿಕ ಪಾತ್ರಗಳಿಗೆಲ್ಲಾ ಹೋಲಿಸುವಂತಹ ಪಾತ್ರ ಹಾಗೂ ಸನ್ನಿವೇಶ ಸೃಷ್ಟಿ ಅಗತ್ಯವಿರಲಿಲ್ಲ ಅನಿಸುತ್ತದೆ. ಎರಡು ಮೂರು ಉದಾಹರಣೆಗಳಲ್ಲೇ ಹೆಚ್ಚು ತೀವ್ರತೆ ತಂದುಕೊಡುವುದು ಸಾಧ್ಯವಿತ್ತು.

ಕಾದಂಬರಿಯ ತುಂಬಾ ಉಪಾಖ್ಯಾನಗಳ ಮಾದರಿಯಲ್ಲಿ ಕಥಾ ಚಿತ್ರಗಳು ಬರುತ್ತವೆ. ಪ್ರತಿಯೊಂದು ಸಂಸಾರದ ಚಿತ್ರಗಳು ವಿವರವಾಗಿ ಚಿತ್ರಿತವಾಗಿದ್ದು ಅವು ಒಂದೊಂದೂ ಒಂದೊಂದು ಕತೆಯನ್ನು ಓದಿದ ಅನುಭವ ನೀಡುತ್ತವೆ. ಆದರೆ ಪಾತ್ರಗಳು ವಿಪರೀತ ಆಗಿ, ಹೆಸರು ಘಟನೆ ನೆನಪಿನಲ್ಲಿಟ್ಟುಕೊಳ್ಳುವುದು ಕಷ್ಟವಾಗುತ್ತದೆ. ಇದು ಕಾದಂಬರಿಯ ದೌರ್ಬಲ್ಯವೂ ಹೌದು.

ಎದ್ದು ನಿಲ್ಲುವಂತಹ ಎರಡು ಪಾತ್ರಗಳು ಕಪ್ಪಣ್ಣ ಮತ್ತು ಪಂಕಜಾರದು. ಹೆಚ್ಚು

ವಿದ್ಯಾಭ್ಯಾಸವಿಲ್ಲದ ಹಳ್ಳಿಯ ಹೆಂಗಸಾದರೂ ಪಂಕಜಾ ತೋರುವ ಧೈರ್ಯ ಅಸಾಧಾರಣವಾದುದು. ಗಂಡ ಮನೆ ಬಿಟ್ಟು ಹೋದಾಗಲೂ ಅವಳು ಅಳುವುದಿಲ್ಲ, ವಿಚಲಿತಳಾಗುವುದಿಲ್ಲ. 'ಬಂದ್ಬಿಡತಾರೇನೋ ಅಂತಲೇ ಅಂದ್ಕೊಂಡಿದೀನಿ' ಎಂದು ಅವಳು ಹೇಳುವಾಗ ಹೆಣ್ಣಿನ ಆತ್ಮ ಸ್ಥೈರ್ಯದ ತುಣುಕು ನಮಗೆ ಕಾಣಸಿಗುತ್ತದೆ. ಅವಳ ಸೋದರ ಕಪ್ಪಣ್ಣ ಕೂಡ ಇಂಥ ಪಾತ್ರವೇ. 'ತಂಗಿಗಾಗಿ ತಾನು ಮದುವೆಯಾಗದೇ ಉಳಿದಾಗಲೂ ತಾನು ತ್ಯಾಗ ಮಾಡಿರುವುದಾಗಿ ಅವನು ಮಾತಾಡುತ್ತಲೇ ಇರಲಿಲ್ಲ'.

'ದೃಷ್ಟಿ' ಪತ್ರಿಕೆಯ ಸಂಪಾದಕಿ ಮೊನಿಷಾಳನ್ನು ತರುವ ಮೂಲಕ ಸ್ತ್ರೀಪರ ಹೋರಾಟಗಳಿಗೆ ಇಲ್ಲಿ ಒತ್ತು ಕೊಡಲಾಗಿದೆ. ಸಮುದಾಯ ಪ್ರಯತ್ನಗಳು ಸ್ತ್ರೀಯ ಬದುಕನ್ನು ಉತ್ತಮಗೊಳಿಸಲು ತುಸುವಾದರೂ ನೆರವಾಗಬಲ್ಲುವು ಎಂಬ ಸೂಚನೆ ಇಲ್ಲಿದೆ.

'ಸುಭಾಷಿಣೀ ಪರಿಣಯ'ದೊಂದಿಗೆ ಮುಗಿಯುವ ಕಾದಂಬರಿ ಬದುಕಿನ ಕಠೋರತೆಯಲ್ಲೂ ಆಶೆಯ ಬೆಳಕನ್ನು ತುಂಬಿಕೊಡುತ್ತದೆ.

ಗಮನಿಸಬೇಕಾದ ಸಂಗತಿಯೆಂದರೆ ಇಲ್ಲಿ ಯಾವ ಪಾತ್ರವೂ ವೈಭವೀಕರಣಗೊಳ್ಳುವುದಿಲ್ಲ. ಎಲ್ಲವೂ ಬದುಕಿನಿಂದ ಎತ್ತಿಕೊಂಡ ತಾಜಾ ಪಾತ್ರಗಳೇ. ಘಟನೆಗಳೆಲ್ಲ ವಾಸ್ತವಿಕ ನೆಲೆಗಟ್ಟಿನ ಮೇಲೆಯೇ ನಿಂತಿರುವುದರಿಂದ ಕೃತಿಗೆ ವಿಶೇಷ ಮೌಲ್ಯ ಬಂದಿದೆ. ಎಲ್ಲೂ ಉದ್ವಿಗ್ನಗೊಳ್ಳದೆ, ಆವೇಶವಿಲ್ಲದೆ, ನಿರ್ಮಲವಾಗಿ ಬರೆಯುತ್ತಾ ಹೋಗುವುದು ಸರೋಜಾರ ಬರೆವಣಿಗೆಯ ಗುಣ. ಇಂಥ ಪ್ರವೃತ್ತಿ ಕಾದಂಬರಿಗೆ ವಿಶೇಷ ಮೆರುಗನ್ನು ನೀಡಿದೆ. ಎಲ್ಲೂ ಯಾವ ಕೂಗಾಟ ಹೋರಾಟಗಳಿಲ್ಲದೆ, ಮನಸ್ಸನ್ನು ತಣ್ಣಗೆ ಕೊರೆಯುತ್ತಾ, ಓದುಗರನ್ನು ಉದ್ವಿಗ್ನಗೊಳಿಸುತ್ತಾ, ಬದಲಾವಣೆಯ ಚಿಂತನೆಗೆ ಹಚ್ಚುವುದು ಕಾದಂಬರಿಯ ಮೂಲ ಆಶಯವಾಗಿದೆ.

— ಅನುಪಮಾ ನಿರಂಜನ

ಸಂಪಾದಕರ ಟಿಪ್ಪಣಿಗಳು

ಸಂಸ್ಕೃತಿ-ಧರ್ಮ-ಸಾಮಾಜಿಕ ಪರಿವರ್ತನೆ ಇತ್ಯಾದಿ....

Ontogeny recapitulates Phylogeny ಎಂಬ ತತ್ವವೊಂದು ಜೀವಶಾಸ್ತ್ರದ ಅಧ್ಯಯನದಲ್ಲಿ ಬರುತ್ತದೆ. ಅಂದರೆ, ಜೀವಿಗಳು ತಾವು ಯಾವ ಮಾರ್ಗವಾಗಿ ವಿಕಾಸ ಹೊಂದಿವೆಯೋ ಆ ಕ್ರಮವನ್ನು ತಮ್ಮ ಬೆಳವಣಿಗೆಯ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತವೆ ಮತ್ತು ಆ ವಿವಿಧ ಹಂತಗಳನ್ನು ಅನುಕರಿಸುವ ರೂಪ ತಾಳುತ್ತವೆ. ಕಶೇರುಕಗಳ ಸಸ್ತನಿ ವರ್ಗಕ್ಕೆ ಸೇರಿದ ಮನುಷ್ಯನ ಭ್ರೂಣವು ಪ್ರೋಟೋಜೋವಾ, ಸೀಲಂಟರೆಟಾ.... ಮುಂತಾದ ಪ್ರಾಣಿ ವರ್ಗಗಳ ರೂಪ-ಆಕಾರಗಳನ್ನು ಅಭಿನಯಿಸಿ ಆ ನಂತರ ಕಶೇರುಕಗಳ ಮೀನುಗಳು, ಕಪ್ಪೆ ಸಲಾಮಂಡರನಂತಹ ಉಭಯವಾಸಿಗಳು ಮತ್ತು ಉರಗಗಳು ಇವೆಲ್ಲವುಗಳ ರೂಪಾಭಿನಯ ನೀಡಿಯಾದ ಮೇಲೆ ಸಸ್ತನಿಗಳ ಗುಣಗಳನ್ನು ತೋರತೊಡಗುತ್ತವೆ. ಅದೂ ಹೇಗೆ? ಮೊದಲು ಕೆಳವರ್ಗದ ಸಸ್ತನಿಗಳ ಲಕ್ಷಣಗಳನ್ನು ಅಭಿನಯಿಸಿ ಆದ ಮೇಲೆ ಮಂಗ ನರವಾನರ-ಮನುಷ್ಯ ಪ್ರಭೇದಗಳು ಸೇರಿದ ಪ್ರೈಮೇಟ್ಸ್ ಎಂಬ ಗುಂಪಿನ ಮಂಗ ನರವಾನರಗಳ ಅಣಕು ಮಾಡಿ ಮುಗಿಸಿ-ಬೆಳವಣಿಗೆಯ ಕೊನೆಯ ತುದಿಯಲ್ಲಿ ಮನುಷ್ಯನ ಲಕ್ಷಣಗಳನ್ನು ತೋರತೊಡಗುತ್ತದೆ. ಈ ಪುನರ್ಜ್ಞಾಪಕ ತತ್ವವು (rceapitulation theory) ಮನುಷ್ಯನ ಹುಟ್ಟಿನ ನಂತರದ ಅವನ ಅವಸ್ಥಾಂತರಗಳಿಗೂ ಅನ್ವಯವಾಗುತ್ತದೆಯೇ ಎನ್ನುವ ಕುತೂಹಲದ ಪ್ರಶ್ನೆ ಮೂಡುತ್ತದೆ. ನನ್ನಲ್ಲಿ ಈ ಪ್ರಶ್ನೆ ಮೂಡಿದ್ದು ಮನುಷ್ಯನ ಮಾನಸಿಕ-ಭಾವ ಜಗತ್ತನ್ನು ಕುರಿತು.

ಈ ಪ್ರಶ್ನೆಯನ್ನು ನನಗೆ ಇನ್ನಷ್ಟು ಪ್ರಸ್ತುತಗೊಳಿಸಿದ್ದು ಅನಂತಮೂರ್ತಿಯವರ 'ಅಜ್ಜನ ಹೆಗಲ ಸುಕ್ಕುಗಳು' ಸಂಕಲನದ 'ಗುರುರಾಯ' ಎಂಬ ಪದ್ಯ. ಎಂ. ಎನ್. ರಾಯ್ ಅವರ ಅವಸ್ಥಾಂತರಗಳನ್ನು ಹೇಳುವ ಈ ಪದ್ಯ ಕುತೂಹಲಕಾರಿಯಾಗಿದೆ.

''ಸಂಪ್ರದಾಯಸ್ಥ ಮನೆ ತೊರೆದು, ದೇಶವಿದೇಶ ಅಲೆದು
ರಷ್ಯಾದಲ್ಲಿ, ಚೈನಾದಲ್ಲಿ ಪಾಠ ಕಲಿಸಿತು, ಕಲಿಸಿ
ಸ್ವದೇಶದಲ್ಲೂ ಕಲಿಸಕ್ಕೆಂತ ಬಂದ ಬಂದ ಮಹೋಪಾಧ್ಯಾಯ ರಾಯ್
ಈ ದರಿದ್ರ ದೇಶದ
ಗಾಂಧಿ ಮಂದೀನ್ನ ಕಂಡು
ಕ್ರಾಂತಿಯ ಶಿಸ್ತು, ಅದರ ಶುದ್ಧ ವ್ಯಾಕರಣ ಇವರು ಹೇಗೆ ಕಲಿತಾರು
ಅಂತರೇಗಿ, ಲೆನಿನ್ ಹತ್ತಿರ ಗೊಣಗಿ ಗಾಂಧಿ ಜತೆ ಜಗಳವಾಡಿ''–
''ಸಾಯೋ ಮುಂಚೆ ಹಾಸಿಗೆ ಹಿಡಿದಿದ್ದ ರಾಯ್
ತನ್ನ ಪಾಶ್ಚಿಮಾತ್ಯ ಹೆಂಡತಿ ಎಲೆನ್
ಸಂಪ್ರದಾಯಶೀಲಳಾದ ತನ್ನ ತಾಯಿ ಥರ ಸೀರೆ ಉಟ್ಟೇ
ತನ್ನ ಶುಶ್ರೂಷೆ ಮಾಡಬೇಕೂಂತ ಬಯಸಿದರಂತೆ.'' (ಗುರುರಾಯ)

ಮಾರ್ಕ್ಸ್‌ಗೆ ಅತ್ಯಂತ ಹತ್ತಿರವಾಗಿದ್ದ ಮನುಷ್ಯ ಕಂಬಳಿಹುಳ ಚಿಟ್ಟೆಯಾಗೋ ತರಹ ಪರಿವರ್ತನೆ ಹೊಂದಿ ತನಗೆ ಗಾಂಧಿಯೇ ಹತ್ತಿರದವನೆಂದು ಕಂಡುಕೊಂಡ. ಸರಳತೆಯನ್ನು ಅರಿತುಕೊಳ್ಳುತ್ತ ಬಂದ ರಾಯ್ ಕೊನೆಗೊಬ್ಬ ಋಷಿಯಾಗಿ ಬಿಟ್ಟ! ಕ್ರಾಂತಿಕಾರಿ ವರವರರಾವ್ ಸ್ಲೋಗನ್ ಕೂಗಿ ಕೂಗಿ ಒಡೆದ ಗಂಟಲಲ್ಲಿ ಸುಸ್ವನದ ಸತ್ಯ ನುಡಿಯುವುದನ್ನು, ಸಹಿಷ್ಣು ಮೌನದಲ್ಲಿ ಮಾಗುತ್ತ ನಿತ್ಯ ಆಗುವದನ್ನು, ನಿರ್ಮೋಹಿಯಾಗುವದನ್ನು, ಜೀವ ವರ್ತುಲದ ಚಲನಶೀಲ ಸಾತತ್ಯ ಧ್ಯಾನಿಸಿ ನಿಶ್ಚಲ ತತ್ವಿಯಾಗುವದನ್ನು ಕಲಿಯುತ್ತಿರುವಲ್ಲಿ ಕೂಡ ಬದಲಾವಣೆಯ ಮಾರ್ಗ ಸ್ಪಷ್ಟಗೊಳ್ಳುತ್ತದೆ. ಹಾಗೆಯೇ ಬೇಡನೊಬ್ಬ ಪಶ್ಚಾತ್ತಾಪದಲ್ಲಿ ಹುತ್ತುಗಟ್ಟಿ ವಾಲ್ಮೀಕಿಯಾಗುವ ಪ್ರಕ್ರಿಯೆಯ ಹಿಂದೆ;

ಹುಂಬ ಹಂಬಲದ ಕ್ರಾಂತಿ ನಿಶ್ಚಲ ನಿಷ್ಠೆಯಾಗಲು
ಕನ್ನೆಯ ಸ್ನೇಹ ಪ್ರೀತಿಯಾಗಿ ಮೊಳೆಯಲು
ಗರ್ಭ, ಹೃದಯ, ಶ್ವಾಸಕೋಶ, ಮೂತ್ರಪಿಂಡ
ಇತ್ಯಾದಿಗಳ ರಹಸ್ಯ ಕೆಲಸ
ಮುಖದ ದಿವ್ಯ ಕಾಂತಿಯಾಗಲು
ಮೌನಬೇಕು, ಏಕಾಗ್ರತೆ ಬೇಕು, ಸಂಯಮ ಬೇಕು
ಜೊತೆಗೇ
ಹೆಜ್ಜೆ ತಪ್ಪಿ ಮುಗ್ಗರಿಸಲೂ ಬೇಕು
ಪ್ರೀತಿಗೆ, ಸೃಷ್ಟಿಗೆ.

ಎಂಬ ಸಮನ್ವಯದ ದೃಷ್ಟಿ ತಾಳುವದರ ಹಿಂದೆ;

ಈ ಪ್ರಪಂಚದಲ್ಲಿ ಸಾಮಾಜಿಕ ವ್ಯವಸ್ಥೆ ಎಂದಿಗೂ ಪರಿಪೂರ್ಣವಾಗಲಾರದೆನ್ನುವ ನಿಲುವನ್ನು ತಲುಪುವದರ ಹಿಂದೆ ;

ರಾಯ್ ಗುರುರಾಯುನಾಗುವವರ ಗ್ರಹಿಕೆಯು ಹಿಂದೆ–

ಒಟ್ಟು ಸಂಕಲನದ ಬಹುತೇಕ ಪದ್ಯಗಳಲ್ಲಿ ಒಂದು ನಿಗೂಢತೆಯು ಬಗೆಗಿನ– ಒಂದು ರೀತಿಯು ಧಾರ್ಮಿಕವಾದ ತುಡಿತವನ್ನು ಕಾಣುವಂತಾಗುತ್ತದೆ.

ವಾಸ್ತವದ ಹಿಂದೆ ಇರಬಹುದಾದ ಸತ್ಯದ ದ್ವಂದ್ವ ಸ್ವರೂಪಗಳ dialectics ನ್ನು ತಮ್ಮ ಕೃತಿಗಳಲ್ಲೆಲ್ಲ ಹಿಡಿದುಕೊಡುತ್ತ ಬಂದ ಅನಂತಮೂರ್ತಿಯವರು ಕಾಣುವ ಈ ನೋಟಗಳು, ಯೇಟ್ಸ್‌ನನ್ನು ಐರ್‌ಲಂಡಿನ ಚ್ಯವನಋಷಿಯಾಗಿ ಕಾಣುವ ಅವರ ಮನೋಸ್ಥಿತಿ–ಇವು ಕೇವಲ ಅವರಲ್ಲಾದ ಬದಲಾವಣೆಗಳೆಂದು ಹೇಳಿ ಕೈಬಿಡಲಾಗದು. ಇದು ನನಗೆ ಒಟ್ಟು ಭಾರತೀಯ ಚಿಂತಕರ ಬೆಳವಣಿಗೆಯ ಒಂದು ಸಾಮಾನ್ಯ ಅವಸ್ಥಾಂತರವಾಗಿ ಕಾಣುತ್ತದೆ. ಲಂಕೇಶ್ ಇತ್ತೀಚೆಗೆ ಒಂದು ಕಡೆ ಹೇಳಿದ ಪ್ರತಿ ದಿನದ ಕೆಲಸದ ಆರಂಭದ ಮೊದಲು ಎಲ್ಲರೂ ಸೇರಿ ರಾಷ್ಟ್ರಗೀತೆಯನ್ನು ಹೇಳುವದರ ಮೂಲಕ ಇಡೀ ದಿನದ ಕೆಲಸಗಳ ಸಾರ್ಥಕತೆಗಾಗಿ ಶಕ್ತಿ ಪಡೆಯಬಹುದು ಎನ್ನುವ ಮಾತು ಬೇರೆ ರೀತಿಯದೆಂದು ಭಾವಿಸಬೇಕಾಗಿಲ್ಲ. ....ಒಂದು ಸಂಸ್ಕೃತಿ ತನ್ನ ಬೆಳವಣಿಗೆ– ವಿಕಾಸದ ಸಂದರ್ಭದಲ್ಲಿ ನಿರೂಪಿಸಿದ್ದಂಥ ಮನುಷ್ಯನ ಮಾನಸಿಕ ಸ್ಥಿತಿಯ ಅವಸ್ಥಾಂತರಗಳು ಮನುಷ್ಯನ ಜೀವನದ ಸಂದರ್ಭದಲ್ಲಿ ಪುನರಾವರ್ತನೆಗೊಳ್ಳುತ್ತವೆಯೋ ಎಂದು ಕೇಳಬೇಕೆನಿಸುತ್ತದೆ.

ಭಾರತೀಯ ಸಂಸ್ಕೃತಿಯ ಅಂತಿಮವಾದ ಸ್ಥಾಯೀಬೋಧನೆ ಆಧ್ಯಾತ್ಮದತ್ತಲಿನ ತುಡಿತವಾಗಿದೆ. ನಿಗೂಢತೆಯ ದರ್ಶನ, ನಿಸ್ಸಂಗತ್ವ–ಸರಳತೆ-ಬಟ್ಟೆಕಳಚುವದು– ಬಯಲಾಗುವದು ಇಂಥ ಸ್ಥಾಯೀ ನಿಲುವಿನ ಹಿನ್ನೆಲೆಯಲ್ಲಿ ಈ ಸಂಸ್ಕೃತಿ ಅನೇಕ ಅರ್ಥಪೂರ್ಣ ತುಮುಲಗಳನ್ನು ಒಳಗೊಳ್ಳುತ್ತ ಬಂದಿದೆ. ಆ ತುಮುಲಗಳನ್ನೆಲ್ಲ ಸಂಸ್ಕೃತೀಕರಣಕ್ಕೆ ಒಳಪಡಿಸುತ್ತ ಅವುಗಳ ಮೊನಚನ್ನು ತೆಗೆದುಹಾಕುತ್ತ ಮೂಡಿಬಂದದ್ದು ಈ ಸ್ಥಾಯೀರೂಪ. ಚಾರ್ವಾಕ ತತ್ವ, ಬುದ್ಧ ಮಹಾವೀರರ ಮಾನವೀಯ ಬಂಡಾಯಗಳು, ಅಲ್ಲಮ ಬಸವಾದಿ ವಚನಕಾರರ ಸಾಮಾಜಿಕ ಚಳುವಳಿ, ಭಕ್ತಿಪಂಥ ಚಳುವಳಿಯ ಜಾತಿಗಳ ಬಗೆಗಿನ ಅಪ್ರಾಮುಖ್ಯತೆಯ ಜಾತಿ ಭೇದ ವಿರೋಧೀ ನಿಲುವು, ಭಾರತದ ಮೇಲೆ ದಂಡೆತ್ತಿ ಬಂದ ಗ್ರೀಕ್, ಪರ್ಶಿಯನ್, ಅರಬ, ಯುರೋಪಿಯನ್ ಮುಂತಾದ ಜನಾಂಗಗಳ ಸಂಸ್ಕೃತಿಯ ವಿವಿಧ ಅಂಶಗಳು–ಇವೆಲ್ಲವೂ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಏರ್ಪಟ್ಟ ತುಮುಲಗಳು. ಆದರೆ ಇವೆಲ್ಲವುಗಳನ್ನೂ ಸಮುದ್ರದಂತೆ ತನ್ನಲ್ಲಿ ಸಮನ್ವಯ

ಗೊಳಿಸಿಕೊಂಡು ಧಾರ್ಮಿಕ ತುಡಿತದ ಸ್ಥಾಯಿತ್ವವನ್ನು ತೋರುತ್ತ ನಿಲ್ಲುತ್ತದೆ. ಈ ಸಂಸ್ಕೃತಿ.

ಇತಿಹಾಸಕಾರರು ಗುರುತಿಸಿರುವಂತೆ ಗ್ರೀಕ್ ನಾಗರಿಕತೆಯು ಸೌಂದರ್ಯ ಪ್ರಧಾನವಾದ ದೃಷ್ಟಿಕೋನವನ್ನಿರಿಸಿಕೊಂಡಿದೆಯಾದರೆ ಹಿಂದೂ ನಾಗರಿಕತೆಯು ಅಷ್ಟೇ ಸ್ಫುಟವಾದ ಧಾರ್ಮಿಕ ದೃಷ್ಟಿಕೋನದತ್ತ ಒಲಿದಿರುವದನ್ನು ಕಾಣುತ್ತೇವೆ. ತನ್ನ ಈ ಸ್ಥಾಯೀ ದೃಷ್ಟಿಕೋನದ ಹಿಂದೆ ಭಾರತೀಯ ನಾಗರಿಕತೆಯು ಅಳವಡಿಸಿಕೊಂಡಿರುವ ಲಕ್ಷಣಗಳೆಂದರೆ ಸ್ವೀಕಾರತತ್ವ ಮತ್ತು ಸರ್ವಸಂಗ್ರಾಹಕತ್ವ. ಮೋನಿಯರ್ ವಿಲಿಯಮ್ಸ್ ಎಂಬ ಇತಿಹಾಸಕಾರನು, ಮಾನವೀಯ ಸ್ವಭಾವ ಮತ್ತು ಪ್ರವೃತ್ತಿಗಳ ಅನಂತ ವೈವಿಧ್ಯಗಳೊಡನೆ ಅನಂತವಾದ ಹೊಂದಾಣಿಕೆ ಮಾಡಿಕೊಳ್ಳಬಲ್ಲ ಭಾರತೀಯ ಸಂಸ್ಕೃತಿಯ ಸಾಮರ್ಥ್ಯವನ್ನು ಗುರುತಿಸುತ್ತಾನೆ. ತತ್ವಜ್ಞಾನಿಗಳಿಗೆ ಉಚಿತವಾದ ಆಧ್ಯಾತ್ಮಿಕ ಹಾಗೂ ಅಮೂರ್ತ ಅಂಶಗಳು, ಈ ಲೋಕದ ಜನರಿಗೆ ಹಿತಾವಹವಾಗಿರುವ ವ್ಯಾವಹಾರಿಕತೆ ಮತ್ತು ವಾಸ್ತವಿಕತೆ, ಕವಿಯ ಭಾವನೆ ಹಾಗೂ ಕಲ್ಪನೆಗಳಿರುವವರಿಗೆ ಮನಸೆಳೆಯುವ ಸೌಂದರ್ಯೋಪಾಸನೆ ಮತ್ತು ವೈಭವಗಳು, ಏಕಾಂತಪ್ರಿಯ ಮತ್ತು ಶಾಂತ ಸ್ವಭಾವದವರಿಗೆ ಮನಸ್ಸನ್ನು ಹಿಡಿಯುವ ಚಿಂತನಶೀಲ ವಿಚಾರಗಳು– ಹೀಗೆ ವಿವಿಧ ಸ್ಥರಗಳ ವಿವಿಧ ಮನೋಭಾವಗಳ ಜನಗಳ ಆಕಾಂಕ್ಷೆಗಳಿಗೆ ಪ್ರತಿಸ್ಪಂದಿಸುವ ಅತಿ ವಿಶಾಲವಾದ ಕಂಪನ ಸಾಮರ್ಥ್ಯ ಈ ಸಂಸ್ಕೃತಿಗೆ ಒದಗಿದೆ. ಇದೆಲ್ಲವನ್ನೂ ನಾನು ಮೆಚ್ಚಿಕೆಯ ಭಾವದಿಂದಲೇ ಹೇಳುತ್ತಿದ್ದೇನೆ ಎಂದಲ್ಲ. ಇದರಿಂದ ಪರಿಪೂರ್ಣವಾದ ಸಾಮಾಜಿಕ ಬದಲಾವಣೆ ಸಾಧ್ಯವಾಗದಂತಹ – ಸಂಪೂರ್ಣ ಕ್ರಾಂತಿ ಸಾಧ್ಯವಾಗದಂತಹ ಒಂದು ಜಡತ್ವ ಕೂಡ ಇಲ್ಲಿ ಏರ್ಪಟ್ಟಿರುವದು ತಿಳಿದ ವಿಚಾರವೆ. ಒಂದೊಂದು ಸ್ಥರದ ಜನರೂ ಈ ಸಂಸ್ಕೃತಿ ತಮ್ಮ ಆಕಾಂಕ್ಷೆಗಳಿಗೆ ತೋರುವ ಪ್ರತಿಸ್ಪಂದನಕ್ಕಾಗಿ ಅಂಥ ಪ್ರತಿಸ್ಪಂದನೆ ತೋರುವ ಸಂಸ್ಕೃತಿಯ ಆ ಅಂಶವನ್ನಷ್ಟೇ ಅಲ್ಲದೇ ಈ ಸಂಸ್ಕೃತಿಯನ್ನು ಇಡಿಯಾಗಿ ಒಪ್ಪಿಕೊಂಡಿರುವಂತೆ ತೋರುತ್ತದೆ, ಉಳಿದ ಅಂಶಗಳು ಅವರಿಗೆ ಅಪ್ರಸ್ತುತ. ಆದರೆ ಅವುಗಳನ್ನು ವಿರೋಧಿಸಲಾರರು. ಯಾಕೆಂದರೆ, ತಾನು ಬಾಳಿ ಬದುಕಿದ ಈ ಸಂಸ್ಕೃತಿಯ ಉಳಿದ ಅಂಶಗಳು ನಾಶವಾಗಬೇಕಾದರೆ ಇಡೀ ಸಂಸ್ಕೃತಿಯೇ ನಾಶವಾಗಬೇಕು. ಆಗ ತನ್ನ ಮೆಚ್ಚಿನ ರಗ್ಗಿನ ತುಂಡು ಸುಟ್ಟು ಹೋಗುತ್ತದಲ್ಲ!


ಇಂಥ ಪರಿಸ್ಥಿತಿ ಇರುವದರಿಂದಲೇ ಭಾರತದಲ್ಲಿ ಏರ್ಪಟ್ಟ ಬಹುತೇಕ ಸಾಮಾಜಿಕ ಚಳುವಳಿಗಳು ಒಂದು ರೀತಿಯ ಧಾರ್ಮಿಕ ಸ್ವರೂಪದಲ್ಲಿಯೇ ಮೂಡಿಬಂದಿರ

ಬೇಕೆನಿಸುತ್ತದೆ. ಬುದ್ಧ, ಬಸವ, ದಾಸರುಗಳ ಭಕ್ತಿ ಪಂಥ, ಅಷ್ಟೇಕೆ ತುಂಬ ಇತ್ತೀಚಿಗಿನ ಗಾಂಧಿ ಮತ್ತು ವಿನೋಬಾರ ರಾಜಕೀಯ, ಸಾಮಾಜಿಕ ಚಳುವಳಿಗಳು ಧಾರ್ಮಿಕ ಆವರಣವನ್ನು ತೊಟ್ಟು ಬಂದಿರುವದನ್ನು ಕಾಣುತ್ತೇವೆ. ಗಾಂಧಿ ಫಕೀರನಾದ. ಚಿತ್ರಲೆಯತ್ತ ಸಾಗುತ್ತ ಬಯಲಿಗೆ ಚೈತನ್ಯ ತುಂಬುವ ಶಕ್ತಿ ಪಡೆದ. ಗುರಿಸಾಧನೆಯ ಹಿನ್ನೆಲೆಯಲ್ಲಿನ ಮಾರ್ಗದ ಪರಿಶುದ್ಧತೆಗಾಗಿ ಕಾಳಜಿ ವಹಿಸಿದ. ವಿನೋಬಾ ಸಂತನಾದ. ಪರಿವ್ರಾಜಕನಾದ. ಆದರೆ ಇವರಲ್ಲಿನ ವ್ಯತ್ಯಾಸವೂ ಮನನೀಯವಾದುದು. ಗಾಂಧಿಯ ಫಕೀರತ್ವ ಸತತ ಚಲನಶೀಲತೆಯದು, ಅದು ಧಾರ್ಮಿಕ ದೃಷ್ಟಿಕೋನವನ್ನು ಸಾಮಾಜಿಕ ನ್ಯಾಯದ ಜೆಂಕಿಯಲ್ಲಿ ಪಾಕಗೊಳಿಸುವ ರೀತಿಯದು. ಆದರೆ ವಿನೋಬಾ ಮುದುಕರಾಗುತ್ತ ಹೋದಂತೆ ಕಣ್ಣು ಕಿವಿ ಮಾತು ಕಳೆದುಕೊಳ್ಳುತ್ತ ಸಾಮಾಜಿಕ ನ್ಯಾಯದ ಪ್ರಖರತೆಗೆ ಕುರುಡಾಗುತ್ತ, ಬೋಳೆಯಾಗುತ್ತ, ಇಂದಿರಾಗಾಂಧಿಯಂಥವರನ್ನು ಆಶೀರ್ವದಿಸುತ್ತ ಹಳಕುಗಟ್ಟುತ್ತ ಹೋದರು. ಆದ್ದರಿಂದಲೇ ಗಾಂಧಿಯ ಸಾವಿನಿಂದ ನಮಗೆ ಒಂದು ಮೌಲ್ಯವನ್ನು ಕಳೆದುಕೊಂಡ ಅನುಭವವಾಗುತ್ತಿದ್ದರೆ ವಿನೋಬಾರ ಸಾವು ಒಬ್ಬ ವ್ಯಕ್ತಿಯನ್ನು ಕಳೆದುಕೊಂಡ ಭಾಸವನ್ನುಂಟು ಮಾಡುತ್ತದೆ. ಗಾಂಧಿಯ ಕೊಲೆ ಇಡೀ ಜನಾಂಗದ ಪ್ರಜ್ಞೆಯೊಳಗೆ ಚುಚ್ಚುವ ಮುಳ್ಳಾಗಿ ಉಳಿದುಕೊಂಡುಬಿಡುತ್ತದೆ.

ಇದೆಲ್ಲ ಹಿನ್ನೆಲೆಯಲ್ಲಿ ಇಂದಿನ ಮಠಗಳು ಮತ್ತು ಇತರ ಧಾರ್ಮಿಕ ಸಂಸ್ಥೆಗಳು ಸಮಾಜದಲ್ಲಿ ಅರ್ಥಪೂರ್ಣ ಅಸ್ತಿತ್ವವನ್ನು ಸಾಧಿಸಿಕೊಳ್ಳಬೇಕಾದರೆ_ ಅಪಾರವಾದ ತುಮುಲ-ಸಂಘರ್ಷಗಳ, ಸಂಕ್ರಮಣ ಸ್ಥಿತಿಯಲ್ಲಿರುವ ಈ ಯುಗದ ಮೌಲ್ಯಗಳು ಮೂಡಿಬರಲು ಅವು ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿದೆ. ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಬೇಕಾಗಿದೆ. ಇಂಥ ಕೆಲಸಗಳು ಯಾವದೇ ಧರ್ಮದ ಮೂಲಭೂತವಾದ ಕರ್ತವ್ಯಗಳೂ ಹೌದು. ಯಾಕಂದರೆ ಧರ್ಮ ಸಮಾಜದ ಮೌಲ್ಯಗಳನ್ನು ನಿರೂಪಿಸುತ್ತದೆ ಮತ್ತು ಜನತೆಗೆ ಬದುಕಿನ ಮಾರ್ಗ ಸೂಚಿಸುತ್ತದೆ. ಇಂಥ ಯಾವ ಚಟುವಟಿಕೆಗಳಲ್ಲಿ ತೊಡಗಿದ ಧರ್ಮವಾಗಲೀ ಧಾರ್ಮಿಕ ಸಂಸ್ಥೆಯಾಗಲೀ ಟೊಳ್ಳು ಹಿಡಿದ ಮರವಿದ್ದಂತೆ. ಅವು ಬಿದ್ದು ಹೋಗಲು ಕಾಯುತ್ತಿರುತ್ತವೆ. ಅಸ್ಪೃಶ್ಯತೆ, ಜಾತಿ ಭೇದ ಮುಂತಾದ ಸಾಮಾಜಿಕ ಕೆಡಕುಗಳ ನಿವಾರಣೆಗೆ ತೊಡಗಿಕೊಳ್ಳುವ ಮೂಲಕ ಅವು ಹೆಚ್ಚು ಅರ್ಥಪೂರ್ಣವಾಗಲು ಮತ್ತು ಸಮಾಜದಲ್ಲಿ ಪ್ರಯೋಜನಶೀಲವಾಗಿ ಉಳಿಯಲು ಸಾಧ್ಯವಾಗಬಹುದು. ದೇವರು-ಪೂಜೆ ಮುಂತಾದ ಅತ್ಯಂತ ವೈಯಕ್ತಿಕ ಕ್ರಿಯೆಗಳನ್ನು ವೈಭವೀಕರಣಗೊಳಿಸುತ್ತ ಸಾರ್ವಜನಿಕಗೊಳಿಸುತ್ತ ಹೋಗುವ ಧರ್ಮ

ಮತ್ತು ಧಾರ್ಮಿಕ ಸಂಸ್ಥೆಗಳು ನಿಕಾಸಕ್ಕೆ ಸಾಮಾಜಿಕ ಪರಿವರ್ತನೆಗೆ ಕುರುಡಾದವುಗಳು. ಅವರಿಗೆ ಮಠದ ಸುತ್ತಲೂ ಬದುಕುವ ಬರಿಮೈಯ ಜನರ ಬದುಕಿಗಿಂತಲೂ ಕೃಷ್ಣನ ಮೂರ್ತಿಗೆ ವಜ್ರದ ಕಿರೀಟ ಮುಖ್ಯವಾಗುತ್ತದೆ. ಇದು ಕೃಷ್ಣನ ಮೂರ್ತಿಗೆ ವಜ್ರದ ಕಿರೀಟ ಮಾಡಿಸಲೇಬಾರದು ಎನ್ನುವ ಮಾತಲ್ಲ. ಅಂಥ ಕ್ರಿಯೆಯನ್ನು ಸೌಂದರ್ಯೋಪಾಸನೆಯ ಒಂದು ಚಟುವಟಿಕೆಯಾಗಿಯೂ ನಾನು ಗ್ರಹಿಸಬಲ್ಲೆ. ಕೊನಾರ್ಕದ ಸೂರ್ಯದೇವಾಲಯವನ್ನು ಕಟ್ಟಿಸಿದವರನ್ನು ನಾನು ಖಂಡಿತ ಬಯ್ಯಲಾರೆ. ನಾನು ಎತ್ತುತ್ತಿರುವ ಪ್ರಶ್ನೆ ಮೂಲಭೂತವಾಗಿ ಪ್ರಾಮುಖ್ಯತೆಯದು. ಮಠದ ಸುತ್ತಲಿನ ಜನರೇ ಕೃಷ್ಣನಿಗೆ ವಜ್ರದ ಕಿರೀಟ ಮಾಡಿಸುವಷ್ಟು ಸಮೃದ್ಧರಾಗಿದ್ದರೆ ಅದು ತುಂಬ ಚೆನ್ನಾಗಿರುತ್ತಿತ್ತು. ಅವರನ್ನು ಸಮೃದ್ಧಗೊಳಿಸುವದು ಹೆಚ್ಚು ಪ್ರಾಮುಖ್ಯತೆಯ ಕೆಲಸ.

ಈ ಹಿನ್ನೆಲೆಯಲ್ಲಿ ತುಲನಾತ್ಮಕವಾಗಿ ಹೆಚ್ಚು ಸಾಮಾಜಿಕ ಪ್ರಯೋಜನಶೀಲತೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಧಾರ್ಮಿಕ ಸಂಸ್ಥೆಯೊಂದನ್ನು ನಾನು ಇತ್ತೀಚೆಗೆ ಕಂಡೆ. ಗ್ರಾಮೀಣ ಅಭಿವೃದ್ಧಿ ಸಂಘಟನೆಯೊಂದನ್ನು ಆರಂಭಿಸಿ ಅವರು ಸಾಮಾಜಿಕ ಅರಣ್ಯ ಸಂವರ್ಧನೆಯ ಆಂದೋಲನ ಆರಂಭಿಸಿದ್ದಾರೆ. ಆ ಮಠದ ಸುತ್ತಮುತ್ತಲಿನ ಬೋಳಾದ ಬೆಟ್ಟಗುಡ್ಡಗಳು ಕ್ರಮೇಣ ಹಸಿರಾಗುತ್ತಿವೆ. ಅಲ್ಲಿನ ಜನರಿಗೆ ಮರಗಳ ಮಹತ್ವ– ಅರಣ್ಯನಾಶದಿಂದ ಉಂಟಾಗುವ ಕೆಡುಕುಗಳನ್ನು ತಿಳಿಸುತ್ತಲೇ ಅವರಿಗೆ 'ಮರಗಳ ಪಟ್ಟಾ' ನೀಡುತ್ತ ಅವರ ಆರ್ಥಿಕ ಬದುಕಿನಲ್ಲಿ ಕೂಡ ಪರಿವರ್ತನೆಯ ಬೀಜ ಬಿತ್ತುತ್ತಿದ್ದಾರೆ. (ಬುದ್ಧ ಪ್ರತಿಯೊಬ್ಬನೂ ತನ್ನ ಜೀವಿತಕಾಲದಲ್ಲಿ ಒಂದು ಮರವನ್ನು ಬೆಳೆಸಬೇಕೆಂದು ಬೋಧಿಸಿದ್ದ). ಇದಲ್ಲದೇ ಇತ್ತೀಚೆಗೆ ಆ ಮಠವು ರೂಪಿಸಿರುವ ಇನ್ನೊಂದು ಸಾಮಾಜಿಕ ಆಂದೋಲನ ಪಾನನಿರೋಧ ಚಳುವಳಿ. ಬಡ ಕುಟುಂಬಗಳ ಬದುಕಿನಲ್ಲಿ ಇಂಥ ಚಳುವಳಿ ಅತ್ಯಂತ ಮಹತ್ವಪೂರ್ಣ ಘಟನೆಯಾಗಿದೆ. ಇಂಥ ಆಂದೋಲನಗಳನ್ನು ರೂಪಿಸುತ್ತ ರೂಪಿಸುತ್ತ ಈ ಧಾರ್ಮಿಕ ಸಂಸ್ಥೆಯು ಅತ್ಯಂತ ವ್ಯಾಪ್ತವಾದ ಮತ್ತು ಅತ್ಯಂತ ಮುಖ್ಯವಾದ, ಜಾತಿ ವೈಷಮ್ಯದ ಬೆಂಕಿ ಆರಿಸುವ, ಅಸ್ಪೃಶ್ಯತೆ ತೊಡೆದುಹಾಕುವ ಸಮಾನತೆ ಸಹೋದರ ಭಾವ ಬೆಳೆಸುವ, ಧರ್ಮವನ್ನು ಜಾತಿಗಳ ಸಂಕೋಲೆಯಿಂದ ಬಿಡಿಸುವ ಸಂಪೂರ್ಣ ಆಂದೋಲನವನ್ನು ಆರಂಭಿಸಲು ಸಾಧ್ಯವಾಗಲೆಂದು ಆಶಿಸುತ್ತೇನೆ.



ಹೊಸ ಪುಸ್ತಕಗಳು

ಅಜ್ಜನ ಹೆಗಲ ಸುಕ್ಕುಗಳು (ಕಾವ್ಯ)
ಲೇ : ಯು. ಆರ್. ಅನಂತಮೂರ್ತಿ
ಋಜುವಾತು ಪ್ರಕಾಶನ, 849. ಹೊಸಕಾಂತರಾಜ ಅರಸು ರಸ್ತೆ
ಕುವೆಂಪು ನಗರ ಮೈಸೂರು-23.
ಬೆಲೆ : ರೂ. **15/-**

ಭೂಮಿ ಬದುಕಿನ ಗಂಧ (ಕಾವ್ಯ)
ಲೇ : ಸತ್ಯನಾರಾಯಣರಾವ್ ಅಣತಿ
ಪರಿಸರ ಸಾಹಿತ್ಯ ಪ್ರಕಾಶನ ಶಿವಮೊಗ್ಗ
ಬೆಲೆ : ರೂ. **15/-**

ಪರಿವರ್ತನೆ (ಕಾವ್ಯ)
ಲೇ : ಮಹಾಂತೇಶ ಮಲ್ಲನಗೌಡರ
ಅನ್ನಪೂರ್ಣ ಅವಿನಾಶ್ ಪ್ರಕಾಶನ ನರೇಗಲ್-ಮಲ್ಲಾಪುರ
ಧಾರವಾಡ ಜಿಲ್ಲೆ.
ಬೆಲೆ : ರೂ. **12/-**

ಕೆಂಪು ಕೋಟೆಯ ಮೇಲೆ (ಕಾವ್ಯ)
ಲೇ : ಮಲ್ಲಿಕಾರ್ಜುನ ಬನ್ನಿ
ಪ್ರ : ಎಂ.ವಿ. ಬನ್ನಿ; ಸ್ಟೇಷನ್ ರೋಡ್ ಬಾಗಲಕೋಟೆ-587101
ಬೆಲೆ : ರೂ. **8/-**

ಅಂತರಾಳ (ಕಾವ್ಯ)
ಲೇ : ತಾಳ್ಯದ ವೇದಮೂರ್ತಿ
ಪ್ರ : ಎಂ.ಇ.ಎಸ್.; c/o ಅನ್ವೇಷಣೆ. 478, 11 ನೇ ಮೇನ್
ವಿಜಯನಗರ ಬೆಂಗಳೂರು-40
ಬೆಲೆ : ರೂ. **7/-**

ಮುಚ್ಚಿಡಲಾರೆ (ಕಾವ್ಯ)
ಲೇ : ಬಂದಗದ್ದೆ ರಾಧಾಕೃಷ್ಣ
ಪ್ರ : ಶೂದ್ರ ಪ್ರಕಾಶನ, ಎಸ್, ಜಿ. ಪಾಳ್ಯ, ಡಿ. ಆರ್. ಕಾಲೇಜು
ಬೆಂಗಳೂರು-29
ಬೆಲೆ : 8/-

ನಿಸರ್ಗ ಕನ್ಯೆ (ಕಾವ್ಯ)
ಲೇ : ದುರ್ಗಾಸುತೆ
ಪ್ರ : ಲೀಲಾ ಪ್ರಕಾಶನ, ನಂ. 483, 8 ನೇ ಮೇನ್,
2 ನೇ ಕ್ರಾಸ್ ವಿಜಯನಗರ ಬೆಂಗಳೂರು-40.
ಬೆಲೆ : ?

ಸವಾಲು (ಕಥೆಗಳು)
ಲೇ : ದುರ್ಗಾಸುತೆ
ಪ್ರ : ಲೀಲಾ ಪ್ರಕಾಶನ ಬೆಂಗಳೂರು-40
ಬೆಲೆ ; ರೂ. 8/-

ಜೀವ (ಕಾವ್ಯ)
ಲೇ : ಮಹಾಬಲಮೂರ್ತಿ ಕೊಡ್ಲೆಕೆರೆ
ಪ್ರ : ಮೈತ್ರಿ ಪ್ರಕಾಶನ, ಗೋಕರ್ಣ-581326
ಬೆಲೆ : ರೂ. 12/-

ನನ್ನ ಮುದ್ದು ನಾಯಿಮರಿ (ಮಕ್ಕಳ ಕವನಗಳು)
ಲೇ : ದುರ್ಗಾಸುತೆ
ಪ್ರ : ಲೀಲಾ ಪ್ರಕಾಶನ, ಬೆಂಗಳೂರು-40.

ಕಲಾವಿದ ಶಂಕರಪಾಟೀಲರು 'ಸಂವಾದ'ದ ಬಗ್ಗೆ ತುಂಬ ಪ್ರೀತಿ ಇಟ್ಟು ಕೊಂಡು, ಸಂವಾದದ ಬರುವ ವರ್ಷದ ಆರು ಸಂಚಿಕೆಗಳೂ (13 ರಿಂದ 18 ಸಂಚಿಕೆಗಳು) ಬೇರೆ ಬೇರೆ ಮುಖ ಪುಟಗಳೊಂದಿಗೆ ಬರಬೇಕೆಂದು ಆಸೆಪಟ್ಟು ನಮ್ಮೊಂದಿಗೆ ಆ ಬಗ್ಗೆ ಚರ್ಚಿಸಿದರು. ಎರಡು ವರ್ಷಗಳ ಕಾಲ ಪುಕ್ಕಟೆಯಾಗಿ ಸಂಚಿಕೆಗಳನ್ನು ಪಡೆದಿರುವ ವಾರ್ಷಿಕ ಚಂದಾದಾರರ ಸಂಖ್ಯೆ ಮತ್ತು ಉದ್ದರಿ ಆಜೀವ ಸದಸ್ಯರ ಪರಿಚಯು ಹೇಳಿ ಸಂವಾದದ ಆರ್ಥಿಕ ಸ್ಥಿತಿಯು ಬಗ್ಗೆ ತಿಳಿಸಿದೆವು. ಪಾಟೀಲರು ಮುಖಪುಟಗಳಿಂದ ಉಂಟಾಗುವ ಹೆಚ್ಚಿನ ಆರ್ಥಿಕ ಭಾರ ನಿವಾರಿಸುವ ಬಗ್ಗೆ ಹೇಳಿದಾಗ ಚಿತ್ರಗಳಿಗಾಗಿ ಅವರನ್ನೇ ಪೀಡಿಸಿದೆವು. ಅವರು ತಮ್ಮ ಅಮೂಲ್ಯವಾದ ಚಿತ್ರಸಂಗ್ರಹವನ್ನು ನಮ್ಮ ಕೈಗೇ ಕೊಟ್ಟರು. ಅದರಲ್ಲಿನ ಆರು ಚಿತ್ರಗಳು ಸಂವಾದದ ಮುಂದಿನ ಆರು ಸಂಚಿಕೆಗಳ ಮುಖಪುಟಗಳಲ್ಲಿ ಬರಲಿವೆ. ಇದನ್ನು ನೀವು ಧಾರಾವಾಹಿಯಾದ ಪುಟ್ಟ ಚಿತ್ರಪ್ರದರ್ಶನವಾಗಿ ಭಾವಿಸಬಹುದು.

ಈ ಚಿತ್ರಗಳೇನು ಹೇಳುತ್ತವೆ–ಈ ಚಿತ್ರಗಳ ಗೆರೆ-ಅವಕಾಶಗಳು ನಮ್ಮ ಭಾವ ಕೋಶವಾಗುವ ಬಗೆಯೇನು ಎಂಬುದರ ಬಗ್ಗೆ ಆಯಾ ಮುಖಪುಟದ ಚಿತ್ರ ಕುರಿತು ಆ ಸಂಚಿಕೆಯಲ್ಲಿ ಒಂದು ಟಿಪ್ಪಣಿ ಬರೆಯಬೇಕೆಂದುಕೊಂಡಿದ್ದೆವು. ಈ ಬಗೆಗಿನ ನಮ್ಮ ಶಕ್ತಿಯು ಮಿತಿಯು ಹಿನ್ನೆಲೆಯಲ್ಲಿ – ಈ ಆರೂ ಚಿತ್ರಗಳನ್ನು ಕುರಿತು ವಿಮರ್ಶಕರೊಬ್ಬರಿಂದ ಸಹೃದಯ ಅನುಭೂತಿಯು ಲೇಖನ ಪಡೆದು ಬರುವ ಸಂವಾದ ಒಂದರಲ್ಲಿ ಪ್ರಕಟಿಸಲಾಗುವದು. ಸಂವಾದದ ಬಗ್ಗೆ ಪ್ರೀತಿ ಇಟ್ಟುಕೊಂಡಿರುವ – ಚಿತ್ರಗಳನ್ನು ನೀಡಿದ ಗೆಳೆಯ ಶಂಕರಪಾಟೀಲ ಅವರಿಗೆ ಧನ್ಯವಾದಗಳನ್ನು ಸೂಚಿಸುತ್ತೇವೆ.

—ಸಂವಾದದ ಗೆಳೆಯರು

ಮುದ್ರಣ ಪ್ರಕಾಶನ ಹಾಗೂ ಸಂಪಾದನೆ : ಸಂವಾದ ಪ್ರಕಾಶನ
ಮಲ್ಲಾಡಿಹಳ್ಳಿ ಅಂಚೆ, ಚಿತ್ರದುರ್ಗ ಜಿಲ್ಲೆ-577531, ಇವರಿಗಾಗಿ

ಮುದ್ರಕರು :
ಶ್ರೀ ಮಾರುತಿ ಪ್ರಿಂಟಿಂಗ್ ಪ್ರೆಸ್,
ಚನ್ನಗಿರಿ. ಶಿವಮೊಗ್ಗ ಜಿಲ್ಲೆ.

ಈ ಸಂಕಲನದಲ್ಲಿ—